ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog :janashakthi.wordpress.com e-mail : js_weekly@yahoo.com


ಸಂಪುಟ 5 ಸಂಚಿಕೆ 18 ಮೇ 8, 2011 ರೂ. 5/- ಪುಟ 16

ಮೇ ದಿನದ ವಿಶೇಷ ಬರಹಗಳು




ಭ್ರಷ್ಟಾಚಾರ ಮತ್ತು ಪರ್ಯಾಯ

ಸಿವಿಲ್ ಸೊಸೈಟಿ ಎಂಬ ಹೆಸರಿನಲ್ಲಿ ರಾಜಕೀಯವಲ್ಲದ ಪರ್ಯಾಯ ಎಂಬುದು ಪ್ರತಿಪಕ್ಷಗಳ ಸ್ಥಾನ ಪಡೆಯಬಹುದು. ಆದರೆ ವ್ಯವಸ್ಥೆ ಬದಲಾಗದು. ಇಲ್ಲಿಯೇ ಬರುವುದು ಕಾರ್ಮಿಕ ವರ್ಗದ ಪರ್ಯಾಯದ ಪ್ರಶ್ನೆ.



ದುಡಿವವರ ಕಣ್ಣಿಂದ ಭ್ರಷ್ಟಾಚಾರ



.... ಭ್ರಷ್ಟಾಚಾರದ ನಿಜವಾದ ಮೂಲ ಬಂಡವಾಳಶಾಹಿಯೇ. ಲೈಸೆನ್ಸ್‌ಗಳಿಂದ ಪ್ರಯೋಜನ ಪಡೆದ ಕೈಗಾರಿಕೋದ್ಯಮಿಗಳು ರಾಜಕೀಯ ಮಂದಿಯೊಂದಿಗೆ ವಶೀಲಿ ಬಾಜಿ ನಡೆಸಲು.....

8

ಲೋಕಪಾಲ್ ಮಸೂದೆ ಮತ್ತು ಪರ್ಯಾಯ

.....ಯಾವ ಉತ್ತರದಾಯಿತ್ವವನ್ನು ಹೊಂದಿಲ್ಲದ ಒಂದು ಅಂಕೆ ಮೀರಿದ ವ್ಯವಸ್ಥೆಯಾಗಬೇಕೆ?....



2

ಭ್ರಷ್ಟಾಚಾರ : ಭಾರತೀಯ ಮಾಧ್ಯಮ ಬರೆಸಿದ್ದೆಷ್ಟು - ಮರೆಸಿದ್ದೆಷ್ಟು ?

....ಎಂದರೆ ಕಾರ್ಪೊರೇಟ್ ಕಂಪನಿಗಳಿಗೆ ಲಾಭ ಮಾಡಿಕೊಡುವ ನಿಟ್ಟಿನಲ್ಲಿ ರೂಪಿಸುವ ಸರ್ಕಾರಗಳ ಭ್ರಷ್ಟ ನೀತಿಗಳ ವಿರುದ್ಧ ಮಾಧ್ಯಮಗಳು ಎಂದೂ ಚಕಾರವೆತ್ತುವುದಿಲ್ಲ. ಉದಾ....

5





ಹಗರಣಗಳ ಸರಮಾಲೆ



ಬಿ.ಬಿ.ಎಂ.ಪಿ

ಕ್ರಿಮಿನಲ್ ದುರ್ಲಕ್ಷ್ಯ

ದಕ್ಷಿಣ ಕನ್ನಡ

ಅಲ್ಪಸಂಖ್ಯಾತರ ಮೇಲೆ ಹೆಚ್ಚಿದ ದಾಳಿ

ಜನ ಲೋಕಪಾಲ್ ಮಸೂದೆ : ಒಂದು ಪರ್ಯಾಯ ದೃಷ್ಟಿ



ಉನ್ನತ ಹಂತದಲ್ಲಿನ ಅಧಿಕಾರಸ್ಥರು ಮತ್ತು ಅಧಿಕಾರಿಗಳ ಭ್ರಷ್ಟಾಚಾರವನ್ನು ತಡೆಯಲು ಪರಿಣಾಮಕಾರಿಯಾದ 'ಲೋಕಪಾಲ್ ವ್ಯವಸ್ಥೆ ಬೇಕೆನ್ನುವುದು ಸರಿ. ಆದರೆ ಆ ವ್ಯವಸ್ಥೆಯು, ದೇಶದ ನ್ಯಾಯಾಂಗ, ಕೊನೆಗೆ ಜನಾಧಿಕಾರದ ಅಂಕೆಗೂ ಒಳಪಡದ, ಜನ ಸಮುದಾಯಕ್ಕೆ ಯಾವ ಉತ್ತರದಾಯಿತ್ವವನ್ನು ಹೊಂದಿಲ್ಲದ ಒಂದು ಅಂಕೆ ಮೀರಿದ ವ್ಯವಸ್ಥೆಯಾಗಬೇಕೇ? ಇದು ನಮ್ಮ ಮುಂದಿರುವ ಗಂಭೀರ ಪ್ರಶ್ನೆ. ಇದಕ್ಕೆ ಪರ್ಯಾಯವೇನು?

ಡಾ. ಕೆ.ಎನ್. ಪಣಿಕ್ಕರ್

ಭಾರತವನ್ನು ಸರ್ವವ್ಯಾಪಿಯಾಗಿ ಕಾಡುತ್ತಿರುವ ಭ್ರಷ್ಟಾಚಾರವನ್ನು ಎದುರಿಸಲು, 42 ವರ್ಷಗಳ ಹಿಂಜರಿಕೆ ಮತ್ತು ಅನಿಶ್ಚಿತತೆಯ ನಂತರ ಈಗ ಒಂದು ಸಾಂಸ್ಥಿಕ ರೂಪ ಪಡೆಯುತ್ತಿದೆಯೇನೋ ಅನ್ನಿಸುತ್ತಿದೆ.. ಬಹುಪಾಲು ದೊಡ್ಡ ದೊಡ್ಡ ನಗರಗಳಲ್ಲಿ ಸ್ವಯಂಪ್ರೇರಿತ ವ್ಯಾಪಕ ಬೆಂಬಲ ಪಡೆದ ಅಣ್ಣಾ ಹಜಾರೆಯವರ ಚಳುವಳಿ ದೀರ್ಘನಿದ್ರೆಯಲ್ಲಿದ್ದ ಪ್ರಭುತ್ವವನ್ನು ಎಬ್ಬಿಸಿದೆ ಎಂದು ಮೇಲ್ನೋಟಕ್ಕೆ ಕಾಣುತ್ತಿದೆ. ದೆಹಲಿಯ ಜಂತರ್ ಮಂತರ್‌ನಲ್ಲಿ ಅಣ್ಣಾ ಹಜಾರೆಯವರು 'ಸಾಯುವ ತನಕ ಉಪವಾಸ' ಕೂತ ಐದೇ ದಿನಗಳೊಳಗೆ ಕೇಂದ್ರದಲ್ಲಿ ಲೋಕಪಾಲ್ ಸಂಸ್ಥೆಯನ್ನು ಸ್ಥಾಪಿಸುವ ಸಲುವಾಗಿ ಒಂದು ಮಸೂದೆಯನ್ನು ಸಿದ್ಧಪಡಿಸಲು ಸಮಿತಿಯೊಂದನ್ನು ರಚಿಸಬೇಕೆಂಬ ಬೇಡಿಕೆಯನ್ನು ಭಾರತ ಸರ್ಕಾರ ಒಪ್ಪಿಕೊಂಡಿತು.

ಭಾರತ ಸರ್ಕಾರದ ಈ ಹಿಂದಿನ ನಡವಳಿಕೆಗೆ ಇದು ತೀರ ವಿಭಿನ್ನವಾಗಿದೆ. ಆಂಧ್ರಪ್ರದೇಶ ರಾಜ್ಯ ರಚನೆಗಾಗಿ ಪೊಟ್ಟಿ ಶ್ರೀರಾಮುಲು ತಮ್ಮ ನಿರಂತರ ಉಪವಾಸದ ಕೊನೆಯಲ್ಲಿ ಜೀವವನ್ನೇ ತೆರಬೇಕಾಯಿತೆಂಬುದನ್ನು ನೆನಪಿಸಿಕೊಳ್ಳಿ. ಹಾಗೂ, ಸಶಸ್ತ್ರ ಪಡೆಗಳ(ವಿಶೇಷಾಧಿಕಾರ) ಕಾಯಿದೆಯನ್ನು ತೆಗೆದುಹಾಕಿ ಎಂದು ಒತ್ತಾಯಿಸುತ್ತಾ ಕಳೆದ ಹತ್ತು ವರ್ಷಗಳಿಂದ ಉಪವಾಸ ಮಾಡುತ್ತಿರುವ ಇರೋಂ ಶರ್ಮಿಳಾಳನ್ನು ಮರೆಯಬೇಡಿ.

ಕೆಲವು ಮೂಲಭೂತ ಪ್ರಶ್ನೆಗಳು

ಹೀಗಿದ್ದಾಗ್ಯೂ, ಲೋಕಪಾಲ್ ಮಸೂದೆಯ ಕರಡನ್ನು ಸಿದ್ಧಪಡಿಸಲು ಸಮಿತಿಯನ್ನು ರಚಿಸಿದ ಈ ಬೆಳವಣಿಗೆಗಳು ಭಾರತದ ಪ್ರಜಾಪ್ರಭುತ್ವ ಕೆಲಸ ಮಾಡುತ್ತಿರುವ ರೀತಿಯ ಬಗೆಗೇ ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತದೆ. ಸಂಸತ್ತಿನಲ್ಲಿ ಈ ಮಸೂದೆಯನ್ನು ಮಂಡಿಸುವ ಮೊದಲೇ ಈ ಕೆಲವು ಪ್ರಶ್ನೆಗಳನ್ನು ತುರ್ತಾಗಿ ಗಮನಿಸಬೇಕಾಗುತ್ತದೆ.

ಸಮಿತಿಯ ರಚನೆ ಮತ್ತು ಅದು ಪರಾಮರ್ಶಿಸಬೇಕಾದ ವಿಷಯಗಳ ವ್ಯಾಪ್ತಿಯನ್ನು ನಿರ್ಧರಿಸುವಲ್ಲಿ ಅಣ್ಣಾ ಹಜಾರೆಯವರು ನಿರ್ಣಾಯಕ ಪಾತ್ರ ವಹಿಸುವಂತೆ ಕಾಣಿಸುತ್ತಿದೆ. ಅವರು 'ನಾಗರಿಕ ಸಮಾಜದ ಪ್ರತಿನಿಧಿಗಳನ್ನು' ಆಯ್ಕೆ ಮಾಡಿದರು ಮತ್ತು ಸರ್ಕಾರ ಅದನ್ನು ಒಪ್ಪಿಕೊಂಡಿತು. ಸಮಿತಿಯಲ್ಲಿ 'ನಾಗರಿಕ ಸಮಾಜದ ಪ್ರತಿನಿಧಿಗಳು' ಐವರು ಮತ್ತು ಸರ್ಕಾರವನ್ನು ಪ್ರತಿನಿಧಿಸಿ ಐವರು ಕೇಂದ್ರದ ಸಚಿವರು ಇದ್ದಾರೆ. ಈ ಬೆಳವಣಿಗೆಯನ್ನು ಸ್ವಾಗತಿಸಿದ ಪ್ರಧಾನ ಮಂತ್ರಿಗಳು 'ಸರ್ಕಾರ ಮತ್ತು ನಾಗರಿಕ ಸಮಾಜ ಒಂದಾಗುತ್ತಿರುವುದು ಪ್ರಜಾಪ್ರಭುತ್ವಕ್ಕೆ ಶುಭಸೂಚನೆ' ಎಂದರು. ಆದರೆ ಈ ಸಮಿತಿಯನ್ನು ರಚಿಸುವಾಗ ಯಾವುದೇ ಪ್ರಜಾಸತ್ತಾತ್ಮಕ ತತ್ವಗಳನ್ನು ಪಾಲಿಸಿಲ್ಲ ಎಂಬ ಅಂಶ ಎದ್ದು ಕಾಣುತ್ತದೆ. ಅಣ್ಣಾ ಹಜಾರೆಯವರು ನಾಗರಿಕ ಸಮಾಜದ ಪ್ರತಿನಿಧಿಗಳನ್ನು ತಮ್ಮ ಮನಸ್ಸಿಗೆ ಬಂದಂತೆ ಆರಿಸಿದ್ದರೆ ಅತ್ತ ಸರ್ಕಾರದಿಂದ ನೇಮಕಗೊಂಡವರು ಸಂಸತ್ತಿನ ವಿಭಿನ್ನ ರಾಜಕೀಯ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವವರಾಗಿಲ್ಲ.

ರಾಜಕೀಯದಿಂದ ದೂರ?!!

ಮಹಾರಾಷ್ಟ್ರದ ರಾಲೆಗಾಂವ್ ಸಿದ್ಧಿ ಹಳ್ಳಿಯಲ್ಲಿ ಮಾಡಿದ ತನ್ನ ಸಾಮಾಜಿಕ ಕೆಲಸದಿಂದಾಗಿ ಪಡೆದ ಗಣನೀಯ ಗೌರವ ಮತ್ತು ನೈತಿಕ ಬಲವನ್ನು ಮೆಗ್ಸಾಸೆ ಪ್ರಶಸ್ತಿ ವಿಜೇತ ಅಣ್ಣಾ ಹಜಾರೆಯವರು ಭ್ರಷ್ಟಾಚಾರ ವಿರೋಧಿ ಚಳುವಳಿಗೆ ಧಾರೆಯೆರೆದರು. ಆದರೆ ತಮ್ಮ ಬೇಡಿಕೆಗಳ ಈಡೇರಿಕೆಗೆ ಅವರು ಬಳಸಿದ ವಿಧಾನಗಳು ಹುಬ್ಬೇರಿಸುವಂತೆ ಮಾಡಿವೆ. ಬಹಳ ಜನರ ನಂಬಿಕೆಯೇನೆಂದರೆ, ಅವರು ನಡೆಸಿದ ಉಪವಾಸ ಸತ್ಯಾಗ್ರಹ ಮತ್ತು ನೀಡಿದ ಅಂತಿಮ ಎಚ್ಚರಿಕೆ ಬಲವಂತದ್ದಾಗಿತ್ತು ಹಾಗೂ ಅಂತಹ ತಂತ್ರಗಳು ಪ್ರಜಾಪ್ರಭುತ್ವಕ್ಕೆ ಶೋಭೆ ತರುವಂತಹುದಲ್ಲ ಎಂಬುದಾಗಿದೆ. ಅವರ ಕೆಲವು ಅನುಯಾಯಿಗಳು ಅವರನ್ನು ಗಾಂಧಿಗೆ ಹೋಲಿಸಿದ್ದನ್ನಂತೂ ಯಾರೂ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ ಏಕೆಂದರೆ ಇವರ ಚಿಂತನೆಗಳು ಮತ್ತು ವಿಧಾನಗಳು ಯಾವ ರೀತಿಯಲ್ಲೂ ಸಮರ್ಥನೆ ನೀಡುವುದಿಲ್ಲ. ಆದಾಗ್ಯೂ ಅವರ ಗಾಂಧೀವಾದಿ ಆಚರಣೆಗಳು ಸರ್ಕಾರ ಮತ್ತು ನಾಗರಿಕ ಸಮಾಜದಿಂದ ಅವರಿಗೆ ಮನ್ನಣೆ ಗಳಿಸಿಕೊಟ್ಟಿವೆ. ಅವರು ತಾನೊಬ್ಬ ರಾಜಕೀಯದಿಂದ ದೂರ ಇರುವವ ಎಂದು ಹೇಳಿಕೊಂಡಿದ್ದರೂ ಅವರಿಗೆ ರಾಜಕೀಯ ಮತ್ತು ರಾಜಕಾರಣಿಗಳ ಬಗ್ಗೆ ತೀವ್ರ ಅಪನಂಬಿಕೆ ಇದೆ.

ವಿರೋಧಾಭಾಸವೆಂದರೆ, ಭ್ರಷ್ಟಾಚಾರದ ಬೇನೆಯನ್ನು ಹೋಗಲಾಡಿಸಲು ಅವರು ರಾಜಕೀಯ ವ್ಯವಸ್ಥೆಯ ಸಹಾಯವನ್ನೇ ಪಡೆಯಬೇಕಾಯಿತು. ಅವರು ನೈತಿಕ ಹಾದಿಯನ್ನು ಆಯ್ಕೆ ಮಾಡಿಕೊಂಡಿದ್ದರೆ, ಭ್ರಷ್ಟಾಚಾರಕ್ಕೆ ಕಾರಣವಾದ ಸಾಮಾಜಿಕ ಪರಿಸ್ಥಿತಿಯ ಕುರಿತು ಮಾತನಾಡುತ್ತಿದ್ದರು. ಆದರೂ, ಕೆಲವು ನಾಗರಿಕ ಸಮಾಜದ ಕಾರ್ಯಕರ್ತರ ಬೆಂಬಲದಿಂದಾಗಿ ಹಾಗೂ ಒಂದು ವಿಭಾಗದ ಇಂಗ್ಲಿಷ್ ಮಾಧ್ಯಮದಿಂದ ದೇಶೋದ್ಧಾರಕ ಎಂದು ಬಿಂಬಿಸಲ್ಪಟ್ಟ ಅಣ್ಣಾ ತಮ್ಮ ನಿಜವಾದ ವ್ಯಕ್ತಿತ್ವಕ್ಕಿಂತ ಎತ್ತರಕ್ಕೆ ಬೆಳೆದದ್ದು ಸರ್ಕಾರದ ಆತ್ಮವಿಶ್ವಾಸವನ್ನು ಭಗ್ನಗೊಳಿಸಿದಂತೆ ಕಾಣುತ್ತದೆ.

ಎರಡನೇ ಸ್ವಾತಂತ್ರ್ಯ ಚಳುವಳಿ? !!

ಕೆಲವರು ಅವರ ಚಳುವಳಿಯನ್ನು ಎರಡನೇ ಸ್ವಾತಂತ್ರ್ಯ ಚಳುವಳಿ . ಎಂದು ಪುರುಷಸಿಂಹಗೊಳಿಸಿದರು. ಆದರೆ ಯಾವುದೇ ಪ್ರಾತಿನಿಧಿಕ ಗುಣವನ್ನೇ ಹೊಂದಿರದ 'ಕೆಲವೇ ಕೆಲವರು ತಾವು ಬಹುಮತವನ್ನು ಪ್ರತಿನಿಧಿಸುತ್ತೇವೆ ಎಂದು ಪ್ರತಿಪಾದಿಸಿದ್ದು' ಮೂಲತಃ ಪ್ರಜಾಪ್ರಭುತ್ವ ವಿರೋಧಿ ಎಂಬ ಅಂಶ ಸಾರ್ವಜನಿಕವಾಗಿ ಜನರ ಗಮನಕ್ಕೆ ಬಾರದೇ ಹೋದಂತಾಗಿದೆ. ರಾಜಕೀಯ ಗಣ್ಯರು ಮತ್ತು ಅಧಿಕಾರಶಾಹಿಗಳು ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿಕೊಂಡಿರುವ ಈ ಸಂದರ್ಭದಲ್ಲಿ ಭಾವನಾತ್ಮಕವಾದ ಹಾಗೂ ಯೋಚಿಸಲೂ ಸಾಧ್ಯವಾಗದ ರೀತಿಯಲ್ಲಿ ಅಣ್ಣಾ ಹಜಾರೆಯವರು ಪಡೆದ ಬೆಂಬಲ ಅರ್ಥವಾಗುವಂಥದ್ದೆ.

ಏನೇ ಆಗಲಿ, ಆ ಚಳುವಳಿಯ ನೈತಿಕ ತಿರುಳಿಗಿಂತಲೂ ಪ್ರಾರಂಭ ಮಾಡಿದ ಸಮಯವೇ ಅವರಿಗೆ ದೊರೆತ ಅಪಾರವಾದ ಜನಬೆಂಬಲಕ್ಕೆ ಮುಖ್ಯ ಕಾರಣ. ನಮ್ಮನ್ನಾಳುತ್ತಿರುವ ಗಣ್ಯರು ಅನುಸರಿಸುತ್ತಿರುವ ನವ ಉದಾರೀಕರಣ ನೀತಿಗಳ ಮೂಲಕ ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿಗಳ ವರ್ಗಾವಣೆ ಮತ್ತು ರಾಜಕೀಯ ಪೋಷಣೆಯಿಂದಾಗಿ ಖಾಸಗೀ ಹಿತಾಸಕ್ತಿಗಳಿಗೆ ನೀಡುತ್ತಿರುವ ಉತ್ತೇಜನ ಭ್ರಷ್ಟಾಚಾರದ ಸಾಧ್ಯತೆಯನ್ನು ತೆರೆದಿಟ್ಟಿದೆ. ಭಾರತೀಯ ಜನತಾ ಪಕ್ಷದ ನೇತೃತ್ವದ ಎನ್.ಡಿ.ಎ ಮತ್ತು ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಈ ಎರಡೂ ಗುಂಪಿನವರು

ಪುಟ 11 ಕ್ಕೆ

ಭ್ರಷ್ಟಾಚಾರ ಎಲ್ಲರನ್ನೂ ಒಂದುಗೂಡಿಸುವ ಒಂದು ದೊಡ್ಡ ಸಂಘಟಕನಾಗಿ ಗೋಚರಿಸುತ್ತಿದೆ. ಏಕೆಂದರೆ ಅಣ್ಣಾ ಹಜಾರೆಯವರ ಭ್ರಷ್ಟಾಚಾರವಿರೋಧಿ ವೇದಿಕೆಯು ಇತ್ತ ಮಾಜಿ ಪೋಲಿಸ್ ಅಧಿಕಾರಿ ಕಿರಣ್ ಬೇಡಿ ಮತ್ತು ಆರ್ಯ ಸಮಾಜ ಮುಖಂಡ ಸ್ವಾಮಿ ಅಗ್ನಿವೇಶರನ್ನು ಅತ್ತ ಕೋಮುವಾದಿಗಳಾದ ರಾಮ್ ಮಾಧವ್ ಹಾಗೂ ಧಾರ್ಮಿಕ ಗುತ್ತಿಗೆದಾರರಾದ ಬಾಬಾ ರಾಮ್‌ದೇವ್ ಮತ್ತು ಶ್ರೀ ರವಿಶಂಕರ್‌ರವರನ್ನು ಆಕರ್ಷಿಸಿ ಒಂದೇ ವೇದಿಕೆಯಡಿ ತಂದಿದೆ. ಕೋಮುವಾದಿಗಳು ಮತ್ತು ಬಲಪಂಥೀಯ ಜನರು ಮಾತ್ರ ಅವರ ಪರಿವಾರದಲ್ಲಿರದೆ, ಅಣ್ಣಾ ಅವರು ಗುಜರಾತ್ ಮಾದರಿ ಅಭಿವೃದ್ಧಿಯನ್ನು ಹೊಗಳುವುದರ ಮೂಲಕ ತಮ್ಮ ಹೃದಯಕ್ಕೆ ತೀರ ಹತ್ತಿರವಾದ ನೈತಿಕ ಸಮಸ್ಯೆಯನ್ನು ಕಡೆಗಣಿಸಿ ನರೇಂದ್ರ ಮೋದಿಯಂಥವರನ್ನೂ ಆಶೀರ್ವದಿಸಿದರು.

ಇದು ನಿಮಗೆ ಗೊತ್ತೆ?

ರಿಲೆಯನ್ಸ್ ಕಂಪನಿಯ ಆಸ್ತಿ ಪ್ರಮಾಣ 1980 ರಲ್ಲಿ 166.33 ಕೋಟಿಗಳು –1989–90 ರಲ್ಲಿ 3600.27 ಕೋಟಿ. 2010 ರಲ್ಲಿ ಮುಖೇನ ಅಂಬಾಶ್ ಅಂಬಾನಿ, 1.6 ಲಕ್ಷ ಕೋಟಿ, ಅನಿಲ್ ಅಂಬಾನಿ 1.4 ಲಕ್ಷ ಕೋಟಿ ರೂಪಾಯಿಗಳು

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಬೀಜ ಪೂರೈಸದ ಹೊಣೆಗೇಡಿ ಸರ್ಕಾರ


ಹತ್ತಿ ಬೀಜವನ್ನು ಸಮರ್ಪಕವಾಗಿ ಪೂರೈಸದ ರಾಜ್ಯ ಸರ್ಕಾರ ಬೀಜಕ್ಕಾಗಿ ಆಗ್ರಹಿಸಿದ ರೈತರ ಮೇಲೆ ಲಾಠಿಚಾರ್ಜು ಮಾಡಿದ್ದು ಖಂಡನೀಯ. ಗೊಬ್ಬರ ಬೀಜದ ಅಭಾವ ಸೃಷ್ಟಿಸಿ ಅದಕ್ಕಾಗಿ ನಿತ್ಯವೂ ರೈತರು ಪರದಾಡುವುದು, ಆಗ್ರಹಿಸಿದರೆ ಗೋಲಿಬಾರ್, ಲಾಠಿಚಾರ್ಜು ಮಾಡುವುದು ರಾಜ್ಯ ಬಿಜೆಪಿ ಸರ್ಕಾರದ ಪ್ರತಿ ವರ್ಷದ ಪರಿಪಾಠವಾಗಿದೆ. ಕಳೆದೆರಡು ವರುಷವೂ ಇದೇ ಸ್ಥಿತಿ ಎದುರಿಸಿದ್ದಾಗಲೂ ಈಗಿನ ಸ್ಥಿತಿ ಸುಧಾರಿಸಲಿಲ್ಲ ಎಂಬುದು ಗಹನವಾದ ಸಂಗತಿ. ರೈತರ ಹೆಸರಿನಲ್ಲಿ, ಹಸಿರು ಶಾಲು ಹೊದ್ದು ಪ್ರಮಾಣವಚನ ಸ್ವೀಕರಿಸುವುದು ರೈತಬಜೆಟ್‌ನ್ನು ಮಂಡಿಸಿದೆನೆಂದು ನಾಟಕೀಯ ಪೋಜು ನೀಡುವ ಮುಖ್ಯಮಂತ್ರಿ ಯಡ್ಯೂರಪ್ಪನವರ ಸರ್ಕಾರಕ್ಕೆ ತನ್ನ ಹೊಣೆಗೇಡಿತನ, ಕಾರ್ಪೊರೇಟ್ ಸಂಸ್ಥೆಗಳ ಸೇವೆ ಬಗ್ಗೆ ನಾಚಿಕೆಯಾಗಲೀ, ಸಾರ್ವಜನಿಕ ಅಳುಕು ಸಂವೇದನೆಯಾಗಲೀ ಇಲ್ಲವಾಗಿದೆ.

ಮೈಸೂರಿನ ರೈತರು 15 ದಿನಗಳಿಂದಲೂ ಬೀಜಕ್ಕಾಗಿ ಪರದಾಡುವಲ್ಲಿ ಕಾಳಸಂತೆ ವ್ಯಾಪಾರಿಗಳು ಮತ್ತು ಸರ್ಕಾರದ ನಡುವಿನ ಒಳ ಒಪ್ಪಂದವೂ ಒಂದು ಪ್ರಮುಖ ಕಾರಣವಾಗಿದೆ. ಹತ್ತಿಬೀಜ 450 ಗ್ರಾಂಗೆ ರೂ.600 ಇದ್ದದ್ದು ಕಾಳಸಂತೆಯಲ್ಲಿ ರೂ.1500 ಕ್ಕೆ ಕಣ್ಣೆದುರೇ ಮಾರಾಟವಾಗುತ್ತಿದ್ದರೂ ಕ್ರಮವನ್ನೇ ಕೈಗೊಳ್ಳದ ಸರ್ಕಾರದ ಉದ್ದೇಶ ಕಾಳದಂಧೆಗಾರರಿಗೆ ಮುಕ್ತ ಅವಕಾಶ ನೀಡಿರುವುದು ಕೈಮಿಲಾವಣೆಯನ್ನೇ ಸಾರುತ್ತದೆ. ಕಾಳಸಂತೆಯಲ್ಲಿ ಸಿಗುವ ಬೀಜ ಸರ್ಕಾರಿ ಸಂಸ್ಥೆಯಲ್ಲಿ ಸಿಗುತ್ತಿಲ್ಲವೇಕೆ?


ರಾಜ್ಯದಲ್ಲಿ ಭತ್ತ, ಮೆಕ್ಕೆಜೋಳ ಮತ್ತು ಹತ್ತಿ, ಸೂರ್ಯಕಾಂತಿ ಈ ಬಿತ್ತನೆಯ ಬೀಜಗಳಿಗೆ ಅತೀ ಹೆಚ್ಚಿನ ಬೇಡಿಕೆಯಿದೆ. ಈ ಬೇಡಿಕೆಯನ್ನು ಸರಿಯಾಗಿ ಅಂದಾಜಿಸುವಲ್ಲಿ ಅಥವಾ ಅದರಂತೆ ಪೂರೈಸುವಲ್ಲಿ ಸರ್ಕಾರ ವಿಫಲವಾಗಿದೆ, ನಿರ್ಲಕ್ಷಿಸಿದೆ. ಕಳೆದ ವರ್ಷಕ್ಕಿಂತ 'ಶೇ 25 ರಷ್ಟು' ಹೆಚ್ಚಿನ ಬೇಡಿಕೆ ಬರಬಹುದಾಗಿ ನಿರೀಕ್ಷಿಸಲಾಗಿತ್ತು ಎಂದು ಜಿಲ್ಲಾ ಉಸ್ತುವಾರಿ ಸಚಿವ ರಾಮದಾಸ್‌ರವರು 1 ಲಕ್ಷ 32 ಸಾವಿರ ಪಾಕೆಟ್‌ಗಳಿಗೆ ಬೇಡಿಕೆ ಸಲ್ಲಿಸಿದ್ದರೂ, ಮಾರುಕಟ್ಟೆಗೆ ಬಿಡುಗಡೆಯಾದದ್ದು 29 ಸಾವಿರ ಮಾತ್ರವೆನ್ನುವುದು ಇಲಾಖೆಯ ವೈಫಲ್ಯಕ್ಕೆ ಹಿಡಿದ ಕನ್ನಡಿ. ಕೇಂದ್ರದತ್ತ ಬೆಟ್ಟು ಮಾಡುವ ಅವರು ತನ್ನ ವೈಫಲ್ಯವನ್ನು ಇನ್ನೊಬ್ಬರ ಹೆಗಲಿಗೆ ವರ್ಗಾಯಿಸುವುದು ಬೇಜವಾಬ್ದಾರಿತನದ ಪರಮಾವಧಿಯಾಗಿದೆ. ರಾಜ್ಯ ಸರ್ಕಾರ ಬೇಡಿಕೆ ಮಂಡಿಸಿ, ಸಕಾಲದಲ್ಲಿ ಪಡೆದು, ಸಮರ್ಪಕವಾಗಿ ಪೂರೈಸುವಲ್ಲಿ ಪ್ರಜ್ಞಾಪೂರ್ವಕ ನಿರ್ಲಕ್ಷ್ಯ ತೋರಿದೆ.

ರಾಜ್ಯದಲ್ಲಿ ಅಧಿಕಾರದ ಕುರ್ಚಿಗಾಗಿ ಎಲ್ಲಾ ಅನೈತಿಕ ಅಕ್ರಮ ಮಾರ್ಗ ಹಿಡಿದು ಸದಾ ಭಿನ್ನಮತ ಬೀದಿ ಜಗಳದಲ್ಲಿ ನಿರತವಾಗಿ ದೆಹಲಿ ಯಾತ್ರೆ ನಡೆಸುವ ಮುಖ್ಯಮಂತ್ರಿಗಳಿಗೆ ಆಡಳಿತ ನಡೆಸುವುದಕ್ಕೆ ಪುರುಸೊತ್ತೇ ಇಲ್ಲವಾಗಿದೆ. ವೀರಶೈವ ಜಾತಿ ಸಮ್ಮೇಳನದಲ್ಲಿ ಮೂರು ದಿನಗಳ ಕಾಲ ಕಳೆದ ಮುಖ್ಯಮಂತ್ರಿ ಮೂವತ್ತು ನಿಮಿಷಗಳನ್ನು ರೈತರ ವಿಷಯಗಳಿಗೆ ಗಮನಹರಿಸಿದ್ದರೆ ಸ್ಥಿತಿ ಎಷ್ಟೋ ಸುಧಾರಿಸುತ್ತಿತ್ತು. ಇಂತಹುದೇ ಪರಿಪಾಠವನ್ನು ಕೃಷಿಮಂತ್ರಿಯೂ ಪಾಲಿಸುತ್ತಿದ್ದು ಸಚಿವ ಉಮೇಶ್ ಕತ್ತಿಯವರಿಗೆ ಬೆಳಗಾವಿ ರಾಜಕೀಯವೇ ಪ್ರಧಾನ ಹೊರತು ಇಲಾಖೆಯ ಪ್ರಶ್ನೆಗಳಲ್ಲ. ಹೀಗಿರುವಾಗ ಕೇವಲ ಜಿಲ್ಲಾ ಆಡಳಿತವನ್ನೇ ಮಂತ್ರಿಗಳು ತೋರಿಸುವುದು

ಪುಟ 14ಕ್ಕೆ



ಕೃಪೆ : ಪ್ರಜಾವಾಣಿ



ಸರಿದ ಬಾಬಾ ಸರಿಯದ ತೆರೆ

ಅಸ್ತಂಗತರೆನ್ನಿ, ಆತ್ಮ ಪರಮಾತ್ಮನಲ್ಲಿ ಸೇರಿತು ಎಂದಾದರೂ ಹೇಳಿ ಅದೇನಿದ್ದರೂ ಎಲ್ಲರಂತೆ ಒದಗುವ ಸಾವಿಗೆ ಆಧ್ಯಾತ್ಮದ ಲೇಪವಷ್ಟೆ ತಾಯಿ ಗರ್ಭದಿಂದ, ಈ ಭೂಮಿಯಲ್ಲಿ ಹುಟ್ಟಿದ ಎಲ್ಲರೂ, ಎಲ್ಲವೂ ಒಂದು ದಿನ ಸಾಯಲೇಬೇಕು. ಚೇತನ ಕಳೆದುಕೊಂಡು ದ್ರವ್ಯರೂಪದಲ್ಲಿ ಮಣ್ಣಲ್ಲಿ ಮಣ್ಣಾಗಿ ರೂಪಾಂತರ ಹೊಂದಲೇಬೇಕು. 'ದೇವಮಾನವ' 'ಪವಾಡಪುರುಷ', 'ನಡೆದಾಡುವ ದೇವರು' ಹೀಗೆಲ್ಲಾ ಕರೆಸಿಕೊಂಡಿದ್ದ ಪುಟ್ಟಪರ್ತಿಯ ಸತ್ಯಸಾಯಿ ಬಾಬಾ ಸಾವನ್ನು ಜಯಿಸಲಾದರೂ ಹೇಗೆ ಸಾಧ್ಯ? ಹಲವು ದಿನಗಳ ವೈದ್ಯಕೀಯ ತಾಂತ್ರಿಕ ನೆರವಿನ ಮೂಲಕ, ಬದುಕುಳಿಯಲು ಹೋರಾಟ ನಡೆಸಿದ್ದು ಎಲ್ಲಾ ಸಾಮಾನ್ಯ ಮನುಷ್ಯರಂತೆಯೇ. 'ತನ್ನ ಮಗನನ್ನು ಬದುಕಿಸಿಕೊಡು' ಅಂತಾ ಬುದ್ಧನಲ್ಲಿಗೆ ಬಂದ ತಾಯಿಗೆ ಬುದ್ಧ ಹೇಳಿದ್ದು ಅದೇ ತಾನೆ? 'ಸಾವಿಲ್ಲದ ಮನೆಯ ಸಾಸಿವೆ ತಾ' ಎಂದು. ಹಂಬಲಿಸಿ ಅಲೆದ ಆ ಕರುಳಿಗೆ ಸಾವಿಲ್ಲದ ಮನೆಯ ಸಾಸಿವೆ ಸಿಕ್ಕಿತಾದರೂ ಹೇಗೆ?



ಪವಾಡ V/s ವಿಚಾರವಾದ

1980 ರ ದಶಕ ಸಾಯಿಬಾಬಾ ಗಾಳಿಯಲ್ಲಿ ಕೈಯ್ಯಾಡಿಸುವ ಮೂಲಕ ಬೂದಿ, ವಾಚ್, ಉಂಗುರ ಇತ್ಯಾದಿ ವಸ್ತುಗಳನ್ನು ಭಕ್ತರಿಗೆ ಉದುರಿಸುತ್ತಾ 'ಪವಾಡ ಪುರುಷ'ರೆಂದು ಸಾರ್ವಜನಿಕವಾಗಿ ಜನಪ್ರಿಯವಾದಾಗ ಪ್ರೊ.ಕೊವೂರು, ಡಾ॥ ಹೆಚ್. ನರಸಿಂಹಯ್ಯ ಮುಂತಾದ ವಿಚಾರವಾದಿಗಳು ಅದಕ್ಕೆ ಸವಾಲು ಎಸೆದದ್ದು, ಹಾಗೆ ಪ್ರಶ್ನಿಸಿದ ಡಾ. ಹೆಚ್ ನರಸಿಂಹಯ್ಯನವರನ್ನು ಮುಗಿಸಲು ಗೂಂಡಾಪಡೆ ಯತ್ನಿಸಿದ್ದು, ಆದರೂ ಪ್ರಗತಿಪರರು ಅದನ್ನು ಧೈರ್ಯವಾಗಿ ಎದುರಿಸಿದ್ದು, ಈ ಸನ್ನಿವೇಶ ವೈಜ್ಞಾನಿಕ ಮನೋಭಾವ ವಿಸ್ತರಿಸಲು ಅವಕಾಶ ಕಲ್ಪಿಸಿದ್ದು ಈಗ ಇತಿಹಾಸ.

ಬಂಡವಾಳದ ನಂಟು

ಬದುಕಿನಲ್ಲಿ ಬಳಲಿದ, ಕನಲಿದ, ಆಶಾಹೀನರ ಬಹುದೊಡ್ಡ ದಂಡೇ ಬಾಬಾರಲ್ಲಿಗೆ ಭಕ್ತರಾಗಿ ಅಣಿನೆರೆದರು. ಅವರು ಇಹಲೋಕದ ಕಷ್ಟಗಳಿಗೆ ಪರಿಹಾರ ಬಯಸಿ ಬಂದವರು, ಅಲ್ಲೇನು ಸಿಕ್ಕಿತು? ಸಿಕ್ಕಿತು? ಆದರೆ ಅವರಿಗೆ ಪರಲೋಕದ ಸುಖ ತೋರಿಸಲಾಯಿತು. ಇಂತಹವರ ಜೊತೆ ರಾಜಕಾರಣಿಗಳು, ಉದ್ಯಮಿಗಳು, ಅಧಿಕಾರಿಗಳು ಇತ್ಯಾದಿಗಳ 'ತೋರುಂಬ ಲಾಭಖೋರರು' ಇದ್ದರು. ಬಾಬಾ ಅನಾರೋಗ್ಯದ ಹಾಸಿಗೆ ಹಿಡಿದಾಗ ಮುಗ್ಧ ಭಕ್ತರಿಗಿಂತ ಅತೀ ಹೆಚ್ಚು ಆತಂಕಿತರಾದವರು ಅವರೇ! ಮಾಧ್ಯಮಗಳೇ ವರದಿ ಮಾಡಿರುವಂತೆ ಆಶ್ರಮದ ಆಸ್ತಿ 1 ಲಕ್ಷದ 30 ಸಾವಿರ ಕೋಟಿ ರೂಪಾಯಿಗಳು! ಅದರ ಅತೀ ಆಪ್ತ ವಲಯದಲ್ಲಿದ್ದವರೇ ಅಲ್ಲಿನ ಐಶ್ವರ್ಯವನ್ನು ಮನಬಂದಂತೆ ಎತ್ತಿ ಒಡಿದರಂತೆ! ಈಗಲೂ ಆಶ್ರಮದ ಮುಖ್ಯ ವಾರಸುದಾರಿಕೆಯ ಪ್ರಶ್ನೆ ತೀವ್ರ ವಿವಾಧ, ಘರ್ಷಣೆಗೆ ಕಾರಣವಾಗಿದೆ. ಬಹುಶಃ ಇಲ್ಲಿನ ಅಶಂತ್ರ ಸ್ಥಿತಿ ಹೂಡಿಕೆದಾರರಿಗೆ ಆತಂಕಕ್ಕೆ ಕಾರಣವಾಗಬಾರದೆಂದೋ ಆಶ್ರಮದ ಬಗೆಗಿನ ಗೌರವ ಹಾಳಾಗಬಾರದೆಂದೇ ಏನೋ ಮಾಧ್ಯಮಗಳು ತೆರೆಹಾಕಿಬಿಟ್ಟಿವೆ. ನಿಜ ಸೂತಕದ ಸಂದರ್ಭದಲ್ಲಿ ಕಳೆಯಲು ಬೆಳಕಿಗಾಗಿ ಕಾಯಬೇಕಿದೆ.

ಕಳಚಿಕೊಂಡ ಪರಿಣಾಮ

1980 ರ ದಶಕ ಎಡಪಂಥೀಯ, ಪ್ರಗತಿಪರ ಜನಚಳುವಳಿ ಅದರೊಂದಿಗೆ ಬೆಳೆದು ಬೆಸೆದುಕೊಂಡಿದ್ದ ಸಾಹಿತ್ಯ ಚಳುವಳಿ ವೈಚಾರಿಕತೆ, ವೈಜ್ಞಾನಿಕ ಮನೋಭಾವ 'ಪವಾಡಪುರುಷರು' ವಿಶ್ರಾಂತಿ ಪಡೆಯುವಂತೆ ಆದದ್ದು ನಿಜ. ಹೀಗೆ ಮ್ಲಾನವಾಗಿದ್ದ ಬಾಬಾ 90ರ ದಶಕದಲ್ಲಿ ಮತ್ತೆ ಬೆಳಕಿಗೆ ಬಂದಿದ್ದು ಉಚಿತ ಆಸ್ಪತ್ರೆ, ಶಿಕ್ಷಣ, ಆಂಧ್ರದಾದ್ಯಂತ ಕುಡಿವ ನೀರು ಪೂರೈಕೆಯಂತಹ ಭೌತಿಕ ಸಾಮಾಜಿಕ ಕಲ್ಯಾಣದ ಕಾರ್ಯಕ್ರಮದ ಮೂಲಕ ಬಾಬಾರವರ ಈ ಕೆಲಸ ಮೆಚ್ಚದವರಿಲ್ಲ. ಆದರೆ ಇದನ್ನು ಹೊಗಳುವಾಗಲೇ ಇನ್ನೊಂದು ಸತ್ಯವನ್ನು ಮರೆಯುವುದಲ್ಲ. ಅದೆಂದರೆ ನಾಗರೀಕರಿಗೆ ನೀರು, ಶಿಕ್ಷಣ, ಆರೋಗ್ಯ ನೀಡಬೇಕಿದ್ದ ಹೊಣೆಗಾರಿಕೆಯುಳ್ಳ ಸರ್ಕಾರ ಕೈ ಝಾಡಿಸಿಕೊಂಡು ಜನರನ್ನು ದಿಕ್ಕೇಡಿಗಳನ್ನಾಗಿಸಿದ್ದು ಮಹಾ ಅಪರಾಧ. ಈ ರಂಗಗಳ ಜವಾಬ್ದಾರಿಯಿಂದ ಹೊರಬರಬೇಕೆಂಬುದು ಸಾಲ ಕೊಟ್ಟ ವಿಶ್ವ ಹಣಕಾಸು ಸಂಸ್ಥೆಗಳ ಆಣತಿ. ಜನರ ಖರ್ಚಿನಲ್ಲೇ ಅವುಗಳನ್ನು ಖರೀದಿಸಬೇಕೆಂಬ ಉದಾರೀಕರಣ ಅರ್ಥಶಾಸ್ತ್ರದ ಪರಿಣಾಮವಿದು. ಇಂತಹ ಸ್ಥಿತಿಯಲ್ಲಿ ಬಾಬಾಗಳಿಗೂ ಒಂದು 'ಮಹತ್ವದ ಕೆಲಸ'! ಸಾಯುವವನಿಗೆ ಒಂದು ಗುಟುಕು ಗಂಜಿ ಬಿಟ್ಟಂತೆ.

ಸಂಘರ್ಷ ಸದಾ

ಇಂದು ಸಾಯಿಬಾಬಾ ಇಲ್ಲವಾಗಿರಬಹುದು. ಆದರೆ ಇಂದು ಸಾವಿರಾರು 'ಬಾಬಾ'ಗಳು ನಮ್ಮೆದುರಿದ್ದಾರೆ. ಸನ್ನಿವೇಶವೂ ಬದಲಾಗಿದೆ. ಉದಾರೀಕರಣ, ಕೋಮುವಾದದ ಬೆಳವಣಿಗೆ ಹೆಚ್ಚಿಸಿದ ಮೌಢ್ಯತೆ, ವೈಚಾರಿಕ ದಣಿವು ಅಂಧಶ್ರದ್ಧೆಗಳನ್ನು ಉಕ್ಕಿಸುತ್ತಿದೆ. ಇದು ವಿಚಾರವಂತರಿಗೆ ಗಂಭೀರ ಸವಾಲು. ಪ್ರಗತಿಪರರಿಗೆ ಅಪಾರ ಕೆಲಸ. ಈ ಅಸಮಾನತೆಯ ವ್ಯವಸ್ಥೆ ಇರುವವರೆಗೂ ನಿತ್ಯ ನಿರಂತರ ಸಂಘರ್ಷ.

ಅಂದಹಾಗೆ, ಮತ್ತೆ 'ಬಾಬಾ ಕಾವೇರಿ ನದಿ ತೀರದಲ್ಲಿ ಹುಟ್ಟಿಬರುತ್ತಾನೆ' ಎಂದು ಎಲ್ಲೆಡೆಗಳಲ್ಲಿ ಮಾಧ್ಯಮಗಳು ಪ್ರಸಾರಿಸಿರುವುದು ವಿಚಿತ್ರ, ವ್ಯಂಗ್ಯ. ಹುಟ್ಟುಬರಲು ಮನುಷ್ಯನೇನು ಹುಲ್ಲು ಬೀಜವಲ್ಲ. ಅಂತಹ ಪ್ರಚಾರಗಳ ಹಿಂದೆ ಗುಪ್ತ ಅಜೆಂಡಾಗಳು ಇಲ್ಲದಿಲ್ಲ.

ಸಾಯಿಬಾಬಾಗೆ ವಿದಾಯ ಹೇಳುವಾಗಲೇ ಅವರು ಸರ್ವಧರ್ಮಗಳ ಸಮನ್ವಯತೆ, ಸೌಹಾರ್ದ ಬಯಸಿದರು. ಈ ಅಂಶದಿಂದಾಗಿ ಕೋಮುವಾದಿಗಳೊಂದಿಗೆ ಲೀನವಾಗಲಿಲ್ಲ ಎಂಬುದು ಗಮನಿಸಬೇಕು.



ಬಿಬಿಎಂಪಿ ಯ ಭ್ರಷ್ಟತೆ ದಿವ್ಯ ಬೇಜವಾಬ್ದಾರಿಯಿಂದಾಗಿ ಬೆಂಗಳೂರಿನಲ್ಲಿ ಮಳೆ ಬಿದ್ದಾಗಲೆಲ್ಲಾ ಒಂದಷ್ಟು ಜನರ ಪ್ರಾಣಹಾನಿ ಆಗುವುದು ಅಂತಾದರೆ
ಇಲ್ಲಿ ಮನುಷ್ಯ ಜೀವಕ್ಕೆ ಇರುವ ಬೆಲೆ ಏನು?

ಬಿಬಿಎಂಪಿಯ ಕೊಲೆಪಾತಕ ದುರ್ಲಕ್ಷ್ಯ

ಮುಗ್ಧ ಜೀವಗಳ ಬಲಿ

▪ ಆರ್.ಕೆ.

ಇಲ್ಲಿ ನಡೆದಿರುವ ಈ ದುರಂತಮಯ ಘಟನಾವಳಿಗಳು ಸಾವು ನೋವುಗಳನ್ನು ನೋಡಿ. ಇದನ್ನು ನಿರ್ಲಕ್ಷ್ಯ, ತಾತ್ಸಾರ, ಅದಕ್ಷತೆ...ಅಂತ ಹೇಳಿ ಅಷ್ಟಕ್ಕೆ ಬಿಡಲಾಗುತ್ತದೆಯೇ? ಇದೊಂದು ಕೊಲೆಪಾತಕ ದುರ್ಲಕ್ಷ್ಯ..ಹೀನಾಯ ಅಪರಾಧ. ಎಷ್ಟು ಅಮಾಯಕ ಜೀವಗಳು ಅನ್ಯಾಯವಾಗಿ ಬಲಿಯಾಗಿ ಹೋದವು.

ಕಳೆದ ವಾರದಲ್ಲಿ ಬೆಂಗಳೂರು ನಗರದಲ್ಲಿ ಸುರಿದ ಮಳೆಗೆ 5 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇವೆಲ್ಲಾ ಅನಿರೀಕ್ಷಿತ ಆಕಸ್ಮಿಕ ಅಪಘಾತಗಳಾದರೆ ಅದು ಬೇರೆ ವಿಷಯ. ಈ ಒಂದೊಂದು ಪ್ರಕರಣಗಳನ್ನು ನೋಡಿ.

ಬಿದ್ದದ್ದು ಸ್ವಾತಂತ್ರ್ಯ ಉದ್ಯಾನದ ಗೋಡೆಯಲ್ಲ ಹಳೆ ಜೈಲಿನ ಲೊಡೆದ್ದು ಹೋಗಿದ್ದ ಗೋಡೆ

ಮಾಧ್ಯಮಗಳಲ್ಲಿ ಸ್ವಾತಂತ್ರ್ಯ ಪಾರ್ಕ್ ಗೋಡೆ ಕುಸಿದು ಶಿವಮೊಗ್ಗ ಮೂಲದ 38 ವರ್ಷ ಇಂಜಿನಿಯರ್ ಒಬ್ಬರು ಪ್ರಾಣ ಕಳೆದು ಕೊಂಡಿರುವುದಾಗಿ ವರದಿಯಾಗಿದೆ. ಇದು ಭಾಗಶಃ ಮಾತ್ರ.

ನಿಜ. ಈ ಸ್ವಾತಂತ್ರ್ಯ ಪಾರ್ಕ್ ಉದ್ಘಾಟನೆಯಾಗಿದ್ದೇ ಮೊನ್ನೆ ಮೊನ್ನೆ. ಆ ಗೋಡೆ ಅದು ಹೇಗೆ ಇಷ್ಟು ಬೇಗ ಬಿದ್ದು ಹೋಗುತ್ತದೆ. ವಾಸ್ತವವಾಗಿ ಬಿದ್ದಿರುವ ಗೋಡೆ ಹಳೆ ಸೆಂಟ್ರಲ್ ಜೈಲಿನ ಲೊಡ್ಡೆದ್ದು ಹೋಗಿದ್ದ ಗೋಡೆ.

ಹಳೆ ಜೈಲನ್ನೇ ಈಗ ಈ ಪಾರ್ಕ್ ಆಗಿ ಪರಿವರ್ತಿಸಲಾಗಿದೆ. ಐತಿಹಾಸಿಕ ಸ್ಮಾರಕ ಎನ್ನುವ ಹೆಸರಿನಲ್ಲಿ ಜೈಲಿನ ಮುಖ್ಯದ್ವಾರ ಹಾಗೂ ಒಳಗಡೆ ಹಲವು ಭಾಗಗಳಲ್ಲಿ ಹಳೆಯ ಗೋಡೆಗಳನ್ನೇ ಉಳಿಸಿಕೊಳ್ಳಲಾಗಿದೆ. ಆದರೆ ಗಾಂಧಿನಗರದ ಕಡೆಗಿದ್ದ ಜೈಲಿನ ಎತ್ತರದ ತಡೆಗೋಡೆಗಳು ಎಂದೋ ಶಿಥಿಲವಾಗಿದ್ದವು. ಎಷ್ಟೋ ಕಡೆ ತಾನೆ ತಾನಾಗಿ ಆ ಗೊಡೆ ದಿನೇ ದಿನೇ ಸ್ವಲ್ಪ ಸ್ವಲ್ಪವಾಗಿ ಕರಗುತ್ತಾ ಕುಸಿದು ಬೀಳುವುದು ನಡೆದೇ ಇತ್ತು. ಆ ಗೋಡೆಯು ಜೈಲಿನ ಗೋಡೆಯೊಂದಕ್ಕೆ ಇರಬೇಕಾದ ದೃಡತೆ, ಗಟ್ಟಿತನವಿಲ್ಲದೆ ಬರೀ ತುಂಡುಕಲ್ಲುಗಳಿಂದ ಕೂಡಿದ ಮಣ್ಣಿನ ಮುದ್ದೆಯಂತೆ ಕಾಣುತ್ತಾ ಈ ಬಗೆಗೆ ಕತೂಹಲವಹಿಸಿ ನೋಡುವವರಿಗೆ ಆಶ್ಚರ್ಯವನ್ನೂ ತರುತ್ತಿತ್ತು. ಬುದ್ದಿಮಾಂದ್ಯರಲ್ಲದೇ ಬುದ್ದಿ ನೆಟ್ಟಗಿರುವ ಯಾರೇ ಆದರೂ ಆ ಗೋಡೆ ಈಗಲೋ ಆಗಲೋ ಕುಸಿದು ಬೀಳುತ್ತದೆ ಎಂದು ಹೇಳುವುದಕ್ಕೆ ಸಣ್ಣ ಕಾಮನ್ ಸೆನ್ಸ್ ಅಷ್ಟೇ ಸಾಕಾಗಿತ್ತು. (ಸ್ಮಾರಕ ಎಂದು ಉಳಿಸಿಕೊಳ್ಳಲಾಗಿರುವ ಹಳೆಗೋಡೆ ಭಾಗ ಈಗಲೂ ಸಾಕಷ್ಟು ದೊಡ್ಡದೇ ಇದೆ. ಈ ಕೂಡಲೇ ತಜ್ಞರು ಗೋಡೆಯ ಸ್ಥಿತಿಗತಿ ಬಗೆಗೆ ಪರಿಶೀಲಿಸುವ ಕೆಲಸ ಆಗಬೇಕು. ಇಲ್ಲಿನ ನಿರ್ಲಕ್ಷ್ಯ, ಸಾವಿಗೆ ಕಾರಣವಾದವರಿಗೆ ಶಿಕ್ಷೆ ಆಗಬೇಕು.)

120 ವರ್ಷ ದಾಟಿರುವ ಈ ಗೋಡೆಯ ಬಗ್ಗೆ ಜನಸಾಮಾನ್ಯರ ಭಾಷೆಯಲ್ಲಿ ಹೇಳುವುದಾದರೆ ಅದು ಲೊಡ್ಡೆದ್ದು ಹೋಗಿತ್ತು. ಅಂಥಾ ಗೋಡೆಗೇ ಹಾಗೇ ತೇಪೆ ಹಾಕಿ ಕುಸಿದು ಬಿದ್ದ ಕೆಲವು ಕಡೆ ಮಾತ್ರ ಹೊಸ ಗೋಡೆ ಕಟ್ಟಿ ಅದನ್ನು ಹಾಗೇ ಉಳಿಸಿಕೊಂಡಿದ್ದೇ ಒಂದು ಅಪರಾಧ. ಪಾರ್ಕ್ ಉದ್ಘಾಟನೆಯಾದಾಗಲೇ ಈ ಗೋಡೆ ಕುಸಿದು ಬೀಳುವ ಅಪಾಯದ ಬಗೆಗೆ 'ಜನಶಕ್ತಿ' ಎಚ್ಚರಿಸಿ ಬರೆದಿತ್ತು. ಪೋಲಿಸ್ ಇಲಾಖೆಯಿಂದಲೂ ಈ ಗೋಡೆ ಬೀಳುವ ಅಪಾಯ ಇರುವ ಬಗೆಗೆ ಬಿಬಿಎಂಪಿಗೆ ಹಲವು ಸಾರಿ ಪತ್ರ ಬರೆದು ಅದನ್ನು ಒಡೆದು ಹಾಕಲು ಒತ್ತಾಯಿಸಲಾಗಿತ್ತಂತೆ.

ಮೊನ್ನೆ ಶುಕ್ರವಾರ ಏಪ್ರಿಲ್ 22 ರಂದು ಸುರಿದ ಮಳೆಗೆ ಇದೇ ಗೊಡೆಯ ಒಂದು ಭಾಗ ಕುಸಿದು ಬಿದ್ದಿದೆ. ಅದೃಷ್ಟವಶಾತ್ ಯಾರಿಗೂ ಹಾನಿ ಆಗಲಿಲ್ಲ. ಆಗಲಾದರೂ ತೇಪೆಗೋಡೆಯನ್ನು ಪೂರ್ಣವಾಗಿ ತತ್‌ಕ್ಷಣ ಕೆಡವಿ ಹಾಕಲು ಕ್ರಮವಹಿಸ ಬೇಕಾಗಿತ್ತು. ಆ ಕೆಲಸ ಆಗಲೇ ಇಲ್ಲ. ಶನಿವಾರ ರಾತ್ರಿ ಅಮಾಯಕ ಪ್ರಕಾಶ್ ಮತ್ತೊಂದೆಡೆ ಕುಸಿದ ಅದೇ ಗೋಡೆ ಕೆಳಗೆ ಸಿಕ್ಕಿ ಸತ್ತಿದ್ದಾರೆ. ಈ ಜಾಗದಲ್ಲಿ ಸಾಮೂಹಿಕ ಪ್ರತಿಭಟನೆ, ಮುಷ್ಕರಗಳು, ಸಾವಿರಾರು ಜನರ ಬಹಿರಂಗ ಸಭೆಗಳು ಸೇರುವುದು ಮಾಮೂಲು. ಒಂದೊಮ್ಮೆ ಗೋಡೆ ಅಂಥಾ ಸಂದರ್ಭದಲ್ಲಿ ಕುಸಿದಿದ್ದರೆ ಇನ್ನು ಎಷ್ಟೋ ಅಮಾಯಕ ಜೀವಗಳ ಬಲಿ ಆಗುತ್ತಿತ್ತು.

ಪ್ರತಿವರ್ಷವೂ ಪುನರಾವರ್ತನೆ

ಮತ್ತೊಬ್ಬ ಸಾಫ್ಟ್‌ವೇರ್ ಕಂಪನಿಯ ಉದ್ಯೋಗಿ ಸಿಟಿ ಮಾರ್ಕೆಟ್ ಬಳಿ ವಿದ್ಯುತ್ ಸಂಪರ್ಕಕ್ಕೆ ಸಿಲುಕಿ ಸತ್ತಿದ್ದಾರೆ. ಇಂಥವು ಪ್ರತಿ ವರ್ಷದ ದುರಂತಗಳು. ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಮುಂಗಾರು ಪೂರ್ವ ಮಳೆ ಅದೂ ಭರ್ಜರಿ ಮಳೆ ಜಡಿಯುವುದು ಹೊಸತೇನಲ್ಲ, ಅನಿರಿಕ್ಷಿತವೂ ಅಲ್ಲ. ಅದಕ್ಕೆ ಬಿಬಿಎಂಪಿ ಸಿದ್ದತೆ ಏನು ? ಚರಂಡಿಗಳ ಹೂಳು ತೆಗೆಸುವುದು, ರಸ್ತೆಯ ಮೇಲಿನ ನೀರಿನ ಹರಿವಿಗೆ ಅಡ್ಡಿಯಾಗಿರುವ ಕಸಕಡ್ಡಿ ಕಲ್ಲು, ಮಣ್ಣು ತೆಗೆಸುವುದು, ಒಣಗಿರುವ ಅಥವಾ ದುರ್ಬಲಗೊಂಡಿರುವ ಮರಗಳನ್ನು ಮತ್ತು ಗೋಡೆಗಳನ್ನು ಪರಿಶೀಲಿಸಿ ಅವುಗಳನ್ನು ತೆಗೆಯುವುದು, ಇಂತಹ ಎಷ್ಟೋ ಕ್ರಮಗಳನ್ನು ವಹಿಸಬೇಕಾಗುತ್ತದೆ. ಜೂನ್ ಜುಲೈ ಬಂದು ಮುಂಗಾರು ಮಳೆ ಆರಂಭವಾದರೂ ಚರಂಡಿಯ ಹೂಳು, ಕಸ ತೆಗೆಯುವ ಕೆಲಸ ಆರಂಭವಾಗುವುದಿಲ್ಲ. ಮುಚ್ಚಬೇಕಾದ ಗುಂಡಿ, ಚರಂಡಿ ದ್ವಾರಗಳನ್ನು ಮುಚ್ಚುವುದಿಲ್ಲ. ಏನಾದರೂ ಒಂದು ದೊಡ್ಡ ಅನಾಹುತವಾದಾಗ ಗಡಬಡಿಸಿ ಎದ್ದೇಳುವುದು...ಜನರ ಟೀಕೆ, ಒತ್ತಡ ಜಾಸ್ತಿಯಾದಾಗ ತೋರಿಕೆಗೆ ಏನಾದರೂ ಮಾಡಿದಂತೆ ಒಂದೆರಡು ಪ್ರದರ್ಶನ ಮಾಡುವುದು. ಆಮೇಲೆ ಮತ್ತೆ ಭ್ರಷ್ಟತೆ,ಹಗರಣಗಳ ಚರಂಡಿಯೊಳಗೆ ಮಲಗಿ ಹೊರಳಾಡುತ್ತಾ ಮೈ ತಂಪು ಮಾಡಿಕೊಳ್ಳುವುದು ಇದು ಬಿಬಿಎಂಪಿಯ ಖಾಯಂ ಪ್ರವೃತ್ತಿಯಾಗಿದೆ. ಇದೇ ಅದರ ಕಾರ್ಯ ಶೈಲಿಯಾಗಿದೆ.

ಮಳೆ ಆರಂಭಕ್ಕೆ ಮುಂಚೆ ವಿದ್ಯುತ್ ಇಲಾಖೆಯು ಬೀಳಬಹುದಾದ ಕಂಬ, ಕಿತ್ತು ಬಂದಿರುವ ತಂತಿ ಮುಂತಾದವುಗಳನ್ನು ನೋಡಿ ಅಗತ್ಯ ಕ್ರಮ ವಹಿಸಬೇಕು. ಈ ಎಲ್ಲಕ್ಕೂ ಆಧಾರವಾಗಿ ಇಂಧನ ಇಲಾಖೆ, ನಗರಾಡಳಿತ..... ಇತರೆ ಇಲಾಖೆಗಳ ಚುಕ್ಕಾಣಿ ಹಿಡಿದವರು ಸಚಿವ ಮಹಾಶಯರು ಮುಂದಾಲೋಚನೆ, ಜನಪರ ಕಾಳಜಿಯಿಂದ ಆಡಳಿತಕ್ಕೆ ಚುರುಕು ಮುಟ್ಟಿಸಬೇಕು. ಇವೆಲ್ಲಾ ಆಗ ಬೇಕಾದರೆ ಇವರೆಲ್ಲರ ನಾಯಕರಾದ ಮುಖ್ಯಮಂತ್ರಿಗೆ ಹಗರಣಗಳನ್ನು ಮುಚ್ಚಿಹಾಕುವ ತಂತ್ರಗಾರಿಕೆಯ ಕೆಲಸಗಳಿಂದ, ಭಿನ್ನಮತೀಯರ ಕಾಟ, ಹೋಮ ಹವನ ಮುಂತಾದ ಪೂಜಾ ಕೈಂಕರ್ಯಗಳಿಂದ, ಬಿಡುವು ಸಿಗಬೇಕು. ಸಚಿವರು ಮುಖ್ಯಮಂತ್ರಿ ಕುರ್ಚಿಯ ಕಾಲು ಇಲ್ಲ ಕೈ ಹಿಡಿದು ಎಳೆದಾಡುವುದಕ್ಕೋ ಇಲ್ಲ ಬಲಪಡಿಸುವುದಕ್ಕೋ ನಿಂತಿದ್ದರೆ ಇದಲ್ಲದೆ ಇನ್ನೇನಾಗಲು ಸಾಧ್ಯ.

ಮತ್ತೊಂದು ಮಾತು

ಏಪ್ರಿಲ್ 23 ಶನಿವಾರ ಮಧ್ಯಾನ್ನ 3.00 ಗಂಟೆಗೇ ಟಿ.ವಿ.ಗಳಲ್ಲಿ ಹಳೇ ಜೈಲ್ ಗೋಡೆ ಕುಸಿದು ಬಿದ್ದ ಬಗ್ಗೆ ಸುದ್ದಿಯನ್ನು ಜನ ನೋಡಿದ್ದಾರೆ. ಜನಶಕ್ತಿಯ ವರದಿಗಾರ ರಾತ್ರಿ 8 ಗಂಟೆಗೆ ಸ್ಥಳಕ್ಕೆ ಹೋದರೂ ಅಲ್ಲಿ ಬಿದ್ದ ಕಲ್ಲು ಮಣ್ಣು ತೆಗೆದು ಹಾಕಿಲ್ಲ. ಆಂಬುಲೆನ್ಸ್ ಸೇರಿದಂತೆ, ಅಪಘಾತ ನಿರ್ವಹಣೆಗೆ ಸಂಬಂಧಿಸಿದ ತುರ್ತು ಸೇವೆಯ ಯಾವ ಸಿಬ್ಬಂದಿಯೂ ಅಲ್ಲಿಗೆ ಇನ್ನೂ ತಲುಪಿಲ್ಲ. ಬಿದ್ದ ಗೋಡೆ ಕೆಳಗೆ ಯಾರಾದರೂ ಸಿಕ್ಕಿಕೊಂಡಿದ್ದಾರೆಯೇ ಇಲ್ಲವೇ ಪೋಲಿಸರಿಗೆ ಮಾಹಿತಿ ಇಲ್ಲ. (ಆ ಪ್ರದೇಶದಲ್ಲಿದ್ದ ಜನರಿಗೆ ಮಾತ್ರ ಕನಿಷ್ಟ ಒಬ್ಬರು ಸಿಕ್ಕಿ ಬಿದ್ದಿರುವ ಬಗ್ಗೆ ಯಾವ ಅನುಮಾನವೂ ಇರಲಿಲ್ಲ) ಪೋಲಿಸರೇನೋ ಈ ಭಾಗದಲ್ಲಿ ವಾಹನ ನಿಲುಗಡೆ ಮಾಡಬೇಡಿ. ಗೋಡೆ ಬೀಳುವ ಅಪಾಯವಿದೆ ಅಂತ ಬೋರ್ಡ್‌ಅನ್ನು ಅಲ್ಲಿ ಹಾಕಿದ್ದರಂತೆ. ಆ ಕಾಳಿದಾಸ ರಸ್ತೆ ಎನ್ನುವ ಆ ರಸ್ತೆಯಲ್ಲಿ ಬಹುಶಃ ಕಾಳಿದಾಸನ ಕಾಲದ ನಗರದಲ್ಲಿದ್ದಂತೆಯೇ ಗೌ ಎನ್ನುವ ಕತ್ತಲೋ ಕತ್ತಲು. ಪ್ರಕಾಶ್ ಅವರಿಗೆ ಫಲಕ ಕಾಣಿಸಿತೋ

ಪುಟ 11 ಕ್ಕೆ ▶



ಭಾರತೀಯ ಮಾಧ್ಯಮ ಬರೆಸಿದ್ದೆಷ್ಟು? ಮರೆಸಿದ್ದೆಷ್ಟು?

ಮಾಧ್ಯಮ ಮಂಥನ

■ ಶ್ರೀಧರ

ಭ್ರಷ್ಟಾಚಾರ ಭಾರತೀಯ ಜೀವನಶೈಲಿಯ ಅವಿಭಾಜ್ಯ ಅಂಗ ಎಂದು ಹೇಳಲಾಗುತ್ತದೆ. ಹೌದು. ಈ ಸತ್ಯದಿಂದ ಯಾರೂ ಹೊರತಾಗಿಲ್ಲ. ತಾರ್ಕಿಕವಾಗಿ ಹೇಳುವುದಾದರೆ ದೇಶದಲ್ಲಿನ ಪ್ರತಿಯೊಬ್ಬರನ್ನೂ ಭ್ರಷ್ಟರನ್ನಾಗಿ ಮಾಡಲು ಸಾಧ್ಯವಿಲ್ಲ ಎಂಬುದೂ ಅಷ್ಟೇ ಸತ್ಯ. ಏಕೆಂದರೆ ಅಧಿಕಾರ ಇಲ್ಲದಿರುವವರು, ಆಸ್ತಿ-ಸಂಪತ್ತು ಅಥವಾ ಇತರ ಸಂಪನ್ಮೂಲ ಗಳು ಇಲ್ಲದಿರುವವರನ್ನು ಭ್ರಷ್ಟ ರನ್ನಾಗಿ ಮಾಡಲು ಸಾಧ್ಯವೇ ಇಲ್ಲ ಎಂತಲೇ ಹೇಳ ಬಹುದು. ಇಲ್ಲಿ ನಾವು ಚರ್ಚಿಸುತ್ತಿರುವ ವಿಷಯ ಭಾರತದಲ್ಲಿ ಭ್ರಷ್ಟಾಚಾರ ವಿಷಯದಲ್ಲಿ ಮಾಧ್ಯಮಗಳ ಪಾತ್ರ ಏನು, ಎತ್ತ, ಹೇಗೆ, ಪ್ರಮಾಣಿಕವಾಗಿದೆಯೇ ಸೇರಿದಂತೆ ಇಂತಹ ಇನ್ನಿತರ ವಿಷಯಗಳು. ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಅಣ್ಣಾ ಹಜಾರೆಯವರನ್ನು ದೃಷ್ಟಾರನನ್ನಾಗಿ ಭಾರತೀಯ ಮಾಧ್ಯಮಗಳು ಬಿಂಬಿಸುತ್ತಿರುವುದು ಪಕ್ಷಪಾತದಿಂದ ಕೂಡಿದೆ. ಮಾಧ್ಯಮಗಳಲ್ಲಿ ಮೊದಲಿನಿಂದಲೂ ಭ್ರಷ್ಟಾಚಾರದ ವಿರುದ್ಧದ ವರದಿಗಳು ಕಾಣಿಸಿಕೊಂಡಿವೆ. ಆದರೆ ಈ ಕುರಿತು ವಿಶ್ಲೇಷಣಾತ್ಮಕ ನೋಟ ಹರಿಸುವ ಅಗತ್ಯವಿದೆ.

ಭ್ರಷ್ಟಾಚಾರದ ಕುರಿತು ಭಾರತೀಯ ಮಾಧ್ಯಮಗಳು ಮಾಡಿದ ವರದಿಗಳು ಪಕ್ಷಪಾತದಿಂದ ಕೂಡಿವೆ. ಸಾಂಸ್ಥೀಕರಣ (ಇನ್ಸ್ಟ್ಯೂಷನಲೈಸ್) ಆಗುತ್ತಿರುವ ಭ್ರಷ್ಟಾಚಾರದ ಆಳಕ್ಕೆ ಇಳಿಯುವಲ್ಲಿ ಸೈದ್ಧಾಂತಿಕ ವಿರೋಧಾಭಾಸಗಳನ್ನು ಹೊಂದಿವೆ. ಕಳೆದ ಕೆಲವು ತಿಂಗಳುಗಳಿಂದ ಭಾರತೀಯ ರಾಜಕಾರಣದಲ್ಲಿ ಭಾರಿ ಅಲ್ಲೋಲ ಕಲ್ಲೋಲಗಳನ್ನು ಸೃಷ್ಟಿಸಿದ್ದ 2ಜಿ ಸ್ಪೆಕ್ಟ್ರಂ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳು ಮಾಡಿದ ವರದಿ ಇದಕ್ಕೆ ತಾಜಾ ಉದಾಹರಣೆಯಾಗಿದೆ.

2ಜಿ ಸ್ಪೆಕ್ಟ್ರಂ ಕುರಿತ ವರದಿ:

2ಜಿ ಪರವಾನಗಿ ಹಂಚಿಕೆಯಲ್ಲಿ ಗಂಭೀರವಾದ ತಪ್ಪುಗಳು ನಡೆಯುತ್ತಿವೆ ಎಂಬುದು 2000 ಇಸವಿಯಿಂದಲೂ ದೂರಸಂಪರ್ಕ ಉದ್ಯಮದ ಕುರಿತು ವರದಿ ಮಾಡುತ್ತಿರುವ ಮಾಧ್ಯಮದ ಪ್ರತಿನಿಧಿಗಳಿಗೆ ಚೆನ್ನಾಗಿ ಗೊತ್ತು. ವಾಸ್ತವವಾಗಿ ಹೇಳುವುದಾದರೆ 1990ರಲ್ಲಿ ಮೊಬೈಲ್ ಸೇವೆಗಳು ಆರಂಭವಾದಂದಿನಿಂದಲೂ ಈ ಉದ್ಯಮ ಒಂದಲ್ಲಾ ಒಂದು ಹಗರಣಗಳಲ್ಲಿ ಸಿಲುಕುತ್ತಾ ಬಂದಿದೆ. ಮೊಟ್ಟ ಮೊದಲಿಗೆ ಹೇಳುವುದಾದರೆ 2ಜಿ ಪರವಾನಗಿ ವಿತರಿಸುವುದು ಒಂದು ರೀತಿಯಲ್ಲಿ ಕ್ರಿಕೆಟ್ ಮ್ಯಾಚ್‌ಫಿಕ್ಸಿಂಗ್‌ನಂತೆ ನಡೆಯಿತು. ಈ ಅವಧಿಯಲ್ಲಿ ಕಂಪನಿಗಳು ತಮಗಿಷ್ಟ ಬಂದಹಾಗೆ ಮಾಡಿದ ಬಿಡ್‌ಗೆ ಲೈಸೆನ್ಸ್‌ನೀಡಲಾಯಿತು. ನಂತರ ಗಳಿಸುವ ಆದಾಯವನ್ನು ಸರ್ಕಾರ ಮತ್ತು ಕಂಪನಿಗಳು ಹಂಚಿಕೊಳ್ಳುವಂತೆ ನೀತಿಗಳನ್ನು ರೂಪಿಸಲಾಯಿತು. ಈ ಹಿನ್ನೆಲೆಯಲ್ಲಿ ಯೋಚಿಸಿ ದೂರಸಂಪರ್ಕ ಸಚಿವ ರಾಜಾ ಅವರು ನಡೆಸಿದ ಭ್ರಷ್ಟಾಚಾರವನ್ನು ಮಾಧ್ಯಮಗಳು ಪ್ರಮಾಣಿಕವಾಗಿ ಬಿಂಬಿಸಿವೆಯೇ ಜ್ಞಾಪಿಸಿಕೊಳ್ಳಿ. ಎಲ್ಲ ಮಾಧ್ಯಮಗಳು ಇದನ್ನು ಪ್ರಮಾಣಿಕವಾಗಿ ಕವರ್ ಮಾಡಿವೆಯೇ? ಇದಕ್ಕೆ ಬದಲಾಗಿ ಮಾಧ್ಯಮಗಳು ಇಷ್ಟು ದೊಡ್ಡ ಹಗರಣದ ನೀತಿ ನಿಯಮಗಳನ್ನು ಪ್ರಜ್ಞಾಪೂರ್ವಕವಾಗಿ ಬಚ್ಚಿಟ್ಟಿವೆ.

ಆಗ ಮತ್ತು ಈಗಲೂ ಭಾರತೀಯ ಮಾಧ್ಯಮಗಳು ಸರ್ಕಾರಿ ಸ್ವಾಮ್ಯದ ಕಂಪನಿ ಬಿಎಸ್‌ಎನ್‌ಎಲ್ ಕುರಿತಂತೆ ಪಕ್ಷಪಾತದ ನಿಲುವು ಹೊಂದಿವೆ. ಬಿಎಸ್‌ಎನ್‌ಎಲ್ ಭಾರತೀಯ ದೂರಸಂಪರ್ಕ ಕ್ಷೇತ್ರದಲ್ಲಿ ಪಿತಾಮಹನಿದ್ದಂತೆ. 1980ರ ವೇಳೆಗಾಗಲೇ ಬಿಎಸ್‌ಎನ್‌ಎಲ್ ದೇಶದ ಮೂಲೆಮೂಲೆಗಳಿಗೆ ಸಂಪರ್ಕ ಕಲ್ಪಿಸಿತ್ತು, ಎಸ್‌ಟಿಡಿ ಬೂತ್‌ಗಳನ್ನು ಸ್ಥಾಪಿಸಿತ್ತು. ಆದರೆ ಮೊಬೈಲ್ ಕ್ಷೇತ್ರ ಪ್ರವೇಶಿಸಲು ಬಿಎಸ್‌ಎನ್‌ಎಲ್‌ಗೆ ಭಾರಿ ಅಡೆತಡೆಗಳನ್ನು ಒಡ್ಡಲಾಯಿತು. ಖಾಸಗಿ ಕಂಪನಿಗಳು ಮೊಬೈಲ್ ಸೇವೆಗಳನ್ನು ಒದಗಿಸುವ ಮಟ್ಟಕ್ಕೆ ಸಿದ್ಧತೆ ಮಾಡಿಕೊಳ್ಳುವ ತನಕ ಅಡೆತಡೆಗಳನ್ನು ಒಡ್ಡಲಾಯಿತು. ಮಾಧ್ಯಮಗಳು ಸರ್ಕಾರಿ ಸ್ವಾಮ್ಯದ ಕಂಪನಿಯನ್ನು ನಿರ್ಲಕ್ಷಿಸಿದ್ದು, ಭಾರತೀಯ ಮಾಧ್ಯಮದಲ್ಲಿ ಐತಿಹಾಸಿಕ ದುರಂತವೇ ಸರಿ. ಮಾಧ್ಯಮಗಳ ಈ ಧೋರಣೆ ಬಿಎಸ್‌ಎನ್‌ಎಲ್‌ನ್ನು ಖಾಸಗಿ ಕಂಪನಿಗಳಿಗೆ ಅಗ್ಗದ ದರಕ್ಕೆ ಮಾರಾಟ ಮಾಡಬೇಕೆಂಬ ಹಂತದವರೆಗೂ ತಲುಪುವ ಹುನ್ನಾರಕ್ಕೆ ಕೊಂಡೊಯ್ದಿತ್ತು. ಬೊಕ್ಕಸಕ್ಕೆ ಎಷ್ಟೇ ನಷ್ಟವಾಗಲಿ, ಮಾಧ್ಯಮಗಳ ದೃಷ್ಟಿಯಲ್ಲಿ ಖಾಸಗೀಕರಣ ಸಮರ್ಥನೀಯವಾದ ಪ್ರಕ್ರಿಯೆ. ಈ ಹಿನ್ನೆಲೆಯಲ್ಲಿ ಚಿಂತಿಸುವುದಾದರೆ ಮಾಧ್ಯಮಗಳು ಭ್ರಷ್ಟಾಚಾರವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಬಿಂಬಿಸಿಲ್ಲ ಎಂಬುದನ್ನು ಯಾರಾದರೂ ಅರ್ಥ ಮಾಡಿಕೊಳ್ಳಬಹುದಾಗಿದೆ.

ಇದೇ ರೀತಿ ಖಾಸಗೀಕರಣವನ್ನು ಅತಿ ವೇಗವಾಗಿ ಮತ್ತು ಅತ್ಯುತ್ಸಾಹದಿಂದ ಜಾರಿಗೊಳಿಸುವ ಸಂದರ್ಭದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ



ಅವಧಿಯಲ್ಲಿ ನಡೆದ ವ್ಯಾಪಕ ಭ್ರಷ್ಟಾಚಾರವನ್ನು ಮಾಧ್ಯಮಗಳು ಬಿಂಬಿಸಲೇ ಇಲ್ಲ. ಅಲ್ಯೂಮಿನಿಯಂ ಕಂಪನಿ ಬಾಲ್ಕೋ ಖಾಸಗೀಕರಣ, ಸೆಂಟಾರ್ ಹೋಟೆಲ್ ಖಾಸಗೀಕರಣ ಮತ್ತು ಇಂಡಿಯನ್ ಆಯಿಲ್ ಖಾಸಗೀಕರಣ ಮಾಡಲು ನಡೆಸಿದ ಹುನ್ನಾರಗಳ ಕುರಿತು ಮಾಧ್ಯಮಗಳು ಪ್ರಮಾಣಿಕವಾಗಿ ವರದಿಯನ್ನೇ ಮಾಡಿಲ್ಲ. ಈ ಎಲ್ಲ ಪ್ರಸಂಗಗಳನ್ನು ಗಮನಿಸಿದರೆ ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಅಣ್ಣಾ ಹಜಾರೆಯವರು ದೃಷ್ಟಾರರು ಎಂದು ಮಾಧ್ಯಮಗಳು ಬಿಂಬಿಸುತ್ತಿರುವುದರಲ್ಲಿ ಪಕ್ಷಪಾತದ ಧೋರಣೆ.

ಮಾಧ್ಯಮಗಳು ಇದುವರೆಗೂ ಭ್ರಷ್ಟಾಚಾರವನ್ನು ಬಿಂಬಿಸುತ್ತಿರುವ ರೀತಿಯನ್ನು ಒಮ್ಮೆ ಗಮನಿಸಿ. ಇದು ಒಂದೊ ಒಬ್ಬ ವ್ಯಕ್ತಿ ಅಥವಾ ಕೆಲವು ವ್ಯಕ್ತಿಗಳ ವಿರುದ್ಧವಾಗಿದೆ. ಅವರೊಬ್ಬ ರಾಜಕಾರಣಿ, ಪೊಲೀಸ್ ಅಧಿಕಾರಿ ಅಥವಾ ಒಬ್ಬ ಉನ್ನತ ಮಟ್ಟದ ಅಧಿಕಾರಿ ಇಲ್ಲವೇ ಸಾರ್ವಜನಿಕ ಸೇವೆಯಲ್ಲಿರುವ ಒಬ್ಬ ವ್ಯಕ್ತಿಯ ವಿರುದ್ಧ ಮಾತ್ರ ವರದಿಗಳನ್ನು ಮಾಡುತ್ತಿವೆ. ಅದೂ ಸಹ ಒಂದು ಅವ್ಯವಹಾರ ಅಥವಾ ಭ್ರಷ್ಟಾಚಾರದ ಒಂದು ಘಟನೆ ಸುತ್ತ ಇರುತ್ತದೆ. ಬಂಡವಾಳಶಾಹಿಗಳಿಗೆ ನೆರವಾಗುವಂತಹ ಸರ್ಕಾರದ ನೀತಿ, ನಿಯಮಗಳನ್ನು ಎ.ರಾಜಾ ಅಥವಾ ಸುಖ್‌ರಾಂರಂತಹ ಒಬ್ಬ ವ್ಯಕ್ತಿಯ ಸುತ್ತ ಸುತ್ತುವರಿಯುವಂತೆ ಮಾಡುತ್ತವೆ. ಇವರಷ್ಟೆ ಭ್ರಷ್ಟಾಚಾರ ನಡೆಸಿದ್ದಾರೆ ಎಂದು ಬಿಂಬಿಸುತ್ತವೆ.

ಮತ್ತೊಂದು ಗಮನಿಸಬೇಕಾದ ಅಂಶ ಎಂದರೆ ಕಾರ್ಪೊರೇಟ್ ಸಂಸ್ಥೆಗಳಿಗೆ ಲಾಭ ಮಾಡಿಕೊಡುವ ನಿಟ್ಟಿನಲ್ಲಿ ರೂಪಿಸುವ ಸರ್ಕಾರಗಳ ಭ್ರಷ್ಟ ನೀತಿಗಳ ವಿರುದ್ಧ ಮಾಧ್ಯಮಗಳು ಎಂದೂ ಚಕಾರವನ್ನೇ ಎತ್ತುವುದಿಲ್ಲ. ಉದಾಹರಣೆಗೆ ಎ.ರಾಜಾ ನಡೆಸಿದ ಅವ್ಯವಹಾರಗಳು ದೂರಸಂಪರ್ಕ ಕ್ಷೇತ್ರದಲ್ಲಿ ವಹಿವಾಟು ನಡೆಸುತ್ತಿರುವ ಕೆಲವು ಕಂಪನಿಗಳಿಗೆ ಲಾಭದಾಯಕವಾಗುತ್ತದೆ ಎಂದು ಪ್ರತಿಯೊಬ್ಬರಿಗೂ ಗೊತ್ತು. ಆದರೆ ಮಾಧ್ಯಮಗಳು ಮಾತ್ರ ಎಂದೂ ಇದರ ಲಾಭ ಪಡೆದ ಕಾರ್ಪೊರೇಟ್ ಕಂಪನಿಗಳ ಸುತ್ತ ವರದಿಗಳನ್ನು ಮಾಡುವುದಿಲ್ಲ. ಅಂತಿಮವಾಗಿ ಭ್ರಷ್ಟಾಚಾರದ ಲಾಭ ಪಡೆದವರು ಯಾರು ಎಂಬುದನ್ನು ತೋರಿಸುವ ಹಂತಕ್ಕೆ ಮುಟ್ಟುವುದೇ ಇಲ್ಲ.

ಮಾಧ್ಯಮಗಳು ಜಾಹೀರಾತುಗಳಿಗಾಗಿ ದೊಡ್ಡ ದೊಡ್ಡ ಕಂಪನಿಗಳನ್ನು ಅವಲಂಬಿಸಿವೆ ಎಂಬಷ್ಟೇ ಕಾರಣಕ್ಕಾಗಿ ಮಾಧ್ಯಮಗಳ ಧೋರಣೆ ಹೀಗಿದೆ ಎನ್ನಲಾಗುವುದಿಲ್ಲ. ವಾಸ್ತವವಾಗಿ ಹೇಳುವುದಾದರೆ, ಮಾಧ್ಯಮಗಳು ಸೈದ್ಧಾಂತಿಕವಾಗಿ ಬೃಹತ್ ಬಂಡವಾಳಶಾಹಿಗಳ ಪರವಾಗಿವೆ.

ಸುದ್ದಿಗಳ ಆಯ್ಕೆಯಲ್ಲಿ ಪಕ್ಷಪಾತ:

ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳ ನಿಲುವಿನಲ್ಲಿ ಮೂರನೆ ಅತಿಮುಖ್ಯ ಅಂಶ ಎಂದರೆ, ಸುದ್ದಿಗಳ ಕುರಿತು ಅವುಗಳ ಆಯ್ಕೆ. ಬಡವರು ಬದುಕುವುದಕ್ಕಾಗಿ ಪ್ರತಿದಿನವೂ ಲಂಚ ನೀಡುತ್ತಿರುತ್ತಾರೆ ಎಂದು ಎಲ್ಲರಿಗೂ ಗೊತ್ತು. ಬೀದಿ ಬದಿ ವ್ಯಾಪಾರ ಮಾಡುವವನೂ ಪ್ರತಿದಿನವೂ ಮಾಮೂಲಿ ರೀತಿಯಲ್ಲಿ ಹಣ ನೀಡಬೇಕು. ಬಡವರು ರೇಷನ್ ಕಾರ್ಡ್ ಪಡೆಯಲು, ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಹಣ ನೀಡುತ್ತಾರೆ ಎಂಬುದು ಸರ್ವವಿಧಿತ. ಆದರೆ ಮಾಧ್ಯಮಗಳಿಗೆ ಇವೆಲ್ಲ ವಿಷಯಗಳೇ ಅಲ್ಲ. ಹೀಗಿರುವಾಗ ಅಣ್ಣಾ ಹಜಾರೆ ಬಗ್ಗೆ ಮಾಧ್ಯಮಗಳು ನೀಡಿರುವ ಪ್ರಚಾರವನ್ನು ಗಮನಿಸಿದರೆ ಮಾಧ್ಯಮಗಳ ನಿಲುವೇನು ಎಂಬುದು ತಿಳಿಯುತ್ತದೆ. ಅಣ್ಣಾ ಹಜಾರೆ ಹೋರಾಟದಿಂದಾಗಿ 1990ರಿಂದ ಜಾರಿಗೆ ಬಂದಿರುವ ಖಾಸಗೀಕರಣ ಮತ್ತು ಉದಾರೀಕರಣದ ಲಾಭ ಪಡೆಯುವವರಿಗೆ ಯಾವುದೇ ತೊಂದರೆ ಇಲ್ಲ ಎಂಬುದು ಮಾಧ್ಯಮಗಳಿಗೆ ಗೊತ್ತು. ಹಾಗಾಗಿಯೇ ಅಣ್ಣಾ ಹಜಾರೆ ಮಾಧ್ಯಮಗಳಿಗೆ ಭಾರಿ ಪ್ರೀತಿಯ ಮೂರ್ತಿಯಾದರು.

ಸಾರ್ವಜನಿಕ ಸಂಪನ್ಮೂಲ ಮಾರಾಟ:

ಸಾರ್ವಜನಿಕ ಸಂಪನ್ಮೂಲದಲ್ಲಿ ಅತ್ಯಂತ ಪ್ರಮುಖವಾದದ್ದು ಭೂಮಿ. ಇಂತಹ ಸಂಪನ್ಮೂಲವನ್ನು ಕಾರ್ಪೊರೇಟ್‌ಗಳಿಗೆ ಮಂಜೂರು ಮಾಡುವುದು ಅತ್ಯಂತ ಪ್ರಮುಖ ವಿಷಯವಾಗಿದೆ. ಆದರೆ ಮಾಧ್ಯಮಗಳು ಈ ಕುರಿತು ಕಾಳಜಿಯನ್ನೇ ವಹಿಸುವುದಿಲ್ಲ. ದೊಡ್ಡ ದೊಡ್ಡ ಕಂಪನಿಗಳಿಗಾಗಿ ಕೃಷಿಕರ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ನೀಡುವುದು ದೊಡ್ಡ ವಿಷಯವಾಗಿದ್ದರೂ ಮಾಧ್ಯಮಗಳು ಇದರಲ್ಲಿ ನಡೆಯುವ ಭ್ರಷ್ಟಾಚಾರವನ್ನು ಹೊರ ಜಗತ್ತಿಗೆ ತೋರಿಸುವುದೇ ಇಲ್ಲ. ನಮ್ಮ ಪ್ರತಿದಿನದ ಜೀವನದಲ್ಲಿ ನಾವು ಭ್ರಷ್ಟಾಚಾರವನ್ನು ಎದುರುಗಾಣುತ್ತೇವೆ. ಆದರೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಇದಕ್ಕೆ ತುತ್ತಾಗಿರುತ್ತಾರೆ. ಉದ್ಯಮಿಯೊಬ್ಬ 2ಜಿ ಸ್ಪೆಕ್ಟ್ರಂ ಪರವಾನಗಿ ಪಡೆಯುವಲ್ಲಿ ಎದುರಾಗುವ ಅಧಿಕಾರಶಾಹಿಯ ಅಡೆತಡೆಗಳು ಮತ್ತು ಸಾಮಾನ್ಯ ವ್ಯಕ್ತಿಯೊಬ್ಬ ರೇಷನ್ ಕಾರ್ಡ್ ಪಡೆಯುವಲ್ಲಿ ಎದುರಾಗುವ ಅಧಿಕಾರಶಾಹಿ ಅಡೆತಡೆಗಳು ಒಂದೇ ರೀತಿಯಾಗಿರುವುದಿಲ್ಲ. ಒಬ್ಬ ಸಾಮಾನ್ಯ ಮನುಷ್ಯನಿಗೆ ರೇಷನ್ ಕಾರ್ಡ್ ಪಡೆಯುವುದು ಅವನ ಹೊಟ್ಟೆಪಾಡಿನ ವಿಷಯವಾದರೆ, ಉದ್ಯಮಿಯೊಬ್ಬನಿಗೆ ಇದು ಕೇವಲ ಉದ್ಯಮ ಬೆಳೆಸುವಲ್ಲಿ ಎದುರಾಗುವ ನಿಭಾಯಿಸಬಹುದಾದ ಸಣ್ಣ ಅಡ್ಡಿ ಮಾತ್ರ. ಇಂತಹ ಭ್ರಷ್ಟಾಚಾರದ ವಿರುದ್ಧ ಮಾಧ್ಯಮಗಳು ಹೇಗೆ ಬಿಂಬಿಸುತ್ತವೆ. ಈ ಭ್ರಷ್ಟಾಚಾರ ಎಲ್ಲರನ್ನೂ ಒಂದೇ ರೀತಿ ಕಾಡುತ್ತಿದೆ ಎಂತಲೇ. ಹೀಗೆ ಬಿಂಬಿಸುವುದರ ವರ್ಗ ವೈರುಧ್ಯಗಳನ್ನು ಒಳಗೊಂಡಿರುವ ಆಳವಾದ ಸೈದ್ಧಾಂತಿಕ ವಿರೋಧಾಭಾಸಗಳಿವೆ. ●

ಕರಾವಳಿ : ಅಲ್ಪಸಂಖ್ಯಾತರ ಮೇಲೆ ನಿಲ್ಲದ ಧಾಳಿಗಳು



ಸಂಜಯ

ಸರಣಿ ಚರ್ಚ್ ದಾಳಿ ನಡೆದು ವರ್ಷಗಳು ಗತಿಸಿವೆ. ಯಡಿಯೂರಪ್ಪನ ಸರ್ಕಾರ ಸೋಮಶೇಖರ ಆಯೋಗದಿಂದ ತನಗೆ ಬೇಕಾದ ವರದಿ ಬರೆಸಿಕೊಂಡೂ ಆಗಿದೆ. ಕ್ರೈಸ್ತರು ಮತಾಂತರಿಗಳು ಎಂಬ ಆರೋಪವನ್ನು ಯಾವತ್ತು ಬೇಕಾದರೂ ಆಗತ್ಯ ಬಿದ್ದಾಗ ಕೈಗೆತ್ತಿಕೊಳ್ಳಲು ಸಂಘ ಪರಿವಾರಕ್ಕೆ ಅವಕಾಶ ಮುಕ್ತವಾಗಿದೆ. ಈಗ ಚಡ್ಡಿ ಪಡೆಗಳಿಗೆ ರಾಜ್ಯದಲ್ಲಿ ಕಷ್ಟಕಾಲ. ಬಿಜೆಪಿ ಸರಕಾರದ ಮುಖ್ಯಮಂತ್ರಿ ಯಡಿಯೂರಪ್ಪನ ಹೆಸರು ಅಣ್ಣ ಹಜಾರೆಯ ಚಳುವಳಿಯ ಸಂದರ್ಭದಲ್ಲಿ ದೇಶದಲ್ಲಿಯೇ ಭ್ರಷ್ಟಾಚಾರಕ್ಕೆ ಪರ್ಯಾಯ ಹೆಸರು ಎಂಬಂತಾಗಿದೆ. ಇದರಿಂದ ಸಂಘ ಪರಿವಾರಕ್ಕೆ ರಾಜ್ಯದಲ್ಲಿ ತಲೆ ಎತ್ತಿ ತಿರುಗದಂತಾಗಿದೆ. ಇದೇ ಪರಿಸ್ಥಿತಿಯಲ್ಲಿ ಮುಂದಿನ ಚುನಾವಣೆಗೆ ಮತ ಕೇಳಲು ಹೋದರೆ ಜನ ಬೆನ್ನತ್ತಿ ಬಾರಿಸಬಹುದು ಎಂಬ ಭಯ ಪರಿವಾರವನ್ನು ಕಾಡುತ್ತಿದೆ. ಇದು ಪರಿವಾರದ ಪ್ರಯೋಗಶಾಲೆ ಕರಾವಳಿಯಲ್ಲಿ ಆರ್‌ಎಸ್‌ಎಸ್ ವಟುಗಳಿಗೆ ದೊಡ್ಡ ರೀತಿಯ ಆತಂಕವನ್ನು ಸೃಷ್ಟಿಸಿದೆ. ಹಿಂದುತ್ವದ ಅಫೀಮಿಗೆ ಪ್ರಮಾಣಿಕತೆ, ಶುದ್ಧಹಸ್ತ, ನೈತಿಕತೆ ಮುಂತಾದ ಶಬ್ದಗಳ ನಕಲಿಗಳನ್ನು ಹದವಾಗಿ ಬೆರೆಸಿ ಇಲ್ಲಿನ ಕೆಳಜಾತಿಯ ಜನತೆಗೆ ತಿನ್ನಿಸಿ ಅವರ ಕಣಕಣದಲ್ಲೂ ಮುಸ್ಲೀಂ, ಕ್ರಿಶ್ಚಿಯನ್ ವಿರೋಧಿ ದ್ವೇಷವನ್ನು ಹುಟ್ಟಿಸಿ ಚುನಾವಣೆ ಗೆಲುವನ್ನು ಸಾಧಿಸುತ್ತಾ ಬಂದ ಕಲ್ಲಡ್ಕ ಪ್ರಭಾಕರ ಭಟ್ಟನ ವಿಪ್ರ ಪಡೆ ಹಿಂದುತ್ವದ ಉನ್ಮಾದದ ತುತ್ತತುದಿ ಎಂಬಂತೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಯಾಗ ಯಜ್ಞಗಳ ಆಯೋಜಕ, ಸಾಮಾನ್ಯ ಬಿಜೆಪಿ ಕಾರ್ಯಕರ್ತ, ಕಳಪೆ ಅಭ್ಯರ್ಥಿ ನಳಿನ್‌ಕುಮಾರ್ ಕಟೀಲ್‌ನನ್ನು ಗೆಲ್ಲಿಸಿ ರಣ ಕೇಕೇ ಹಾಕಿತ್ತು.


'ಅಫೀಮು ಹಂಚಿಕೆ'

ಈಗ ಯಡಿಯೂರಪ್ಪನ ಆಡಳಿತದ ಸುವರ್ಣ ಕಾಲದಲ್ಲಿ ಅಂದು ಪ್ರಭಾಕರ ಭಟ್ಟನ ವಿಪ್ರ ಪಡೆ ಹಂಚಿದ ಅಫೀಮು ತಿಂದ ಕರಾವಳಿಯ ಜನತೆಗೆ ಹಿಂದುತ್ವದ ಅಮಲು ನಿಧಾನಕ್ಕೆ ಇಳಿಯತೊಡಗಿದೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಹಿಂದೂಗಳ ಎಲ್ಲಾ ಕಷ್ಟಗಳಿಗೆ ಕಾರಣರಾದ ಬ್ಯಾರಿ (ಮುಸ್ಲೀಮರು ಗಳನ್ನು ಪೊರ್ಬ್ಚು (ಕ್ರಿಶ್ಚಿಯನ್)ಗಳನ್ನು ಹೆಡೆಮುರಿಕಟ್ಟಿ ಅರಬ್ಬಿ ಸಮುದ್ರಕ್ಕೆ ಎಸೆಯ ಲಾಗುವುದು. ಆ ಮೂಲಕ ಹಿಂದೂಗಳ ಕಷ್ಟಗಳನ್ನು ನಿವಾರಿಸಿ ವಿಜಯನಗರ ಸಾಮ್ರಾಜ್ಯದ ವೈಭವಗಳನ್ನು ಹಿಂದೂಗಳ ಪಾಲಿಗೆ ಒದಗಿಸಲಾಗುವುದು, ಸ್ವಚ್ಛ, ದಕ್ಷ, ಪ್ರಾಮಾಣಿಕ ಆಡಳಿತದ ರಾಮರಾಜ್ಯ ಜಾರಿಗೊಳಿಸಲಾಗುವುದು ಎಂಬ ಡೈಲಾಗ್‌ಗಳು ಜಾರಿಯಾಗುವುದನ್ನು ಕಾಯುತ್ತಾ ತಮ್ಮ ಸಮಸ್ಯೆಗಳ ಪರಿಹಾರದ ನಿರೀಕ್ಷೆಯಲ್ಲಿದ್ದ ಇಲ್ಲಿನ ತುಳುವರಿಗೆ ಕಾಣಲು ಸಿಕ್ಕಿದ್ದು ಯಡಿಯೂರಪ್ಪನ ನೇತೃತ್ವದಲ್ಲಿ ಸಾಮೂಹಿಕ ಭೂರೀ ಭೋಜನಕ್ಕೆ ಕೂತ ಪರಿವಾರದ ಚಿತ್ರ. ಯಡಿಯೂರಪ್ಪನ 'ರಾಮರಾಜ್ಯ'ದಲ್ಲಿ ಉಣ್ಣದಿರುವವನೇ ಮೂರ್ಖ ಎಂಬಂತೆ ಜಿಲ್ಲೆಯ ಹಿರಿಕಿರಿಸಂಘಿಗಳು ಎರಡೂ ಕೈಗಳಲ್ಲಿ ಭೋಜನ ನಡೆಸುತ್ತಿವೆ. ಭಟ್ಟರು ಕಲ್ಲಡ್ಕದ ಶಾಲೆಯ ಹೆಸರಿನಲ್ಲಿ ಕೋಟ್ಯಾಂತರ ರೂ. 'ದೇಣಿಗೆ' ಸಂಗ್ರಹಿಸುತ್ತಿದ್ದರೆ ಪ್ರಭುಗಳು, ಪುರಾಣಿಕ್‌ಗಳು ಉಣ್ಣುವುದನ್ನು ನೋಡುವುದೇ ಚಂದ. ಮೊನ್ನೆ ಮೊನ್ನೆಯವರೆಗೆ ಉದ್ದ ನಾಮಹಾಕಿ ರಾಮಭಜನೆ ನಡೆಸುತ್ತಾ ಹರಿದ ಚಪ್ಪಲಿ ತೊಟ್ಟು ಬ್ಯಾರಿಗಳ ಬೆನ್ನು ಬಿದ್ದಿದ್ದ ಅಬ್ಬೇಪಾರಿ ಹಿಂದೂ ವೀರರು ಸೈಟು, ಬ್ಯಾಂಕು ಬ್ಯಾಲೆನ್ಸು, ಮಿರಿಮಿರಿ ಮಿಂಚುವ ಕಾರು, ಚೈನು, ಬ್ರಾಸ್‌ಲೈಟ್ ಹೊಂದಿ ಥೇಟು ಶ್ರೀಮನ್ನಾರಾಯಣ ನಂತೆ ಮಿಂಚುತ್ತಿದ್ದಾರೆ. ಸದಾ ನಗುವ ಸದಾನಂದರು ತಾನು ನಡೆಸುವ ಶಾಲೆಗೆ ಎಕರೆಗಟ್ಟಲೆ ಅರಣ್ಯಭೂಮಿ ಯನ್ನು ಸರಕಾರದಿಂದ ರಾತ್ರಿ ಬೆಳಗಾಗು ವುದರಲ್ಲಿ ಪಡೆದದ್ದು ನೋಡಿ ಯಡಿಯೂರಪ್ಪನ ಸರಕಾರದ ನೀತಿಯಿಂದ ತಮ್ಮ ಕುಮ್ಕಿ, ಬಾಣೆ ಕೃಷಿ ಭೂಮಿ ಕಳೆದು ಕೊಳ್ಳುತ್ತಿರುವ ರೈತರು, ಅಭಿವೃದ್ಧಿಯ ರಭಸಕ್ಕೆ ವಸತಿ ಹೀನರಾಗಿರುವ ನಿವೇಶನ ರಹಿತರು ನಿಟ್ಟುಸಿರು ಬಿಡುತ್ತಿದ್ದಾರೆ. ಭಜರಂಗಿ ಕಪಿಸೈನ್ಯದ ಮುಖಂಡರು ದೋ ನಂಬರ್ ವ್ಯವಹಾರದಲ್ಲಿರುವ ಕೆಲ ಬ್ಯಾರಿಗಳೊಂದಿಗೆ ಸ್ನೇಹ ಕುದುರಿಸಿ ಮರಳು, ಮಣ್ಣು ಅಕ್ರಮ ವ್ಯವಹಾರ, ರಾಜಿ ಪಂಚಾತಿಕೆಗಳ ಡೀಲ್ ನಡೆಸಿ ಸುಭಗರೆನಿಸಿಕೊಳ್ಳುತ್ತಿದ್ದಾರೆ.

ಜನ ಕಂಗಾಲು

ಈ ರೀತಿ 'ವಿಜಯನಗರದ ಗತವೈಭವ' ರಾಮರಾಜ್ಯದ ಸುಭಿಕ್ಷೆ ಹಿಂದೂ ವೀರರಿಗೆ ಒದಗಿರುವುದನ್ನು ಕಂಡು ಕಂಗಾಲಾಗಿರುವ ಕೆಳಜಾತಿ, ಕೆಳವರ್ಗದ ಜನತೆ ಮಾತನಾಡುವುದನ್ನು ಮರೆತು ಮುಂದಿನ ಚುನಾವಣೆಯ


ಪೊಲೀಸರ ದಾಳಿ


ಬೆದರಿದ ಮಕ್ಕಳು

ದಾರಿ ಕಾಯುತ್ತಿದ್ದರೆ, ಇದರ ವಾಸನೆ ಹತ್ತಿದ ಖಾಕಿ ಚಡ್ಡಿದಾರಿಗಳು ನಿದ್ರೆಗೆಟ್ಟು ಸಾಮ್ರಾಜ್ಯ ಉಳಿಸಲು ಹಗ್ಗ ಹೊಸೆಯತೊಡಗಿದ್ದಾರೆ. ಅದರ ಭಾಗವಾಗಿಯೇ ಈಗ ನಡೆಯುತ್ತಿರುವ ಹೊಸ ಕಾರ್ಯಾಚರಣೆ 'ಆಪರೇಷನ್ ಕ್ರಿಶ್ಚಿಯನ್ ಆಶ್ರಮ' ಹೇಗೂ ಜಸ್ಟಿಸ್ ಸೋಮಶೇಖರ್‌ರವರ ನ್ಯಾಯಾಂಗ ತನಿಖೆಯ ವರದಿ ಎಂಬ ಪ್ರಹಸನದ ಊರುಗೋಲು ಬತ್ತಳಿಕೆಯಲ್ಲಿ ಇತ್ತಲ್ಲ. ಮಂಗಳೂರಿನಲ್ಲಿ ಅನಾದಿ ಕಾಲದಿಂದಲೂ ಕ್ರಿಶ್ಚಿಯನ್ ಮಿಷನರಿಗಳು ಶಿಕ್ಷಣ ಸಂಸ್ಥೆ, ಆಸ್ಪತ್ರೆ ಅನಾಥಾಲಯಗಳನ್ನು ನಡೆಸುತ್ತಿರು ವುದು ಎಲ್ಲರಿಗೂ ಗೊತ್ತಿರುವ ವಿಷಯ. ಇತ್ತೀಚೆಗೆ ಕ್ರಿಶ್ಚಿಯನ್ ಧರ್ಮದಲ್ಲಿ ಹೊಸ ಪಂಥಗಳು ಹುಟ್ಟಿದ ನಂತರ ಅವುಗಳ ಚಟುವಟಿಕೆಗಳನ್ನೇ ನೆಪ ಮಾಡಿಕೊಂಡು ಮಿಷಿನರುಗಳು ಸೇವೆಯ ಹೆಸರಿನಲ್ಲಿ ಮತಾಂತರ ನಡೆಸುತ್ತಿದ್ದಾರೆ ಎಂಬ ಹಳಸಲು ವಿಷಯವನ್ನೇ ಮತ್ತೊಮ್ಮೆ ಎತ್ತಲಾಗಿದೆ. ಆದರೆ ಕಾರ್ಯಾಚರಣೆಯ ವಿಧಾನ ಮಾತ್ರ ಹೊಸದು.

ಹೊಸ ವಿಧಾನ

ತಮ್ಮ ಸರಕಾರದ ಭ್ರಷ್ಟಾಚಾರ, ಜನವಿರೋಧಿ ನೀತಿಗಳಿಂದ ರೋಸಿಹೋಗಿರುವ ಬಹುಸಂಖ್ಯಾತ ಜನತೆಯನ್ನು ಮತ್ತೆ ತಮ್ಮ ಹಿಂದುತ್ವದ ಆಕ್ಟೋಪಸ್ ಹಿಡಿತದಲ್ಲಿ ಕೆಡವಿಕೊಳ್ಳಲು ಆಮೂಲಕ ಮುಂದಿನ ಚುನಾವಣೆಗೆ ಮತ್ತು ರಕ್ತಸಿಕ್ತ ಕೈಗಳೊಂದಿಗೆ ಹೋಗಲು ತಯಾರಿ ನಡೆಸುತ್ತಿದ್ದಾರೆ. ಅದಕ್ಕಾಗಿ ಕ್ರಿಶ್ಚಿಯನ್ ಆಶ್ರಮಗಳಲ್ಲಿ ಈ ವರ್ಷದ ಶೈಕ್ಷಣಿಕ ಅವಧಿಯನ್ನು ಮುಗಿಸಿ ತಮ್ಮ ಮನೆಗಳಿಗೆ ತೆರಳುತ್ತಿರುವ ಉತ್ತರಕರ್ನಾಟಕ ಮೂಲದ ದಲಿತ, ಬಡಮಕ್ಕಳನ್ನು ಅಸ್ತ್ರವನ್ನಾಗಿಸಿ ಕ್ರಿಶ್ಚಿಯನ್ ಆಶ್ರಮಗಳ ಮೇಲೆ ಇಲ್ಲಿನ ಕೋಮುಸೌಹಾರ್ದತೆಯ ಮೇಲೆ ದಾಳಿ ನಡೆಸುತ್ತಿದ್ದಾರೆ. ಹಳೆಯಂಗಡಿಯ ಎನಿಜಬೆತ್ ಆಶ್ರಮ, ಕಾಂಗ್ರೆಸ್ ಮುಖಂಡ ಪಾಲಿಕೆಯ ವಿರೋಧ ಪಕ್ಷದ ನಾಯಕ ಲ್ಯಾನ್ಸಿಲೆಟ್ ಪಿಂಟೋ ನಡೆಸುವ ಆಶ್ರಮದ ಮೇಲೆ ದಾಳಿಗಳಾಗಿವೆ. ಉಳ್ಳಾಲದ ಸ್ಟೆಲ್ಲಾ ಮೇರಿ ಕಾನ್ವೆಂಟ್ ಎಂಬ ಪುರಾತನ ಆಶ್ರಮದ ವಿದ್ಯಾರ್ಥಿಗಳು ಖಾಸಗಿ ಬಸ್‌ಗಳಲ್ಲಿ ಊರಿಗೆ ತೆರಳುವ ಸಂದರ್ಭದಲ್ಲಿಯೇ ಬಜರಂಗಿ ಪುಂಡರು ದಾಳಿ ನಡೆಸಿದ್ದಾರೆ. ಪುಟ್ಟ ಮಕ್ಕಳನ್ನು ಅಮಾನವೀಯವಾಗಿ ಅರ್ಧ ದಾರಿಯಲ್ಲಿ ತಡೆದು ಮಕ್ಕಳನ್ನು ಮತಾಂತರಗೊಳಿಸಲು ಕಳ್ಳ ಸಾಗಾಟ ನಡೆಸಲಾಗುತ್ತಿದೆ ಎಂದು ಬೊಬ್ಬೆ ಹೊಡೆದಿದ್ದಾರೆ. ಮಕ್ಕಳನ್ನು ಬೆದರಿಸಿ ಆಶ್ರಮದ ವಿರುದ್ಧ ಹೇಳಿಕೆ ನೀಡುವಂತೆ ಒತ್ತಡ ಹೇರಿದ್ದಾರೆ. ಯಥಾಪ್ರಕಾರ ಬಜರಂಗಿಗಳ ತಾಳಕ್ಕೆ ತಕ್ಕಂತೆ ಕುಣಿಯುವ ಪೊಲೀಸರು ಆಶ್ರಮ ನಡೆಸುವವರ ಮೇಲೆಯೇ ಕೇಸು ದಾಖಲಿಸಿದ್ದಾರೆ. ಈ ಬಾರಿಯ ವಿಶೇಷ ಎಂಬಂತೆ ಆಶ್ರಮಗಳ ಮೇಲಿನ ದಾಳಿಗಳ ಸಂದರ್ಭದಲ್ಲಿ ಪೊಲೀಸರು ಮಾತ್ರವಲ್ಲದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಕ್ಕಳ ಕಲ್ಯಾಣ ಸಮಿತಿಗಳನ್ನು ಬಹಳ ಯೋಜಿತವಾಗಿ ಬಳಸಲಾಗಿದೆ. ಬಜರಂಗಿ ಪುಂಡರು ದಲಿತ ಮಕ್ಕಳೇ ಬಹುಸಂಖ್ಯಾತರಲ್ಲಿದ್ದ ಬಸ್‌ಗಳನ್ನು ತಡೆದು ಮತಾಂತರ ಗೊಳಿಸಲು ಕೊಂಡೊಯ್ಯಲಾಗುತ್ತಿದೆ ಎಂದು ಬೊಬ್ಬೆ ಶುರುಹಚ್ಚಿದ ತಕ್ಷಣವೇ ಅಲ್ಲಿ ಪೊಲೀಸರೊಂದಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸ್ವತಂತ್ರ ಅಸ್ತಿತ್ವದ ನ್ಯಾಯಾಂಗದ ಸ್ಥಾನಮಾನ ಹೊಂದಿರುವ ಮಕ್ಕಳ ಕಲ್ಯಾಣ ಸಮಿತಿಯ ಪ್ರಮುಖರು ಸ್ಥಳದಲ್ಲಿ ಪ್ರತ್ಯಕ್ಷವಾಗುತ್ತಾರೆ. ಮಕ್ಕಳನ್ನು ಮತ್ತು ಅವರ ಜೊತೆಗಿರುವ ಆಶ್ರಮದವರನ್ನು ಯಾವುದೇ ಮುಲಾಜಿಲ್ಲದೆ ರಿಮ್ಯಾಂಡ್ ಹೋಂಗೆ ಪೊಲೀಸರ ಮೂಲಕ ಕಳುಹಿಸಿಕೊಡಲಾಗುತ್ತದೆ. ಆನಂತರ ವಿಚಾರಣೆಯ ನಾಟಕ ನಡೆಯುತ್ತದೆ. ಇತ್ತೀಚೆಗೆ ಸರಕಾರ ಸುತ್ತೋಲೆಯನ್ನು ಹೊರಡಿಸಿ ಮಕ್ಕಳಿಗೆ ಆಶ್ರಯ ನೀಡುವ ಸಂಸ್ಥೆಗಳು ಕಡ್ಡಾಯವಾಗಿ ನೊಂದಾವಣೆಗೊಳ್ಳಬೇಕು ಎಂದು ಆದೇಶಿಸಿದೆ. ಅದರಂತೆ ಈ ತಿಂಗಳ ಅಂತ್ಯದೊಳಗೆ ಎಲ್ಲಾ ಸಂಸ್ಥೆಗಳಿಗೆ ನೊಂದಾಯಿಸಿಕೊಳ್ಳಲು ಕಾಲಾವಕಾಶ ನೀಡಲಾಗಿದೆ. ಆದರೆ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳದ ಪರಿವಾರ ಪ್ರೇರಿತ ಸರಕಾರಿ ಇಲಾಖೆ ಮತ್ತು ಮಕ್ಕಳ ಕಲ್ಯಾಣ ಸಮಿತಿ ಹಳೆಯಂಗಡಿಯ ಆಶ್ರಮ ಮತ್ತು ಪಾಲಿಕೆ ವಿರೋಧ ಪಕ್ಷದ ನಾಯಕ ಲ್ಯಾನ್ಸ್ ಲೆಟ್ ಪಿಂಟೋ ಅವರ ಆಶ್ರಮ ಅನಧಿಕೃತ ಎಂದು ಸಾರಿ ಮಕ್ಕಳ ಕಳ್ಳಸಾಗಾಣಿಕೆಯ ಕೇಸನ್ನು ದಆಖಲಿಸಿದ್ದಾರೆ. ಪೊಲೀಸ್ ಠಾಣೆಗಳಲ್ಲಿ ಚಡ್ಡಿ ವೀರರ ಸಮ್ಮುಖದಲ್ಲಿಯೇ ಆಶ್ರಮದ ಆಡಳಿತಗಾರರನ್ನು ಕ್ರಿಮಿನಲ್‌ಗಳೆಂಬಂತೆ ಬಿಂಬಿಸಲಾಗಿದೆ. ಪಾಲಿಕೆಯ ವಿರೋಧಪಕ್ಷದ ನಾಯಕ ದೇಶವನ್ನು ಆಳುತ್ತಿರುವ ಪಕ್ಷದ ಪ್ರಮುಖನಿಗೆ ಅಲ್ಪಸಂಖ್ಯಾತನೆಂಬ ಕಾರಣಕ್ಕೆ ಈ ಪರಿಸ್ಥಿತಿ ಬಂತೆಂದರೆ ಕರಾವಳಿಯಲ್ಲಿ ಎಲ್ಲವೂ ಹೇಗೆ ಭಜರಂಗಮಯವಾಗಿದೆ ಎಂದು ಆಲೋಚಿಸಿ ಈ ಸುದ್ದಿಗಳನ್ನು ಇಲ್ಲಿನ ಕೇಸರಿಮಯವಾಗಿರುವ ಪ್ರಮುಖ ಪತ್ರಿಕೆಗಳು ಮತಾಂತರದ ಕೃತ್ಯ ಎಂಬಂತೆ ವರದಿ ಮಾಡಿವೆ. ಈ ಪ್ರಕರಣಗಳು ನಿಧಾನಕ್ಕೆ ಜಿಲ್ಲೆಯ ವಾತಾವರಣವನ್ನು ಮತ್ತೆ ಬಿಸಿಯೇರಿಸತೊಡಗಿದವು. ಸ್ಟೆಲ್ಲಾ ಮೇರಿಸ್ ಆಶ್ರಮದ ಮಕ್ಕಳನ್ನು ತಡೆದದ್ದು ಮಾತ್ರ ಅತಿರೇಕದ ಪರಮಾವಧಿ ಮುಟ್ಟಿ ಕ್ರೈಸ್ತರು ಸಿಡಿದೇಳುವಂತೆ ಮಾಡಿದೆ. ಯಥಾಪ್ರಕಾರ ಸ್ಟೆಲ್ಲಾ ಮೇರಿಸ್ ಆಶ್ರಮದಲ್ಲಿದ್ದ ಬೀದರ್‌ನ ಬಹುತೇಕ ದಲಿತ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಊರಿಗೆ ತೆರಳುವಾಗ ಯಥಾಪ್ರಕಾರ ಸಿನಿಮೀಯ ರೀತಿಯಲ್ಲಿ

ಪುಟ 13 ಕ್ಕೆ



2011 ಮೇ ದಿನ ಪ್ರಣಾಳಿಕೆಯ ಕರೆ

ನವ-ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯನ್ನೇ ಹಿಮ್ಮೆಟ್ಟಿಸುವ ಐಕ್ಯ ಹೋರಾಟ

ಮೇ ದಿನದ ಸಿಐಟಿಯು ಪ್ರಣಾಳಿಕೆ ಹೊರಬಂದಿದೆ. ಅದು ಗುರುತಿಸಿರುವ ಈ ಸಂದರ್ಭದ ಜ್ವಲಂತ ಸವಾಲು ಏನು? ಕಾರ್ಮಿಕ ವರ್ಗದ ಮುಂದಿರುವ ಗುರುತರ ಹೊಣೆಗಾರಿಕೆ ಏನು?

ನಮ್ಮ ದೇಶದ ಆಳುವ ರಾಜಕೀಯ ವ್ಯವಸ್ಥೆ ದೊಡ್ಡ ಕಾರ್ಪೊರೇಟ್ ವಲಯದ ಕೈಸೆರೆಯಾಗಿದೆ, ಪ್ರತಿಯೊಂದು ಕೆಲಸದ ಸ್ಥಳದಲ್ಲಿ ಕಾರ್ಮಿಕರ ಹಕ್ಕುಗಳು ಮತ್ತು ಜೀವನೋಪಾಯಗಳ ಮೇಲೆ ಎರಗಿ ದಾಳಿಗಳನ್ನು ನಡೆಸಲಾಗುತ್ತಿದೆ. ಇವನ್ನು ಎದುರಿಸಲು, ಅವುಗಳ ವಿರುದ್ಧ ಸೆಣಸಲು ಕಾರ್ಮಿಕ ವರ್ಗದ ಸರ್ವವ್ಯಾಪಿ ಐಕ್ಯತೆಯನ್ನು ಕಟ್ಟಲು ಕೆಲಸ ಮಾಡಬೇಕು; ಕೆಲಸದ ಸ್ಥಳದಲ್ಲಿ ಶ್ರಮಿಕ ಹಕ್ಕುಗಳ ಮೇಲೆ ದಾಳಿಗಳ ವಿರುದ್ಧ ಹೋರಾಟಕ್ಕೆ ಪೂರಕವಾಗಿ ಬೇರೆಲ್ಲದರಲ್ಲಿಯೂ ಸೌಹಾರ್ದ ಕಾರ್ಯಾಚರಣೆಗಳನ್ನು ನಡೆಸಬೇಕು. ಸೌಹಾರ್ದ ಕ್ರಮಗಳು ದುಡಿಯುವ ಜನಗಳ ದೈನಂದಿನ ಸಾಮೂಹಿಕ ಜೀವನದ ಅಭಿನ್ನ ಅಂಗವಾಗಬೇಕು ಇದು ಈ ವರ್ಷದ ಮೇ ದಿನದ ಕರೆ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ತನ್ನ 2011ರ ಮೇದಿನದ ಕರೆಯಲ್ಲಿ ಕಾರ್ಮಿಕ ವರ್ಗಕ್ಕೆ ಹೇಳಿದೆ.

ಕಾರ್ಮಿಕ ವರ್ಗ ಎಲ್ಲಾ ಬಣ್ಣಗಳ ವಿಭಜನಕಾರಿ ಶಕ್ತಿಗಳ ವಿರುದ್ಧ- ಕೋಮುವಾದಿ, ಜಾತಿವಾದಿ ಮತ್ತು ಸಂಕುಚಿತವಾದಿ ಶಕ್ತಿಗಳ ವಿರುದ್ಧ ಎಚ್ಚರದಿಂದಿರಬೇಕು ಮತ್ತು ಅವುಗಳ ವಿರುದ್ಧ ಹೋರಾಡಬೇಕು, ಅದೇ ವೇಳೆಗೆ, ದಮನ ಮತ್ತು ಶೋಷಣೆಯ ವಿರುದ್ಧ ಹೋರಾಟದಲ್ಲಿ ಕಾರ್ಮಿಕ ವರ್ಗದ ಮತ್ತು ಜನತೆಯ ಐಕ್ಯತೆಯನ್ನು ರಕ್ಷಿಸಬೇಕು ಮತ್ತು ವಿಸ್ತರಿಸಬೇಕು ಎಂದು ಮುಂದುವರೆದು ಅದು ಕರೆ ನೀಡಿದೆ.

ಒಂದು ವರ್ಷದ ಬೆಳವಣಿಗೆಗಳ ಪರಾಮರ್ಶೆ

ಸಿಐಟಿಯುನ 'ಮೇದಿನ ಪ್ರಣಾಳಿಕೆ, 2011' ಎಂದಿನಂತೆ ಕಳೆದ ಒಂದು ವರ್ಷದ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಬೆಳವಣಿಗೆಗಗಳ ಪರಾಮರ್ಶೆಯನ್ನು ಮುಂದಿಡುತ್ತಾ ಈ ವರ್ಷದ ಮೇ ದಿನವನ್ನು, ಅಂತರ್ರಾಷ್ಟ್ರೀಯವಾಗಿ, ಬಂಡವಾಳಶಾಹಿ ವ್ಯವಸ್ಥೆಯ ಅತೀ ಕೆಟ್ಟ ಜಾಗತಿಕ ಬಿಕ್ಕಟ್ಟನ್ನು ಅನುಸರಿಸಿ ಶ್ರಮಜೀವಿಗಳ ಹಕ್ಕುಗಳು ಮತ್ತು ಜೀವನೋಪಾಯದ ಮೇಲೆ ನಡೆದಿರುವ ದಾಳಿಗಳ ವಿರುದ್ಧ ವಿಶ್ವಾದ್ಯಂತ ವ್ಯಾಪಕ ಪ್ರತಿಭಟನಾ ಪ್ರದರ್ಶನಗಳು ಮತ್ತು ಐಕ್ಯ ಕಾರ್ಯಾಚರಣೆಗಳ ನಡುವೆ ಆಚರಿಸಲಾಗುತ್ತಿದ್ದರೆ, ನಮ್ಮ ದೇಶದಲ್ಲಿ ಕಾರ್ಮಿಕ ಆಂದೋಲನದ ಎರಡು ಪ್ರಧಾನ ಬಲಿಷ್ಠ ನೆಲೆಗಳಾಗಿರುವ ರಾಜ್ಯಗಳಲ್ಲಿ ನಡೆಯುತ್ತಿರುವ ಒಂದು ಗಂಭೀರ ರಾಜಕೀಯ ಸಮರದ ನಡುವೆ ಆಚರಿಸಲಾಗುತ್ತಿದೆ ಎಂದು ಹೇಳಿದೆ. ಬಂಡವಾಳಶಾಹಿ ದುಡಿಯುವ ಜನರ ಲೂಟಿ, ಸುಲಿಗೆ ಮತ್ತು ವಂಚನೆಯ ಮೇಲೆ ನಿಂತಿರುವ ವ್ಯವಸ್ಥೆ ಎಂದು ಜಗತಿನಲ್ಲೂ, ಭಾರತದಲ್ಲೂ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ತಮ್ಮ ಬೆವರು, ರಕ್ತ ಸುರಿಸಿ ಸಂಪತ್ತು ಉತ್ಪಾದಿಸಿ, ದೇಶದ ಜಿಡಿಪಿ ಅಂಕೆ-ಸಂಖ್ಯೆಯನ್ನು ಮೇಲಕ್ಕೇರಿಸುವ ಜನತೆಯನ್ನು ಈ ರೀತಿ ಲೂಟಿ ಮತ್ತು ಸುಲಿಗೆಗೆ ಗುರಿಪಡಿಸುವ ವ್ಯವಸ್ಥೆಗೆ, ಕಾರ್ಪೊರೇಟ್ ವಲಯದ ಕೈಸೆರೆಯಾಗಿರುವ ಧೋರಣೆಗಳಿಗೆ ಪ್ರತಿರೋಧ ಒಡ್ಡುವಲ್ಲಿ ಶ್ರಮಜೀವಿ ವರ್ಗವನ್ನು ಒಂದುಗೂಡಿಸಲು ತನ್ನ ಮುತುವರ್ಜಿಯನ್ನು ದ್ವಿಗುಣಗೊಳಿಸುವ ಪಣ ತೊಡುವುದಾಗಿ ಸಿಐಟಿಯು ಈ ಪ್ರಣಾಳಿಕೆಯಲ್ಲಿ ಹೇಳಿದೆ.

ಅರಬ್ ಜಗತ್ತಿನಲ್ಲಿ ಸರ್ವಾಧಿಕಾರಶಾಹಿ ಆಳ್ವಿಕೆಯ ವಿರುದ್ಧ ಮತ್ತು ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಜನಗಳು ಹೆಚ್ಚೆಚ್ಚು ಪ್ರಮಾಣದಲ್ಲಿ ದನಿ ಎತ್ತುತ್ತಿದ್ದಾರೆ. ಟ್ಯುನಿಸಿಯಾದಲ್ಲಿ ಜನತೆಯ ಬಂಡಾಯದೊಂದಿಗೆ ಮತ್ತು ನಂತರ ಇಜಿಪ್ಟಿನಲ್ಲಿ ಹೊಸ್ನಿ ಮುಬಾರಕ್ ಸರಕಾರವನ್ನು ಪದಚ್ಯುತಗೊಳಿಸುವುದರೊಂದಿಗೆ ಆರಂಭವಾದ ಇದು ಅಲೆಅಲೆಯಾಗಿ ಹರಡಿ ಬಹ್ರೇನ್, ಲಿಬ್ಯ, ಯೆಮೆನ್, ಒಮನ್, ಜೋರ್ಡಾನ್, ಮೊರೊಕ್ಕೊ, ಟರ್ಕಿ, ಅಲ್ಜೀರಿಯ ಮತ್ತು ಇತರ ಸ್ಥಳಗಳಿಗೆ ಹರಡಿ, ಹೆಚ್ಚಿನ ದೇಶಗಳಲ್ಲಿ ಒಂದು ಹೆಚ್ಚು ಪ್ರಜಾಸತ್ತಾತ್ಮಕವಾದ ವ್ಯವಸ್ಥೆಯತ್ತ ಬದಲಾವಣೆಯ ಸಾಧ್ಯತೆಗಳನ್ನು ತೆರೆದಿಟ್ಟಿದೆ. ನಿರಂಕುಶ ಪ್ರಭುತ್ವದ ವಿರುದ್ಧ ಜನಗಳು ಈ ರೀತಿ ದನಿ ಎತ್ತುತ್ತಿರುವಾಗ ಇದರಲ್ಲಿ ಈ ಹೆಚ್ಚಿನ ದೇಶಗಳಲ್ಲಿ ಕಾರ್ಮಿಕ ವರ್ಗ ನಿರ್ಣಾಯಕ ಮುಂಚೂಣಿ ಪಾತ್ರ ವಹಿಸಿದೆ ಎಂಬುದು ಹೆಮ್ಮೆಯ ಸಂಗತಿ ಎಂದು ಸಿಐಟಿಯು ಪ್ರಣಾಳಿಕೆ ಹೇಳಿದೆ.

ಹೋರಾಟಗಳ ಅಲೆ


ಇದು ಜಾಗತಿಕ ರಾಜಕಾರಣದಲ್ಲಿ ಒಂದು ಸಕಾರಾತ್ಮಕ ಬೆಳವಣಿಗೆ ಎಂದು ಸ್ವಾಗತಿಸುತ್ತಲೇ, ಸಿಐಟಿಯು, ಈ ಸನ್ನಿವೇಶದಲ್ಲಿ ಹಸ್ತಕ್ಷೇಪ ಮಾಡಲು ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ನಾಟೊ ಕೂಟ ಸೈತಾನೀ ತಂತ್ರವನ್ನು ಅನುಸರಿಸುತ್ತಿದೆ ಎಂದು ಆತಂಕ ಮತ್ತು ಕಳವಳ ವ್ಯಕ್ತಪಡಿಸಿದೆ. ಲಿಬ್ಯದಲ್ಲಿ ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯದ ನೆವ ಮಾಡಿಕೊಂಡು ನಾಗರಿಕರನ್ನು ರಕ್ಷಿಸುವ ಹೆಸರಿನಲ್ಲಿ ನಾಟೊ ನಡೆಸಿದ ಸಾಮೂಹಿಕ ವಿಮಾನದಾಳಿಗಳು ವಾಸ್ತವವಾಗಿ ನಾಗರಿಕರನ್ನೇ ದೊಡ್ಡ ಪ್ರಮಾಣದಲ್ಲಿ ಕೊಂದಿವೆ, ಜತೆಯಲ್ಲಿ ತೈಲಸಂಪನ್ನ ಲಿಬ್ಯದಲ್ಲಿ ತನ್ನ ಹತೋಟಿಯನ್ನು ಮರುಸ್ಥಾಪಿಸುವ ಸಾಮ್ರಾಜ್ಯಶಾಹಿಯ ಹುನ್ನಾರವನ್ನು ಬಯಲು ಮಾಡಿದೆ. ಅದೇ ಅಮೆರಿಕನ್ ಆಡಳಿತ ಬಹ್ರೇನ್‌ನಲ್ಲಿ ನಿರಂಕುಶ ಪ್ರಭುತ್ವದ ವಿರುದ್ಧ, ಪ್ರಜಾಸತ್ತಾತ್ಮಕ ಬದಲಾವಣೆಗಳನ್ನು ಆಗ್ರಹಿಸುತ್ತಿರುವ ನಾಗರಿಕರ ಮೇಲೆ ಅಲ್ಲಿನ ನಿರಂಕುಶ ಖಲೀಫಾನ ಆಡಳಿತವನ್ನು ಉಳಿಸಲು ಸೌದಿ ಅರೇಬಿಯದ ಮಿಲಿಟರಿ ಹಸ್ತಕ್ಷೇಪವನ್ನು ಬೆಂಬಲಿಸಿದಾಗ ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿಯ ಗೋಸುಂಬೆತನ ಬಟ್ಟಬಯಲಾಗಿದೆ. ಟ್ಯುನಿಸಿಯ ಮತ್ತು ಯೆಮೆನ್‌ನಲ್ಲಿಯೂ ಅಲ್ಲಿನ ಸರ್ವಾಧಿಕಾರಿಗಳು ಪ್ರತಿಭಟನೆಗಿಳಿದ ತಮ್ಮ ನಾಗರಿಕರನ್ನು ಕೊಲ್ಲುತ್ತಿರುವಾಗ, ಊನಗೊಳಿಸುತ್ತಿರುವಾಗ ಇದೇ ಸಾಮ್ರಾಜ್ಯಶಾಹಿಗಳು ಆ ಅಮಾನುಷ ದಮನಗಳಿಗೆ ಪರೋಕ್ಷ ಬೆಂಬಲವನ್ನೂ ನೀಡಿದ್ದಾರೆ. ಆದ್ದರಿಂದ ಈ ಕೆಲವು ದೇಶಗಳಲ್ಲಿ ಸಾಮ್ರಾಜ್ಯಶಾಹಿಯ ಮತ್ತು ಸಾಮ್ರಾಜ್ಯಶಾಹಿ-ಬೆಂಬಲಿತ ಆಕ್ರಮಣಕಾರಿ ಹಸ್ತಕ್ಷೇಪವನ್ನು ಖಂಡಿಸುವಲ್ಲಿ ಜಗತ್ತಿನ ಶಾಂತಿಪ್ರಿಯ ಸಮುದಾಯದ ಜತೆಗೆ ದನಿಗೂಡಿಸುವುದಾಗಿ ಪ್ರಣಾಳಿಕೆ ಹೇಳಿದೆ.

ಕಳೆದ 2010ರ ಮೇದಿನದ ನಂತರದ ಅವಧಿಯಲ್ಲಿ ಸಮಸ್ತ ಯುರೋಪು ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳೂ ಕೂಡ ಸಮರಶೀಲ ಮುಷ್ಕರ ಕಾರ್ಯಾಚರಣೆಗಳು

ಪುಟ 15 ಕ್ಕೆ

ವಿಕಿಲೀಕ್ಸ್ ಮತ್ತು ಭಾರತ

ಅಮೆರಿಕಾ ತನ್ನ ಆರ್ಥಿಕ, ರಾಜಕೀಯ ಮತ್ತು ಮಿಲಿಟರಿ ಆಧಿಪತ್ಯಕ್ಕೆ ಹೆಚ್ಚುತ್ತಿರುವ ವಿರೋಧ ಮತ್ತು ತಾನು ಹೆಚ್ಚೆಚ್ಚು ಏಕಾಂಗಿಯಾಗು ತ್ತಿರುವುದನ್ನು ಕಂಡು ತನ್ನ ಪ್ರಭಾವವನ್ನು ಕ್ರೋಡೀಕರಿಸಲು ಹತಾಶವಾಗತೊಡಗಿದೆ. ಅದು ಭಾರತ ಉಪಖಂಡವೂ ಸೇರಿದಂತೆ



ಪೂರ್ವ ಗೋಳಾರ್ಧದ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆಳುವ ರಾಜಕೀಯ ವ್ಯವಸ್ಥೆಯ ಮೇಲೆ ತನ್ನ ಹಿಡಿತವನ್ನು ಬಿಗಿಗೊಳಿಸಲು ಹತಾಶ ಪ್ರಯತ್ನ ನಡೆಸುತ್ತಿದೆ. ಭಾರತದೊಂದಿಗೆ ಸಾಮರಿಕ ಮೈತ್ರಿ ಮತ್ತು ಭಾರತ-ಅಮೆರಿಕಾ ಪರಮಾಣು ವ್ಯವಹಾರ ಅದರ ಈ ಆಶಯದ ಅಭಿವ್ಯಕ್ತಿಗಳು. ಅಮೆರಿಕನ್ ಸಾಮ್ರಾಜ್ಯಶಾಹಿ, ಭಾರತವೂ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ತನ್ನ ಮಧ್ಯಪ್ರವೇಶ ಮತ್ತು ಹಸ್ತಕ್ಷೇಪಗಳಿಗೆ ಎಡ ಮತ್ತು ಪ್ರಗತಿಶೀಲ ಶಕ್ತಿಗಳ ವಿರೋಧವನ್ನು ದುರ್ಬಲಗೊಳಿಸಲು ತನ್ನ ಪಿತೂರಿ ಪ್ರಯತ್ನಗಳನ್ನು ದ್ವಿಗುಣಗೊಳಿಸಿದೆ. ಇತ್ತೀಚೆಗೆ ವಿಕಿಲೀಕ್ಸ್ ಬಯಲು ಮಾಡಿದ ಸಂಗತಿಗಳು ಹೇಗೆ ಅಮೆರಿಕನ್ ಆಡಳಿತ ದೀರ್ಘಕಾಲದಿಂದ ನಮ್ಮ ದೇಶದ ದೈನಂದಿನ ಆಡಳಿತವನ್ನು, ಮಂತ್ರಿಗಳ ನೇಮಕ, ರಾಜಕೀಯ ಮತ್ತು ಆರ್ಥಿಕ ರಂಗಗಳಲ್ಲೂ, ವಿದೇಶಾಂಗ ರಂಗದಲ್ಲೂ ಧೋರಣೆ ಕುರಿತ ಮಹತ್ವದ ನಿರ್ಣಯಗಳನ್ನು ವಿಚಾರಿಸಿಕೊಳ್ಳುತ್ತಿತ್ತು ಮತ್ತು ಮಧ್ಯಪ್ರವೇಶಿಸುತ್ತಿತ್ತು, ಅದೇ ವೇಳೆಗೆ ಭಾರತೀಯ ಆಳುವ ರಾಜಕೀಯ ವ್ಯವಸ್ಥೆ ಇದೊಂದು ಅನುಗ್ರಹ ಎಂಬಂತೆ ಈ ಪ್ರಕ್ರಿಯೆಗೆ ತನ್ನನ್ನು ಒಡ್ಡಿಕೊಂಡಿದೆ ಎಂಬುದನ್ನು ಬಯಲಿಗೆ ತಂದಿವೆ ಎಂದು ಸಿಐಟಿಯು ಪ್ರಣಾಳಿಕೆ ಅಭಿಪ್ರಾಯ ಪಟ್ಟಿದೆ.

ಕಾರ್ಮಿಕ ವರ್ಗದ ಕಣ್ಣೋಟದಿಂದ ಮಾತ್ರವೇ ಭ್ರಷ್ಟಾಚಾರದಿಂದ ಮುಕ್ತವಾದ ಸಮಾಜ ಸಾಧ್ಯ. ಭ್ರಷ್ಟಾಚಾರದ ನಿಜವಾದ ಮೂಲ ಬಂಡವಾಳಶಾಹಿಯೇ; ಅಧಿಕಾರದಲ್ಲಿರುವ ಹಲವಾರು ರಾಜಕಾರಣಿಗಳೇ ಸ್ವತಃ ಚಮಚಾಗಳಾಗಿ ಬಿಡುತ್ತಾರೆ, ಅವರ ಸಹಾಯದಿಂದ 'ಚಮಚಾ ಬಂಡವಾಳಶಾಹಿ' ಬೆಳೆಯುತ್ತಿದೆ. 'ಸಿವಿಲ್ ಸೊಸೈಟಿ' ಅಥವ 'ನಾಗರಿಕ ಸಮಾಜ' ಎಂಬ ಹೆಸರಿನಲ್ಲಿ ರಾಜಕೀಯವಲ್ಲದ ಪರ್ಯಾಯ ಎಂಬುದು ಪ್ರತಿಪಕ್ಷಗಳ ಸ್ಥಾನ ಪಡೆಯಬಹುದಷ್ಟೇ, ಆಳುವ ಮಂದಿಯನ್ನು ಬದಲಿಸಲಾರದು. ಇಲ್ಲಿಯೇ ಬರುವುದು ಕಾರ್ಮಿಕ ವರ್ಗದ ಪರ್ಯಾಯದ ಪ್ರಶ್ನೆ. ಓದಿ ಸಿಐಟಿಯುನ ರಾಜ್ಯ ಅಧ್ಯಕ್ಷರು ಮತ್ತು ಸಿ ಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್ ಅವರ ಲೇಖನ.



> ಬೂರ್ಷ್ವಾಸೀಯು ತನಗೇ ಸಾವು ತರುವ ಆಯುಧಗಳನ್ನು ರೂಪಿಸಿದೆಯಷ್ಟೇ ಅಲ್ಲ. ಈ ಆಯುಧಗಳನ್ನು ಬಳಸುವ ಜನರನ್ನೂ–ಆಧುನಿಕ ಕಾರ್ಮಿಕ ವರ್ಗವನ್ನೂ–ಶ್ರಮಜೀವಿಗಳನ್ನೂ ಸಹ ಅಸ್ತಿತ್ವಕ್ಕೆ ತಂದಿದೆ.
>
> **ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ**

'ಚಮಚಾ ಬಂಡವಾಳಶಾಹಿ' ಮತ್ತು ಕಾರ್ಮಿಕ ವರ್ಗದ ಪರ್ಯಾಯ


ಭಾರತ ಚಮಚಾ ಬಂಡವಾಳಶಾಹಿಗೆ ಬಲಿ ಬಿದ್ದಿದೆ, ಅದೀಗ ಒಂದು 'ಬಾಳೆಹಣ್ಣು ಗಣತಂತ್ರ' ವಾಗಿದೆ ಎಂದು ನವಂಬರ್ 27, 2010 ರಂದು, ಶ್ರೀಯುತ ರತನ್ ಟಾಟಾ ಹೇಳಿರುವುದಾಗಿ ದಾಖಲಾಗಿದೆ. ಭಾರತದ ಅತ್ಯಂತ ಹಳೆಯ ಮತ್ತು ಎಲ್ಲ ರಂಗಗಳನ್ನೂ ಹೊಕ್ಕಿರುವ ಗುತ್ತೇದಾರಿ ಗುಂಪಿನ ಮುಖ್ಯಸ್ಥನ ಈ ಮಾತು ಕೇವಲ ಆತನ ಅಭಿಪ್ರಾಯವಲ್ಲ, ಒಂದು ವಾಸ್ತವತೆಯ ಚಿತ್ರಣ ಕೂಡ.

ಸಾಮಾನ್ಯವಾಗಿ, 'ಚಮಚಾ ಬಂಡವಾಳಶಾಹಿ'(ಕ್ರೋನಿ ಕ್ಯಾಪಿಟಲಿಸಂ) ಅಂದರೆ ಪ್ರಭುತ್ವವನ್ನು ಕಾರ್ಪೊರೇಟುಗಳು, ರಾಜಕಾರಣಿಗಳೊಂದಿಗೆ, ಮಾಧ್ಯಮಗಳೊಂದಿಗೆ ಮತ್ತು ಒಂದು ಸಣ್ಣ ವಿಭಾಗದ ಹಿತಾಸಕ್ತಿಯಿಂದ ಅಧಿಕಾರ ಚಲಾಯಿಸುವ ಇತರ ಎಲ್ಲರೊಂದಿಗೆ ಕೂಟ ರಚಿಸಿಕೊಂಡು ನಡೆಸುವಂತದ್ದು. ಹೀಗೆ ಅದು 'ಮುಕ್ತ ಮಾರುಕಟ್ಟೆ' ಎಂದು ಜನ ಏನು ಹೇಳುತ್ತಾರೋ ಅದಕ್ಕೆ ವಿರುದ್ಧವಾದದ್ದು. ಏಕೆಂದರೆ ಈ ಕಾರ್ಪೊರೇಟ್ ಗುಂಪುಗಳು ಮತ್ತು ಕೆಲವೇ ಜನರ ಆಧಿಪತ್ಯ ಮುಕ್ತ ಮಾರುಕಟ್ಟೆಯ ಮುಕ್ತ ಬೆಳವಣಿಗೆಗೆ ಎಂದೆಂದೂ ಅವಕಾಶ ಕೊಡಲಾರವು. ಅವು ಆಡಳಿತದ ಎಲ್ಲ ಆಧಾರ ಸ್ಥಂಭಗಳನ್ನು 'ಭ್ರಷ್ಟ'ಗೊಳಿಸಿ, ತಮ್ಮದೇ ಧೋರಣೆಗಳನ್ನು ಸೃಷ್ಟಿಸುತ್ತವೆ ಮತ್ತು ಅವನ್ನೇ ಮುಂದಿಟ್ಟುಕೊಂಡು ಕೆಲಸ ಮಾಡುತ್ತವೆ. 2ಜಿ ಹಗರಣ ಬಯಲಾದಾಗ ನಾವು ಕಂಡಿರುವುದು ಇದನ್ನೇ.

ರತನ್ ಟಾಟಾ ಚಮಚಾ ಬಂಡವಾಳಶಾಹಿ ಎನ್ನುವಾಗ ಅದನ್ನು ತಪ್ಪೊಪ್ಪಿಗೆ ಎಂದು ಬಗೆಯುವುದೇ ಒಳ್ಳೆಯದು. ಎಲ್ಲ ತಪ್ಪೊಪ್ಪಿಗೆಗಳೂ ಪಶ್ಚಾತ್ತಾಪದಿಂದ ಆಗಿರಬೇಕೆಂದೇನೂ ಇಲ್ಲವಲ್ಲ. ಶ್ರೀಯುತ ರತನ್ ಟಾಟಾರಂತೆ ಯಾವುದೇ ಅಪರಾಧ ಭಾವನೆಯಿಲ್ಲದೆ ಒಪ್ಪಿಕೊಂಡಿರುವ ಸಂಗತಿಯಷ್ಟೇ. ಇದು ವಾಸ್ತವ. ಅದಕ್ಕೇನು? ಏನು ಮಾಡಲು ಸಾಧ್ಯ? ಇಲ್ಲಿಯೇ ಕಾರ್ಮಿಕ ವರ್ಗದ ಪರ್ಯಾಯವನ್ನು ಹೇಳುವ ಅಗತ್ಯ ಬರುವುದು. 'ಬಾಳೆಹಣ್ಣು ಗಣತಂತ್ರ' ಎಂಬ ಪದಗಳ ಅರ್ಥವನ್ನು ಸ್ವಲ್ಪ ವಿವರವಾಗಿ ನೋಡಿದ ಮೇಲೆ ಈ ಬಗ್ಗೆ ನೋಡೋಣ.



ನುಡಿಮುತ್ತು



ಕಾರ್ಮಿಕ ವರ್ಗವೇ .....

ಇಂದು ಬೂರ್ಷ್ವಾಸೀಯ ಎದುರಿಗೆ ಮುಖಾಮುಖಿಯಾಗಿ ನಿಂತಿರುವ ಎಲ್ಲ ವರ್ಗಗಳಲ್ಲೂ ಶ್ರಮಜೀವಿ ವರ್ಗವೇ ನಿಜಕ್ಕೂ ಕ್ರಾಂತಿಕಾರಿಯಾದ ವರ್ಗವಾಗಿದೆ. ಇತರ ವರ್ಗಗಳು ಆಧುನಿಕ ಕೈಗಾರಿಕೆಯ ಮುಂದೆ ನಶಿಸಿಕೊನೆಗೆ ಕಣ್ಮರೆಯಾಗುತ್ತವೆ; ಶ್ರಮಜೀವಿ ವರ್ಗವು ಮಾತ್ರ ಆಧುನಿಕ ಕೈಗಾರಿಕೆಯ ವಿಶೇಷ ಉತ್ಪನ್ನವಾಗಿದೆ. ಅಗತ್ಯ ಉತ್ಪನ್ನವಾಗಿದೆ.

ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ




'ಬಾಳೆಹಣ್ಣು ಗಣತಂತ್ರ'ವಾಗಿಸಿದ 'ಸಾಮರಿಕ ಮೈತ್ರಿ'

ಅಮೆರಿಕಾದ ಅಧ್ಯಕ್ಷ ಒಬಾಮ, ರತನ್ ಟಾಟಾರ ಈ ಚಮಚಾ ಬಂಡವಾಳಶಾಹಿ/ಬಾಳೆಹಣ್ಣು ಗಣತಂತ್ರದ ಹೇಳಿಕೆಗಿಂತ ಕೆಲವೇ ದಿನಗಳ ಹಿಂದೆ ಭಾರತವನ್ನು ಹೊಗಳಿದ್ದರು. ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಮಿಲಿಟರಿ–ಕೈಗಾರಿಕಾ ಸಂಕೀರ್ಣವೇ ಜಗತ್ತಿನ ಅತಿ ದೊಡ್ಡ ಚಮಚಾ ಬಂಡವಾಳಶಾಹಿ ಉದ್ದಿಮೆ. ಅದು ತಮ್ಮ ಮಿಲಿಟರಿ ಸರಕುಗಳಿಗೆ ಮಾರುಕಟ್ಟೆ ಹಿಡಿಯುವುದಷ್ಟೇ ಅಲ್ಲ, ಸಂಘರ್ಷ, ಗಳು ಮತ್ತು ಯುದ್ಧ ಮುಂತಾದವುಗಳನ್ನು ಸೃಷ್ಟಿಸುತ್ತದೆ. ಅದು 'ರಾಷ್ಟ್ರ'ಗಳನ್ನು ಈ ಚಮಚಾತನಕ್ಕೆ ಸೆಳೆಯುತ್ತದೆ. ಭಾರತವನ್ನು ಈಗಾಗಲೇ ತಮ್ಮ ಚಮಚಾವಾಗಿ ಸೆಳೆದುಕೊಂಡು ಅದು ತನ್ನ 'ಸಾಮರಿಕ ಮಿತ್ರ' (ಯುದ್ಧಮಿತ್ರ) ಎಂದು ತಮಟೆ ಬಾರಿಸುವಲ್ಲಿ ಅವರು ಯಶಸ್ವಿಯಾಗಿದೆ.

ಒಬಾಮ ಮತ್ತು ರತನ್ ಟಾಟಾರನ್ನು ಹಾಗೂ 2008ರ ಪರಮಾಣು ಸಂಧಿಯ ನಂತರದ ನಮ್ಮ ಅನುಭವವನ್ನು ಮತ್ತು ಜಾಗತಿಕ ಗುತ್ತೇದಾರಿಗಳ ಹಿತದೃಷ್ಟಿಯಿಂದ ನಮ್ಮನ್ನು ನಾವು ಆಳಿಕೊಳ್ಳುತ್ತಿರುವ ರೀತಿಯನ್ನು ಒಟ್ಟಿಗಿಟ್ಟು ನೋಡಿದಾಗ ನಮಗೆ 'ಬಾಳೆಹಣ್ಣು ಗಣತಂತ್ರ' ಎಂಬ ಪದದ ಅರ್ಥ ಸ್ಪಷ್ಟವಾಗುತ್ತದೆ. ಈ ಪದ ಮೂಲತಃ ಸೃಷ್ಟಿಯಾದದ್ದು ಲ್ಯಾಟಿನ್ ಅಮೆರಿಕಾದ ದೇಶಗಳನ್ನು ಸೂಚಿಸಲು. ಅವುಗಳನ್ನು ಆಗ ನಡೆಸುತ್ತಿದ್ದದ್ದು ಮಿಲಿಟರಿ ಸರ್ವಾಧಿಕಾರಿಗಳು ಮತ್ತು ಅವು ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗಾಗಿ ಬಾಳೆಹಣ್ಣುಗಳನ್ನು ಬೆಳೆಯುತ್ತಿದ್ದವು. ಲ್ಯಾಟಿನ್ ಅಮೆರಿಕ ಈ ಮಟ್ಟದಿಂದ ಹೊರಗೆ ಬಂದಿದೆ; ಅಲ್ಲಿನ ಹಲವು 'ಬಾಳೆಹಣ್ಣು ಗಣತಂತ್ರ'ಗಳು ಈಗ ಅಮೆರಿಕಾಕ್ಕೆ ವಿರುದ್ಧವಾಗಿರುವ ಜನತಾ ಗಣತಂತ್ರಗಳಾಗಿ ಪರಿವರ್ತನೆ ಗೊಂಡಿವೆ. 'ಬಾಳೆಹಣ್ಣು ಗಣತಂತ್ರ'ದ ಅರ್ಥ ಬದಲಾಗಿರುವುದು ಈ ಸಂದರ್ಭದಲ್ಲಿ.

ತನ್ನದೇ ನೆಲೆಯಲ್ಲಿ ಗಣತಂತ್ರವಾಗಿದ್ದ ಭಾರತ ಈಗ ಅಮೆರಿಕಾದ ಅಗತ್ಯಗಳನ್ನು ಪೂರೈಸುವ

ಪುಟ 14 ಕ್ಕೆ



ಜನಶಕ್ತಿ
ಕನ್ನಡ ವಾರಪತ್ರಿಕೆ



ದೊಡ್ಡ ಹಗರಣಗಳ ಸರಮಾಲೆಯ ಪಕ್ಷಿನೋಟ

ಸ್ವಾತಂತ್ರ್ಯದ ನಂತರ ಪ್ರಮುಖ ಭ್ರಷ್ಟಾಚಾರದ ಹಗರಣಗಳ ಪಟ್ಟಿ ಇಲ್ಲಿದೆ. ಇದೂ ಪೂರ್ಣ ಪಟ್ಟಿಯೂ ಅಲ್ಲ. ಇಲ್ಲಿರುವ ಅಂಕೆ ಸಂಖ್ಯೆಗಳೂ ನಿಖರವೂ ಅಲ್ಲ. ಹಗರಣಗಳನ್ನು ಮುಚ್ಚಿ ಹಾಕಲು ಕಾಲ್ತುದಿಯಲ್ಲಿ ನಿಂತಿರುವ ವ್ಯವಸ್ಥೆಯಲ್ಲಿ ಇದು ಅಚ್ಚರಿ ಪಡುವಂತದ್ದೂ ಅಲ್ಲ. ಆದರೆ ಇದು ಹಲವು ಸಂಗತಿಗಳನ್ನು ನಮಗೆ ಕಣ್ಣಿಗೆ ಹೊಡೆದ ಹಾಗೆ ತಿಳಿಸುತ್ತದೆ. ಒಂದು ಟ್ರೆಂಡ್ ತಿಳಿಸುತ್ತದೆ. ಈ ಕೆಲವು ಸಂಗತಿಗಳು ಹೀಗಿವೆ :

■ ಎನ್.ಕೆ.ವಸಂತ್‌ರಾಜ

- ಎಲ್ಲಾ ಹಗರಣಗಳ ಒಟ್ಟು ಲೂಟಿ 73 ಲಕ್ಷ ಕೋಟಿ ರೂ. ಎಂದು ಅಂದಾಜು ಮಾಡಲಾಗಿದೆ
- ಆರ್ಥಿಕ ಸುಧಾರಣೆಗಳು– ಜಾಗತೀಕರಣ ಆರಂಭವಾದ 1980 ರ ದಶಕದ



ಮಧ್ಯಭಾಗದ ಮೊದಲಿಗೂ ನಂತರದ ಹಗರಣಗಳಲ್ಲಿ ಅಜಗಜಾಂತರವಿದೆ.
- ಹಗರಣಗಳ ಸಂಖ್ಯೆ, ಲೂಟಿಯ ಪ್ರಮಾಣ, ಸರ್ಕಾರ–ಉದ್ಯಮಿಗಳು–ದಲ್ಲಾಳಿಗಳ ನಡುವಿನ ಸಂಬಂಧಗಳ ಘನಿಷ್ಟತೆ – ಎಲ್ಲವೂ 1980 ರ ದಶಕದ ಮಧ್ಯಭಾಗದ ನಂತರ ವಿಪರೀತವಾಗಿ ಹೆಚ್ಚಿದೆ
- ಬೋಫೋರ್ಸ್ ಮತ್ತು ಹರ್ಷದ್ ಮೆಹತಾ ಹಗರಣಗಳು ಈ ಸ್ಥಿತ್ಯಂತರದ ಪ್ರತೀಕಗಳು ಎನ್ನಬಹುದು
- ಭ್ರಷ್ಟಾಚಾರದ ಮೂಲ ಕಾರಣ – ಸರ್ಕಾರದಲ್ಲಿ ಆರ್ಥಿಕ–ರಾಜಕೀಯ ಅಧಿಕಾರಗಳ ಕೇಂದ್ರೀಕರಣ, ಲೈಸೆನ್ಸ್ ರಾಜ್ ಎಂದೆಲ್ಲಾ ಹಿಂದೂ–ಇಂದೂ ಹೇಳುತ್ತಿರುವವರ ಕಣಿ ಸುಳ್ಳಾಗಿದೆ
- ಮುಕ್ತ ಮಾರುಕಟ್ಟೆ ಸ್ವಯಂ–ನಿಯಂತ್ರಣ ಹೊಂದಿರುವ ವ್ಯವಸ್ಥೆ ದೊಡ್ಡ ಬೊಗಳೆ ಎಂದು ಸಿದ್ಧವಾಗಿದೆ. ಮುಕ್ತ ಮಾರುಕಟ್ಟೆಯೇ ಒಂದು ಭ್ರಮೆ ಎಂದೂ ಸಿದ್ಧವಾಗುತ್ತದೆ
- 1980 ರ ದಶಕದ ಮಧ್ಯಭಾಗದ ವರೆಗೆ ಸರ್ಕಾರಿ ಖರೀದಿಯಲ್ಲಿ ಪ್ರಮುಖ ಹಗರಣಗಳು ಇದ್ದವು.
- ಆ ನಂತರ ಉದ್ಯಮಿ–ವ್ಯಾಪಾರಿ–ದಲ್ಲಾಳಿಗಳಿಗೆ ಬೇಕಾದ ನೀತಿಗಳನ್ನು ,ಕ್ಸ ಮಾಡುವ, ಮುಕ್ತ ಮಾರುಕಟ್ಟೆಯ ಹೆಸರಲ್ಲಿ ಸಾರ್ವಜನಿಕರಿಂದ ಅನಿರ್ಬಂಧಿತವಾಗಿ ಹಣ ಸಂಗ್ರಹಿಸುವ, ಸಾರ್ವಜನಿಕ ಕಂಪನಿಗಳ ಖಾಸಗೀಕರಣ, ಬೆಲೆ ಬಾಳುವ ಸಾರ್ವಜನಿಕ ಸಂಪನ್ಮೂಲಗಳ (ಭೂಮಿ, ಗಣಿ, ತರಂಗಾಂತರ ಇತ್ಯಾದಿ) ಖಾಸಗೀಕರಣ ಮಾಡುವ ಅಥವಾ ಮೂರು ಕಾಸಿಗೆ ಮಾರುವುದು – ಮುಖ್ಯವಾಗಿ ಕಂಡು ಬರುತ್ತಿದೆ.
- ಈ ದಶಕದಲ್ಲಿ ನೀತಿಗಳನ್ನು ,ಕ್ಸ ಮಾಡುವುದರಿಂದ ಮಂತ್ರಿಗಳನ್ನೇ ,ಕ್ಸ ಮಾಡುವ (ಟಾಟಾ–ಅಂಬಾನಿಗಳಿಂದ ಅಥವಾ ಅಮೆರಿಕನ್ ಸರ್ಕಾರದಿಂದ) ಹಂತಕ್ಕೆ ಭ್ರಷ್ಟಾಚಾರ ಹೋಗಿದೆ.
- ಸಾವಿರಾರು ಕೋಟಿ ಕೊಟ್ಟು ಪಡೆದು ಉಳಿಸಿಕೊಂಡ ಅಧಿಕಾರವನ್ನು, ಲಕ್ಷಾಂತರ ಕೋಟಿ ರೂ. ಗಳಿಗೆ (ನೀತಿಗಳ ಮಂತ್ರಿಗಳ) ಹರಾಜು ಹಾಕಲಾಗುತ್ತಿದೆ.



- ಟಾಟಾ–ಅಂಬಾನಿಗಳಂತಹ ಉದ್ಯಮಿಗಳು ಕೆಲವು ಸಾವಿರ ಕೋಟಿ ರೂ.ಗಳನ್ನು ರಾಜಕಾರಣಿ–ಅಧಿಕಾರಿ–ದಲ್ಲಾಳಿಗಳಲ್ಲಿ ... ಲಕ್ಷಾಂತರ ಕೋಟಿ



ಲಾಭ ಲೂಟಿ ಮಾಡುತ್ತಿದ್ದಾರೆ
- ಕಾಂಗ್ರೆಸ್–ಬಿಜೆ ಮತ್ತಿತರ ಬೂರ್ಜ್ವಾ–ಭೂಮಾಲಕ ಪಕ್ಷಗಳ ನಡುವೆ ಈ ಬಗ್ಗೆ ಯಾವುದೇ ಅಂತರ ಇಲ್ಲ. ಎಡ ಪಕ್ಷಗಳು ಮಾತ್ರ ಇದಕ್ಕೆ ಅಪವಾದ.

ಉದಾರೀಕರಣದ ಮೊದಲು (1947–1985)

ಮುಂಧ್ರಾ (1957, ರೂ. 1.2 ಕೋಟಿ, ಮುಂಧ್ರಾ ಖಾಸಗಿ ವಿಮಾ ಕಂಪನಿಯ ಖರೀದಿ, ಅರ್ಥ ಮಂತ್ರಿ ಕೃಷ್ಣಮಾಚಾರಿ ರಾಜೀನಾಮೆ)

ಧರ್ಮತೇಜಾ ಸಾಲ (1960, 22 ಕೋಟಿ, ಜಯಂತಿ ಶಿ ್ಪಂಗ್ ಕಂಪನಿಗೆ ಕೊಟ್ಟ ಸಾಲ ಸ್ವಾಹಾ)

ಕೈರನ್ (1963, ಅಧಿಕಾರ ದುರುಪಯೋಗ ಮತ್ತು ಕುಟುಂಬದವರಿಗೆ ಲಾಭ ಮಾಡಿದ ಕ್ರಮಗಳು, ಭ್ರಷ್ಟಾಚಾರ ಆಪಾದನೆ ಮೇಲೆ ರಾಜೀನಾಮೆ ನೀಡಿದ ಮೊದಲ ಮುಖ್ಯಮಂತ್ರಿ)

ಬಿಜು ಪಟ್ನಾಯಕ್ (1967, ತನ್ನದೇ ಕಂಪನಿ ಕಳಿಂಗಾ ಟ್ಯೂಬ್ಸ್ ಗೆ ಸರ್ಕಾರಿ ಕಾಂಟ್ರಾಕ್ಟ್ ನೀಡಿದ್ದು ಬಯಲು, ರಾಜೀನಾಮೆ)

ಕುವೊ ತೈಲ ಒಪ್ಪಂದ (1976, 2.2 ಕೋಟಿ, ತೈಲ ಮಂತ್ರಿಯ ಆದೇಶದ ಮೇಲೆ ಇಂಡಿಯನ್ ಆಯಿಲ್ ಹಾಂಗ್ ಕಾಂಗಿನ ಕುವೋ ಎಂಬ ಇಲ್ಲದ ಕಂಪನಿಯಿಂದ ತೈಲ ಖರೀದಿ)

ಅಂತುಲೆ ಟ್ರಸ್ಟ್ (1981, 30 ಕೋಟಿ, ಸಿಮೆಂಟ್ ಮುಂತಾದ ಸರ್ಕಾರಿ ಖರೀದಿಗಳ ಮೇಲೆ ಆಧಾರಿತ ಹಣವನ್ನು ಖಾಸಗಿ ಟ್ರಸ್ಟಿನಲ್ಲಿ)

ಉದಾರೀಕರಣದ ನಂತರ (1985-2011)

ಎಚ್.ಡಿ.ಡಬ್ಲ್ಯೂ. ಕಮಿಶನ್ (1987, 20 ಕೋಟಿ, ಜರ್ಮನ್ ಸಬ್ ಮರೀನ್ ತಯಾರಕ ಎಚ್.ಡಿ.ಡಬ್ಲ್ಯೂ.ನಿಂದ ಖರೀದಿಯಲ್ಲಿ ಕಮಿಶನ್ ಆಪಾದನೆ, ಯಾವುದೇ ಕ್ರಮ ಇಲ್ಲ)

ಬೋಫೋರ್ಸ್ ಕಮಿಶನ್ (1987, 64 ಕೋಟಿ, ಬೋಫೋರ್ಸ್ ಗನ್ನುಗಳ ಖರೀದಿಯಲ್ಲಿ ರಾಜೀವ ಗಾಂಧಿ ಅವರಿಗೆ ಸೇರಿದಂತೆ ಕಮಿಶನ್ ಕೊಡಲಾಗಿದೆ ಎಂಬ ಆಪಾದನೆ, 1989 ಪಾರ್ಲಿಮೆಂಟು ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಗೆ ಮುಖ್ಯ ಕಾರಣ, ಇತ್ತೀಚೆಗೆ ಸಿಬಿಐನಿಂದ ಕೇಸು ಬಂದ್)

ಹರ್ಷದ್ ಮೆಹತಾ ಸೆಕ್ಯುರಿಟಿ ದುರ್ಬಳಕೆ (1992, 5000 ಕೋಟಿ, ಹರ್ಷದ್ ಮೆಹತಾ ಎಂಬ ದಲ್ಲಾಳಿ ಬ್ಯಾಂಕುಗಳ ಸೆಕ್ಯುರಿಟಿ ದುರ್ಬಳಕೆ ಮಾಡಿ ಶೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಶೇರು ಮಾರುಕಟ್ಟೆ ಕುಸಿತ)

ಇಂಡಿಯನ್ ಬ್ಯಾಂಕ್ (1992, 1300 ಕೋಟಿ, ಚೇರ್ಮನ್ ಗೋಪಾಲಕೃಷ್ಣನ್ ದಕ್ಷಿಣದ ನೂರಾರು ಕಂಪನಿಗಳು ಮತ್ತು ರಫ್ತುದಾರರಿಗೆ ವಾಪತಿ ಮಾಡದ ಸಾಲ)

ಸಕ್ಕರೆ ಆಮದು (1994, 650 ಕೋಟಿ, ಆಹಾರ ಮಂತ್ರಿ ಕಲ್ಪನಾಥ್ ರಾಯ್ ಅವರ ಅಪ್ಪಣೆ ಮೇರೆಗೆ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಬೆಲೆಯಲ್ಲಿ ಸಕ್ಕರೆ ಆಮದು, ರಾಯ್ ರಾಜೀನಾಮೆ)

ವೋಟಿಗಾಗಿ ನೋಟು –1 (1993, ಜೆಎಂಎಂ ಪಾರ್ಲಿಮೆಂಟು ಸದಸ್ಯರಿಗೆ ನರಸಿಂಹರಾವ್ ಸರ್ಕಾರ ಪರ ವಿಶ್ವಾಸ ಮತ ನೀಡಲು ರೂ. 3 ಕೋಟಿ ಲಂಚ)

ಪುಟ 10ಕ್ಕೆ

ಸಾಂಡಿಕಿಡಿ

ಬಂಡವಾಳದ ಗುಣ

'ಸಾಕಷ್ಟು ಲಾಭವಿದ್ದರೆ ಬಂಡವಾಳ ದಿಟ್ಟವಾಗಿರುತ್ತದೆ. ಶೇ.10 ರಷ್ಟಿದ್ದರೆ ಎಲ್ಲಾದರೂ ಹೂಡಿಕೆಗೆ ತಯಾರು. ಶೇ.20 ರಷ್ಟಿದ್ದರೆ ಹಣ ಹೂಡಿಕೆಗೆ ಆತುರ. ಶೇ.50 ರಷ್ಟಿದ್ದರೆ ಅಹಂಕಾರ. ಶೇ.100 ರಷ್ಟಿದ್ದರೆ ಎಲ್ಲ ಮಾನವ ಕಾನೂನುಗಳನ್ನೇ ತುಳಿವ ಸೊಕ್ಕು. ಶೇ.300 ರಷ್ಟಿದ್ದರೆ ನೇಣುಗಂಬಕ್ಕೇರುವ ಅಪಾಯ ವಿದ್ದರೂ ಯಾವುದೇ ತರಹದ ಅಪರಾಧ ಮಾಡಲು ಬಂಡವಾಳ ತಯಾರು ಎಂದಿದ್ದರು. ಕಾರ್ಲ್‌ಮಾರ್ಕ್ಸ್ ತಮ್ಮ 'ದಾಸ್ ಕ್ಯಾಪಿಟಲ್' ಗ್ರಂಥದಲ್ಲಿ.

ಭಾರತದಲ್ಲಿ ಆದದ್ದು ಇದೇ. ಸಾಮ್ರಾಜ್ಯಶಾಹಿಗಳನ್ನು, ಅವರ ಬಂಡವಾಳವನ್ನು ದೇಶದಿಂದ ದೂರವೇ ಇಟ್ಟಿದ್ದ ಆಳುವ ವರ್ಗ ಈಗ ದೇಶದ 'ಸ್ವಾವಲಂಬನೆ ಸಾರ್ವಭೌಮತ್ವ ಇವನ್ನೆಲ್ಲ ಬಿಟ್ಟುಕೊಡಲೂ ತಯಾರು.

ಹಗರಣಗಳ ಸರಮಾಲೆಯ

ಪುಟ 9 ರಿಂದ

ಎಂ.ಎಸ್.ಶೂಸ್ ಶೇರು ಬೆಲೆ ಫಿಕ್ಸಿಂಗ್ (1994, 699 ಕೋಟಿ, ಎಂ.ಎಸ್.ಶೂಸ್ ಕಂಪನಿಯ ಶೇರು ಬೆಲೆಯನ್ನು ಹಿಗ್ಗಿಸಲು ಸ್ಟೇಟ್ ಬ್ಯಾಂಕ್ ಕ್ಯಾಪ್ಸ್ ಮತ್ತು ಸೇಬಿ ಜತೆ ಪಿತೂರಿ ಮಾಡಿ ಕಂಪನಿ ಹಣ ದುರ್ಬಳಕೆ, ಸಾರ್ವಜನಿಕ ಹೂಡಿಕೆದಾರರಿಗೆ ಮೋಸ, ಕಂಪನಿ ಪ್ರೋಮೋಟರ್ ಸಚದೇವ ಖಲಾಸೆ)

ಮೇವು (1996, 950 ಕೋಟಿ, ಬಿಹಾರದ ಪಶು ಸಂಗೋಪನಾ ಇಲಾಖೆಯ ಹಣದ ಭಾರೀ ಪ್ರಮಾಣದ ದುರ್ಬಳಕೆ, ಮುಖ್ಯಮಂತ್ರಿ ಲಲ್ಲೂ ಪ್ರಸಾದ್ ಯಾದವ್ ರಾಜೀನಾಮೆ)

ಯೂರಿಯಾ ಆಮದು (1996, 133 ಕೋಟಿ, ಪ್ರಧಾನಿ ನರಸಿಂಹರಾವ್ ನಿಕಟವರ್ತಿ ವ್ಯಾಪಾರಿಗಳು ಮತ್ತು ಅಧಿಕಾರಿಗಳ ಪಿತೂರಿ, ಪೂರೈಕೆಯಾಗದ 2 ಲಕ್ಷ ಟನ್ ಯೂರಿಯಾ ಆಮದಿಗೆ ಲಂಚ)

ಇಂಡಿಯಾಕ್ಕೆ ಮೊದಲ ಸ್ಥಾನ !

ಇಂಡಿಯಾ ಆರ್ಥಿಕ ಸೂಚಕಗಳಲ್ಲಿ ಯಾವಾಗಲೂ ಹಿಂದೆ ಅಂತ ಯಾರು ಹೇಳಿದ್ದು ? ಒಟ್ಟು ಉತ್ಪನ್ನ, ತಲಾ ಆದಾಯ ಇತ್ಯಾದಿಗಳಲ್ಲಿ ನಾವು ಹಿಂದೆ ಇರಬಹುದು. ಆದರೆ ಒಂದು ಆರ್ಥಿಕ ಸೂಚಕದಲ್ಲಿ ನಾವು ನಂಬರ್ ಒನ್. ಜಗತ್ತಿನ ಕಪ್ಪು ಹಣದ ಸ್ವರ್ಗಗಳಲ್ಲಿ 'ಡೆಪೋಸಿಟ್' ಇಡುವುದರಲ್ಲಿ ನಮ್ಮನ್ನು ಮೀರಿಸಿದವರಿಲ್ಲ. ಮೊದಲ ಸ್ಥಾನದಲ್ಲಿ ಇಂಡಿಯಾದ ಶ್ರೀಮಂತರು ಕಾನೂನು ಕಣ್ಣು ತಪ್ಪಿಸಿ ತಮ್ಮ 1.5 ಲಕ್ಷ ಕೋಟಿ ಡಾಲರು (65.5 ಲಕ್ಷ ಕೋಟಿ ರೂ.) ಗಳ ಲೂಟಿಯನ್ನು 'ಠೇವಣಿ' ಇಟ್ಟಿದ್ದಾರೆ. ಸೋವಿಯೆಟ್ ಪತನವಾಗಿ 1991 ರ 'ಡಕಾಯಿತ' ಬಂಡವಾಳಶಾಹಿ ಯ ಗೆಲುವಿನ ನಂತರ ಭಾರೀ ಪ್ರಮಾಣದಲ್ಲಿ ಮಾಫಿಯಾ ಈ ಸ್ವರ್ಗಗಳಲ್ಲಿ ತಮ್ಮ ಲೂಟಿ 'ಠೇವಣಿ' ಇಟ್ಟರೂ, ರಶ್ಯ ದೂರದ ಎರಡನೇ ಸ್ಥಾನದಲ್ಲಿದೆ. ರಶ್ಯನ್ ಮಾಫಿಯಾದ ಲೂಟಿ ನಮ್ಮ ಮಾಫಿಯಾದ ಲೂಟಿಯ ಮೂರನೇ ಒಂದರಷ್ಟು.

ವಿದೇಶೀ ಬ್ಯಾಂಕುಗಳಲ್ಲಿ ಠೇವಣಿ ಇಡಲಾಗಿರುವ ಕಪ್ಪು ಹಣದ ಪ್ರಮಾಣ ಹೀಗಿವೆ:

ಭಾರತ	150	ಸಾವಿರ ಕೋಟಿ ಡಾಲರು (65.5 ಲಕ್ಷ ಕೋಟಿ ರೂ.)
ರಶ್ಯ	47	ಸಾವಿರ ಕೋಟಿ "
ಬ್ರಿಟನ್	39	ಸಾವಿರ ಕೋಟಿ "
ಉಕ್ರೇನ್	10	ಸಾವಿರ ಕೋಟಿ "
ಚೀನಾ	9.6	ಸಾವಿರ ಕೋಟಿ "

ಇವೆಲ್ಲಾ ಗುಪ್ತ ಅಕೌಂಟುಗಳಲ್ಲಿ ಇರುವುದರಿಂದ ಇದು ಒಂದು ಅಂದಾಜು. ಇವು ಖಚಿತ ಅಂಕೆಗಳಲ್ಲ. ಆದರೆ ಈ ದೇಶಗಳ ಸ್ಥಾನ ಮತ್ತು ಪ್ರಮಾಣ ಖಚಿತ.

ಭ್ರಷ್ಟಾಚಾರದ ಬಗ್ಗೆ ಅಧ್ಯಯನ ಮಾಡುವ 'ಟ್ರಾನ್ಸಪರನ್ಸಿ ಇಂಟರನ್ಯಾಶನಲ್' ಅಧ್ಯಯನ ಒಂದರ ಪ್ರಕಾರ ಸ್ವಾತಂತ್ರ್ಯ ನಂತರ ಕನಿಷ್ಟ 46 ಸಾವಿರ ಕೋಟಿ ಡಾಲರು (20 ಲಕ್ಷ ಕೋಟಿ ರೂ.) ಗಳಷ್ಟು ಕಪ್ಪು ಹಣ ವಿದೇಶಗಳಿಗೆ ಸಾಗಿಸಲಾಗಿದೆ

ಹವಾಲಾ ಜೈನ್ ಡೈರಿ (1996, ಹವಾಲಾ ಡೀಲರುಗಳ ಮೇಲೆ ಆದ ಸಿಬಿಐ ದಾಳಿಗಳಲ್ಲಿ ಸಿಕ್ಕಿದ ಜೈನ್ ಡೈರಿಗಳಲ್ಲಿ ಪ್ರಮುಖ ಕಾಂಗ್ರೆಸ್–ಬಿಜೆಪಿ ಮತ್ತು ಇತರ ಪಕ್ಷಗಳ ನಾಯಕರ – ಅದ್ವಾನಿ, ದೇವಿಲಾಲ್, ಎನ್ ಡಿ ತಿವಾರಿ, ಭಜನಲಾಲ್, ವಿ ಸಿ ಶುಕ್ಲಾ, ಬಲರಾಂ ಜಾಖಡ್, ಮದನಲಾಲ್ ಖುರಾನಾ – ಇತ್ಯಾದಿ ಜತೆ ಸಂಬಂಧ ಪತ್ತೆ)

ಭಂಸಾಲಿ ಹಣಕಾಸು ಕಂಪನಿಗಳ ಜಾಲ(1997, 1000 ಕೋಟಿ, ಬಹಳ ಸೀಮಿತ ಬಂಡವಾಳದಲ್ಲಿ ಹಣಕಾಸು ಕಂಪನಿಗಳ ಸಂಕೀರ್ಣ ಜಾಲ ರಚನೆ, ಸಣ್ಣ ಹೂಡಿಕೆದಾರರಿಂದ ಹೆಚ್ಚಿನ ಬಡ್ಡಿ ಆಸೆಯಲ್ಲಿ ಮೂಲ ಬಂಡವಾಳಕ್ಕೆ ಮೋಸ, 1997 ರಲ್ಲಿ ಕುಸಿತ, ದಕ್ಷಿಣದಲ್ಲಿ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿದ್ದ ಚಿಟ್ ಫಂಡ್ಸ್ ಹಗರಣಗಳ ದೊಡ್ಡ ರೂಪ)

ಹರ್ಷದ್ ಮೆಹತಾ ಶೇರು ಫಿಕ್ಸಿಂಗ್ (1997, ಬಿಪಿಎಲ್ ವಿಡಿಯೋಕೋನ್ ಮತ್ತು ಸ್ಟೆರಿಲೈಟ್ ಪ್ರೋಮೋಟರ್ಸ್ ಜತೆ ಅವರ ಶೇರು ಬೆಲೆ ಫಿಕ್ಸಿಂಗಿಗೆ ಪಿತೂರಿ, ಕುಸಿತದ ಹಂತ ಬಂದಾಗ ಸೇಬಿ ಮತ್ತು ಮುಂಬಯಿ ಶೇರು ವಿನಿಮಯ ಕೇಂದ್ರದ ಅಧಿಕಾರಿಗಳ ಜತೆ ಅದನ್ನು ರಿಪೇರಿ ಮಾಡಲು ಪುರಾವೆ ಮುಚ್ಚಿ ಹಾಕಲು ಪಿತೂರಿ, 2001 ರಲ್ಲಿ ಮೆಹತಾ ಮೇಲೆ ಜೀವಾವಧಿ ಮತ್ತು ಕಂಪನಿಗಳಿಗೆ 3 ವರ್ಷಗಳ ಕಾಲ ಶೇರು ಮಾರುಕಟ್ಟೆ ಭಾಗವಹಿಸುವಿಕೆಗೆ ನಿಷೇಧ)

ಸುಖರಾಂ (1997, 1500 ಕೋಟಿ)

ಟೆಲಿಕಾಂ (1998, 10 ಸಾವಿರ ಕೋಟಿ)

ಕಂಪನಿಗಳು ಮಾಯ (1998, 330 ಕೊಟಿ, ಶೇರು ಮಾರುಕಟ್ಟೆಯಿಂದ ಹೂಡಿಕೆದಾರರಿಂದ ದೊಡ್ಡ ಮೊತ್ತ ಸಂಗ್ರಹಿಸಿದ 600 ಕಂಪನಿಗಳು ನಾಪತ್ತೆ, ಸೇಬಿ ತನಿಖೆ ಪ್ರಕಾರ 330 ಕೋಟಿ ಸಂಗ್ರಹಿಸಿದ 80 ಕಂಪನಿಗಳು ಯಾವುದೇ ಚಟುವಟಿಕೆಯಿಲ್ಲದೆ ನಾಪತ್ತೆ, ಉಳಿದ 520 ಕಂಪನಿಗಳ ತನಿಖೆ ಇನ್ನೂ ಅಪೂರ್ಣ)

ಗೊಡ್ಡು ಪ್ಲಾಂಟೇಶನ್ ಕಂಪನಿಗಳು (1998, 2600 ಕೋಟಿ, ಸೇಬಿ, ರಿಸರ್ವ ಬ್ಯಾಂಕ್ ಅಥವಾ ಯಾವುದೇ ಸರ್ಕಾರಿ ಇಲಾಖೆಯ ನಿಯಂತ್ರಣಕ್ಕೆ ಬಾರದ (ಟೀಕ್ ಇತ್ಯಾದಿ ಮರಗಳ) ಪ್ಲಾಂಟೇಶನ್ ಸ್ಥಾಪಿಸಲು ಬಂಡವಾಳ ಎತ್ತಿದ ಕಂಪನಿಗಳು, ಮರದ ಮೇಲೆ ಹಣ ಬೆಳೆಯುತ್ತದೆ ಎಂಬ ಭಾರೀ ಆಸೆ ತೋರಿಸಿ ಹಣ ವಸೂಲಿ ಮಾಡಿ ಒಂದು ಮರವೂ ಬೆಳೆಯದ ಗೊಡ್ಡು ಕಂಪನಿಗಳು, 1999 ರಲ್ಲಿ ಇಂತಹ ಕಂಪನಿಗಳಿಗೆ ನಿಯಮಾವಳಿ ರೂಪಿಸುವ ವರೆಗೆ 650 ಕಂಪನಿಗಳಿಂದ 2600 ಕೋಟಿ ಸಂಗ್ರಹ, ಹೂಡಿಕೆದಾರರ ಮೂಲ ಬಂಡವಾಳಕ್ಕೂ ನಾಮ)

ಮೊಬೈಲ್ ಲೈಸೆನ್ಸ್ (1999, 46 ಸಾವಿರ ಕೋಟಿ, ಮೊಬೈಲ್ ಲೈಸೆನ್ಸ್ ನಿಯಮಾವಳಿಗಳನ್ನು ಸರ್ಕಾರಕ್ಕೆ ನಷ್ಟ ಮತ್ತು ಖಾಸಗಿ ಕಂಪನಿಗಳಿಗೆ ಅನುಕೂಲ ಆಗುವ ಹಾಗೆ ಬದಲಾವಣೆ)

ಮೊಡರ್ನ್ ಫುಡ್ಸ್ ಖಾಸಗೀಕರಣ (2000, 2050 ಕೋಟಿ, ಸುಮಾರು 2200 ಕೋಟಿ ಬೆಲೆ ಬಾಳುವ ಸಾರ್ವಜನಿಕ ಕ್ಷೇತ್ರದ ಕಂಪನಿಯನ್ನು ಕೇವಲ 150 ಕೋಟಿ ರೂ. ಗೆ ಮಾರಾಟ)

ಬಾಲ್ಕೊ ಖಾಸಗೀಕರಣ (2001, 4950 ಕೋಟಿ, ಸುಮಾರು 5500 ಕೋಟಿ ಬೆಲೆ ಬಾಳುವ ಸಾರ್ವಜನಿಕ ಕ್ಷೇತ್ರದ ಕಂಪನಿಯ ಮಾರಾಟ ಕೇವಲ 550 ಕೋಟಿ ರೂ. ಗೆ)

ಕೇತನ್ ಪಾರೇಖ್ ಶೇರು ಫಿಕ್ಸಿಂಗ್ (2001, 1250 ಕೋಟಿ, ಕೆತನ್–10 ಎಂದು ಕರೆಯಲಾದ 10 ಕಂಪನಿಗಳ ಶೇರು ಫಿಕ್ಸಿಂಗಿಗೆ ಬ್ಯಾಂಕು ಹಲವು ಕಂಪನಿಗಳ ? ಎಚ್.ಎಫ್.ಸಿ.ಎಲ್., ಝೀ ಟಿವಿ – ಹಣ ದುರ್ಬಳಕೆ, ಕೇತನ್ ಪಿತೂರಿ ಪತ್ತೆ; ಇನ್ನೊಂದು ಶೇರು ಕೂಟದಿಂದ ಶೇರು ಮಾರುಕಟ್ಟೆ ಕುಸಿತ, ಯೂಟಿಐಎಲ್ ಫಂಡ್ ಯುಎಸ್–64 ಬೆಲೆ ಕುಸಿತ; ತನಿಖೆಯಿಂದ ಸೇಬಿ ಅಧಿಕಾರಿಗಳು, ಯುಟಿಐಎಲ್ ಎಂ.ಡಿ., ಫಸ್ಟ ಗ್ಲೋಬಲ್ ಮುಂತಾದವರ ಪಾತ್ರ ಬೆಳಕಿಗೆ, ವ್ಯವಸ್ಥೆಯ ಹುಳುಕುಗಳು ಮತ್ತು ಬೇಲಿ ಹೊಲ ಮೇಯುವ ಸಾಧ್ಯತೆಯ ಬಯಲಿಂದ ಬೆಚ್ಚಿ ಬೀಳಿಸುವ ಹಗರಣ

ಯೂಟಿಐ ಕುಸಿತ (2001, 4800 ಕೊಟಿ, ಕೇತನ್ ಪಾರೇಖ್–ಶೇರು ಮಾರುಕಟ್ಟೆ ಕುಸಿತ ಹಗರಣದ ಭಾಗ)

ದಿನೇಶ್ ದಾಲ್ಮಿಯಾ (2001, 595 ಕೋಟಿ)

ಶೇರು ಮಾರುಕಟ್ಟೆ ಕುಸಿತ (2001, 1.15 ಲಕ್ಷ ಕೋಟಿ, ಶೇರು ಮಾರುಕಟ್ಟೆಯಲ್ಲಿ ಸ್ಪರ್ಧಿಗಳಾದ ಕೇತನ್ ಪಾರೇಖರ ದುಷ್ಟ ಕೂಟ ಮತ್ತು ಇನ್ನೊಂದು ದುಷ್ಟ ಕೂಟದ ನಡುವೆ ಜಟಾಪಟಿಯಲ್ಲಿ ಶೇರು ಮಾರಕಟ್ಟೆ ಕುಸಿತ, ಸಾವಿರಾರು ಕಂಪನಿಗಳ ಹೂಡಿಕೆದಾರರಿಗೆ ಭಾರೀ ನಷ್ಟ; 2002 ರಲ್ಲಿ ಕೇತನ್ ಪಾರೇಖ್ ಬಂಧನ ಮತ್ತು ಮಾರುಕಟ್ಟೆಯಲ್ಲಿ ಭಾಗವಹಿಸುವಿಕೆ ಮೇಲೆ ಜೀವಾವಧಿ ನಿಷೇಧ

ಹೋಂ ಟ್ರೇಡ್ (2002, 600 ಕೋಟಿ, 25 ಮಹಾರಾಷ್ಟ್ರ ಗುಜರಾತ್ ಸಹಕಾರಿ ಬ್ಯಾಂಕುಗಳಿಂದ ಹಣ ಸಂಗ್ರಹ ಮತ್ತು ನಾಮ, 2002 ರಲ್ಲಿ ಕಂಪನಿ ಮುಖ್ಯಸ್ಥ ಸಂಜಯ ಅಗರವಾಲನ ಬಂಧನ

ತೆಲ್ಗಿ ಸ್ಟಾಂಪ್ ಪೇಪರ್ (2003, 30 ಸಾವಿರ ಕೋಟಿ)

ಗೋಧಿ ಆಮದು ಹಗರಣ

ನೈಸ್ ಕಾರಿಡಾರ್ ಭೂ ಹಗರಣ

ಐಪಿಓ–ಡಿಮ್ಯಾಟ್ (2005, 146 ಕೋಟಿ)

ತಾಜ್ ಕಾರಿಡಾರ್ (2006, 175 ಕೋಟಿ)

ಸತ್ಯಂ (2008, 10 ಸಾವಿರ ಕೋಟಿ, ಸತ್ಯಂ ಗುಂಪಿನ ಕಂಪನಿಗಳ ನಡುವೆ ಕಾನೂನು ಬಾಹಿರ ಹಣ ವರ್ಗಾವಣೆ, ಅದನ್ನು ಮುಚ್ಚಿ ಹಾಕಲು ಕಂಪನಿ ಅಕೌಂಟು ಫಿಕ್ಸಿಂಗ್, ಕಂಪನಿಯ ಹಣಕಾಸು–ವಹಿವಾಟು ಸ್ಥಿತಿ ಬಗ್ಗೆ ಬೋರ್ಡು ಶೇರುದಾರರು ಸೇರಿದಂತೆ ಎಲ್ಲರಿಗೂ ಸುಳ್ಳು ವರದಿಗಳು)

ಸೈನ್ಯದ ರೇಶನ್ ಸೋರಿಕೆ (2008, 5000 ಕೋಟಿ)

ಅಕ್ಕಿ ರಫ್ತು (2009, 2500 ಕೋಟಿ)

ಮಧು ಕೋಡಾ ಜಾರ್ಖಂಡ್ ಗಣಿ (2009, 4 ಸಾವಿರ ಕೋಟಿ)

ಒರಿಸ್ಸಾ ಗಣಿ (2009, 7 ಸಾವಿರ ಕೋಟಿ)

ಕರ್ನಾಟಕ ಗಣಿ (2008 ರಿಂದ 2010 ರವರೆಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸು. 305 ಕೋಟಿ ಟನ್ ಅಕ್ರಮ ಅದಿರು ಸಾಗಾಣಿಕೆ–ಸು.22,000 ಕೋಟಿಗಳ ಹಗರಣ)

ಕರ್ನಾಟಕ ಭೂಹಗರಣ (2009, ... ಸಾವಿರಾರು ಕೋಟಿ)

ಟಾಟಾ–ಅಂಬಾನಿಗಳನ್ನು ಕೊಬ್ಬಿಸುವ ಆಮ್ ಆದ್ಮಿ ಸರ್ಕಾರ

ಡಾಲರ್ ಶತಕೋಟ್ಯಾಧೀಶರ (4500 ಕೋಟಿಗಿಂತ ಹೆಚ್ಚು ಆಸ್ತಿ ಇರುವವರು) ಸಂಖ್ಯೆ ಈ ವರ್ಷ 55 ಕ್ಕೇರಿದೆ. ಅವರ ಒಟ್ಟು ಆಸ್ತಿ ಮೌಲ್ಯ ದೇಶದ ಒಟ್ಟು ಉತ್ಪನ್ನ (ಜಿಡಿಪಿ) ಯ ಸುಮಾರು ಮೂರನೇ ಒಂದು ಭಾಗ. ಇದು ಚೀನಾದ ಡಾಲರ್ ಶತಕೋಟ್ಯಾಧೀಶರ ಪಾಲಿನ (ಶೇ. 3) ಹತ್ತು ಪಟ್ಟು ಮತ್ತು ಅಮೆರಿಕದ ಡಾಲರ್ ಶತಕೋಟ್ಯಾಧೀಶರ (ಶೇ. 11) ಮೂರು ಪಟ್ಟು. ಭಾರತದ ಅತ್ಯಂತ ಶ್ರೀಮಂತ ಮುಕೇಶ್ ಅಂಬಾನಿಯ ಆಸ್ತಿ ಈಗ 27 ಶತಕೋಟಿ ಡಾಲರು (1.6 ಲಕ್ಷ ಕೋಟಿ ರೂ.). ಕಳೆದ 10 ವರ್ಷಗಳಲ್ಲಿ ಅವರ ಆಸ್ತಿ 7 ಪಟ್ಟು ಏರಿದೆ. ಮುಕೇಶ್ ಕಟ್ಟುತ್ತಿರುವ ಮನೆಯ ವೆಚ್ಚ 9000 ಕೋಟಿ ರೂ.

ಭಾರತದ ಶೇ. 77 ಜನ ದಿನಕ್ಕೆ ಕೇವಲ ರೂ. 20 ರಲ್ಲಿ ಬದುಕುತ್ತಾರೆ. ಆದರೂ ಸರ್ಕಾರ ಖಜಾನೆ ಖಾಲಿ ಮಾಡಿ, ಶ್ರೀಮಂತರಿಗೆ ಉತ್ತೇಜನದ ಹೆಸರಲ್ಲಿ ಅವರ ಆಸ್ತಿ ಹೆಚ್ಚು ಮಾಡುತ್ತಿದೆ. ಪ್ರತೀ ವರ್ಷ 5 ಲಕ್ಷ ಕೋಟಿ ಬರಿಯ ಬಜೆಟಿನ ಕೇವಲ 3 ಅಂಶಗಳಿಂದ ಕೊಡುತ್ತಿದೆ. ಅದೇ ಸಮಯದಲ್ಲಿ ಕೃಷಿ ಬಜೆಟಿನಲ್ಲಿ 5 ಸಾವಿರ ಕೋಟಿ ರೂ. ಕಡಿತ ಮಾಡಿದೆ. ರೇಶನ್ ವ್ಯವಸ್ಥೆ ಸಾರ್ವತ್ರಿಕಗೊಳಿಸಲು ಬೇಕಾಗುವ ಕೇವಲ 57 ಸಾವಿರ ಕೋಟಿ ಇಲ್ಲ ಅಂತ ತಾರಮ್ಮಯ್ಯ ಆಡುತ್ತಿದ್ದಾರೆ. ರೇಗಾ 150 ದಿನಗಳಿಂದ ಹೆಚ್ಚಿನ ವಿಸ್ತರಣೆಗೆ ಮತ್ತು ಕೂಲಿ ಹೆಚ್ಚಳ ಮಾಡಲು ದುಡ್ಡಿಲ್ಲ ಅಂತೆ.

ಕಾಮನ್ ವೆಲ್ತ್ ಕ್ರೀಡೆಗಳು (2010, 58 ಸಾವಿರ ಕೋಟಿ)

ವೋಟಿಗಾಗಿ ನೋಟು – 2 (2011, ಸಾವಿರಾರು ಕೋಟಿ, 2008 ರಲ್ಲಿ ಮನಮೋಹನ ಸಿಂಗ್ ಸರ್ಕಾರ ಪರ ವಿಶ್ವಾಸ ಮತ ನೀಡಲು ಪಾರ್ಲಿಮೆಂಟು ಸದಸ್ಯರಿಗೆ ಭಾರೀ ಪ್ರಮಾಣದ ಲಂಚ ವಿತರಣೆ ಬಗ್ಗೆ ವಿವರಗಳು ವಿಕಿಲೀಕ್ಸ್ ನಿಂದ ಬಯಲು)

2ಜಿ ತರಂಗಾಂತರ (2011, 1.76 ಲಕ್ಷ ಕೋಟಿ)

* * *

ಕಾಮನ್ವೆಲ್ತ್ ಲೂಟಿ

ಕಾಮನ್ವೆಲ್ತ್ ಆಟಗಳ ಒಟ್ಟು ವೆಚ್ಚ

ಬ್ರಿಟನ್ (2002) ರೂ. 2100 ಕೋಟಿ

ಆಸ್ಟ್ರೇಲಿಯಾ (2006) ರೂ. 5500 ಕೋಟಿ

ಭಾರತ (2010) ರೂ. 60,000 ಕೋಟಿ (ಯೋಜಿತ ವೆಚ್ಚ ಕೇವಲ ರೂ. 620 ಕೋಟಿ)

ಬ್ರಿಟನ್ (2014) ರೂ. 2200 ಕೋಟಿ (ಯೋಜಿತ ವೆಚ್ಚ)

ವೆಚ್ಚದ ಶೇ. 90 ಸ್ವಾಹಾ ಆಗಿದೆ ಅಂದರೆ ಕಾಮನ್ವೆಲ್ತ್ ಹಗರಣದ ಲೂಟಿ ಸುಮಾರು ರೂ. 58 ಸಾವಿರ ಕೋಟಿ.

ಜನ ಲೋಕಪಾಲ್ ಮಸೂದೆ

ಪುಟ 2ರಿಂದ

ಭಾರತವನ್ನು ಆಧುನೀಕರಣಗೊಳಿಸಲು ಖಾಸಗೀಕರಣಕ್ಕೆ ಉತ್ತೇಜನ ನೀಡುವ ಹಾಗೂ ವಿದೇಶಿ ಬಂಡವಾಳ ಆಹ್ವಾನಿಸುವ ವಿಚಾರದಲ್ಲಿ ಒಂದೇ ಹಾಸಿಗೆ ಹಂಚಿಕೊಂಡವರು. ಇತ್ತೀಚಿನ ದಿನಗಳಲ್ಲಿ ಹಿಂದೆಂದೂ ಕಂಡು ಕೇಳರಿಯದ ಮಟ್ಟದಲ್ಲಿ ಭ್ರಷ್ಟಾಚಾರ ವ್ಯಾಪಿಸಲು ಉದಾರೀಕರಣದಿಂದಾಗಿ ಸೃಷ್ಟಿಯಾಗಿರುವ ಆರ್ಥಿಕ ದುಃಸ್ಥಿತಿಯೇ ಬಹು ಮುಖ್ಯ ಕಾರಣ.

ಅಧಿಕಾರಶಾಹಿ ನಿಷ್ಠುರತೆ ಮತ್ತು ಆರ್ಥಿಕ ಹಾದಿ ಹಾಗೂ ರಾಜಕೀಯ ಅಧಿಕಾರವನ್ನು ಆವರಿಸಿರುವ ಭ್ರಷ್ಟಾಚಾರವು ಸಂಕೀರ್ಣ ಸಮಸ್ಯೆಯಾಗಿ ಬೆಳೆದು ನಿಂತಿದೆ. ಈ ಅರ್ಥದಲ್ಲಿ, ಪ್ರಭುತ್ವವೇ ಭ್ರಷ್ಟಾಚಾರದ ಪ್ರಮುಖ ಪ್ರವರ್ತಕ. ಅದನ್ನು ಕೇವಲ ಒಂದು ನೈತಿಕ ಪ್ರಶ್ನೆಯ ಮಟ್ಟಕ್ಕೆ ಇಳಿಸಲು ಸಾಧ್ಯವಿಲ್ಲ. ಹಾಗೆಯೇ ವ್ಯಕ್ತಿಗಳನ್ನು ಶಿಕ್ಷಿಸುವುದರ ಮೂಲಕ ನಿರೋಧಕವಾಗಿ ಪರಿಹಾರ ಕಂಡುಹಿಡಿಯಲೂ ಸಾಧ್ಯವಿಲ್ಲ. ಆದರೆ ಅಂತಹ ಪರಿಹಾರ ಪ್ರಭುತ್ವಕ್ಕೆ ಮತ್ತದರ ನಿರ್ವಾಹಕರಿಗೆ ಮತ್ತು ಉದಾರವಾದಿ ಬುದ್ಧಿಜೀವಿಗಳಿಗೂ ಕೂಡ ಸ್ವಾಗತಾರ್ಹವೇ. ಭ್ರಷ್ಟಾಚಾರ ಎಲ್ಲರನ್ನೂ ಒಂದುಗೂಡಿಸುವ ಒಂದು ದೊಡ್ಡ ಸಂಘಟಕನಾಗಿ ಗೋಚರಿಸುತ್ತಿದೆ. ಏಕೆಂದರೆ ಅಣ್ಣಾ ಹಜಾರೆಯವರ ಭ್ರಷ್ಟಾಚಾರವಿರೋಧಿ ವೇದಿಕೆಯು ಇತ್ತ ಮಾಜಿ ಪೋಲಿಸ್ ಅಧಿಕಾರಿ ಕಿರಣ್ ಬೇಡಿ ಮತ್ತು ಆರ್ಯ ಸಮಾಜ ಮುಖಂಡ ಸ್ವಾಮಿ ಅಗ್ನಿವೇಶರನ್ನು ಅತ್ತ ಕೋಮುವಾದಿಗಳಾದ ರಾಮ್ ಮಾಧವ್ ಹಾಗೂ ಧಾರ್ಮಿಕ ಗುತ್ತಿಗೆದಾರರಾದ ಬಾಬಾ ರಾಮ್‌ದೇವ್ ಮತ್ತು ಶ್ರೀ ರವಿಶಂಕರ್‌ರವರನ್ನು ಆಕರ್ಷಿಸಿ ಒಂದೇ ವೇದಿಕೆಯಡಿ ತಂದಿದೆ. ಕೋಮುವಾದಿಗಳು ಮತ್ತು ಬಲಪಂಥೀಯ ಜನರು ಮಾತ್ರ ಅವರ ಪರಿವಾರದಲ್ಲಿರದೆ, ಅಣ್ಣಾ ಅವರು ಗುಜರಾತ್ ಮಾದರಿ ಅಭಿವೃದ್ಧಿಯನ್ನು ಹೊಗಳುವುದರ ಮೂಲಕ ತಮ್ಮ ಹೃದಯಕ್ಕೆ ತೀರ ಹತ್ತಿರವಾದ ನೈತಿಕ ಸಮಸ್ಯೆಯನ್ನು ಕಡೆಗಣಿಸಿ ನರೇಂದ್ರ ಮೋದಿಯಂಥವರನ್ನೂ ಆಶೀರ್ವದಿಸಿದರು.

ನೈತಿಕತೆ ತಟಸ್ಥ ಎಂದು ನಂಬಿರುವ ವ್ಯಕ್ತಿಯೊಬ್ಬನನ್ನು ಕೆಲವರು ದೇಶ 'ರಕ್ಷಕ' ಎಂದು ಹಾಡಿ ಹೊಗಳಿ ಕೊಂಡಾಡುತ್ತಿರುವುದು ದುರಂತವೇ ಸರಿ, ಅದರಲ್ಲಿ ಸರ್ಕಾರವೂ ಭಾಗಿಯಾಗಿದೆ. ಅಣ್ಣಾರವರ ಪರವಾದ ಸರ್ಕಾರದ ಈ ಅನುಕೂಲಕರ ವರ್ತನೆಯ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ಎಲ್ಲಿಯ ತನಕ ಅಣ್ಣಾ ಹಜಾರೆಯವರಾಗಲೀ ಅಥವಾ ಬೇರೆ ಯಾರೇ ಆಗಲೀ, ವ್ಯವಸ್ಥೆಯ ಕುರಿತು ಹಾಗೂ ಸಾಂಸ್ಥಿಕ ವಿಷಯಗಳನ್ನು ಎತ್ತುವುದಿಲ್ಲವೋ ಮತ್ತು ಸುಧಾರಣಾ ಕ್ರಮಗಳಿಗಾಗಿ ಮಾತ್ರ ಹೋರಾಡುತ್ತಾರೋ ಅಂಥವರಿಗೆ ಪ್ರೋತ್ಸಾಹ ನೀಡುವುದರಲ್ಲಿ ಸರ್ಕಾರಕ್ಕೆ ಯಾವುದೇ ತಕರಾರಿಲ್ಲ. ನಿಜ ಹೇಳಬೇಕೆಂದರೆ ಅಂಥವರನ್ನು 'ತಮ್ಮವರನ್ನಾಗಿಸಿ ಕೊಳ್ಳುವ' ಪ್ರಯತ್ನ ಸರ್ಕಾರದ್ದಾಗಿರುತ್ತದೆ.

ಇದರ ಪರಿಣಾಮವಾಗಿ, ಅಣ್ಣಾ ಹಜಾರೆ ಮತ್ತು ಅವರ ಸಮಿತಿಯು ಸರ್ಕಾರದ ಭ್ರಷ್ಟಯಂತ್ರದ ಸಮರ್ಥಕರಾಗಿ ಕೊನೆಗೊಳ್ಳುತ್ತಾರಷ್ಟೆ. ಏಕೆಂದರೆ, ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳಲು ಕಾನೂನುಗಳು ಇಲ್ಲ ಅಂತಲ್ಲ, ಸರ್ಕಾರಕ್ಕೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇದೆ. ಕಾಲ ಕಾಲಕ್ಕೆ ಪ್ರತ್ಯಕ್ಷವಾಗುವ ಅಣ್ಣಾ ಹಜಾರೆಯಂಥವರು ಮತ್ತು ಅವರ ಸುಧಾರಣಾ ಕಾರ್ಯಸೂಚಿಗಳು ಬಿಕ್ಕಟ್ಟಿನಲ್ಲಿ ತೊಳಲಾಡುತ್ತಿರುವ ಸರ್ಕಾರಕ್ಕೆ ಜೀವರಕ್ಷಕ ಮದ್ದುಗಳಿದ್ದಂತೆ. ಅಣ್ಣಾ ಅವರ ಜತೆಯಲ್ಲಿರುವ ಸರ್ಕಾರೀ ಧುರೀಣರು ಈಗ ತೀವ್ರ ಮುಜುಗರಕ್ಕೀಡಾಗಿರುವ ಸರ್ಕಾರದ ಸುತ್ತ ಒಂದು ರಕ್ಷಣಾ ಕೋಟೆ ಕಟ್ಟುವಲ್ಲಿ ಸಹಾಯ ಮಾಡುತ್ತಾರೆ.

ಅಣ್ಣಾ ಮತ್ತು ಸರ್ಕಾರದ ನಡುವಿನ ಪರಸ್ಪರ ಒಡಂಬಡಿಕೆಯ ಆಧಾರದ ಮೇಲೆ ಅವಸರವಸರವಾಗಿ ರಚಿಸಲ್ಪಟ್ಟ ಆ ಸಮಿತಿಯು ತನ್ನ ಕಾರ್ಯಕಲಾಪಗಳನ್ನು ಪ್ರಾರಂಭಿಸಿದೆ. ಒಂದಕ್ಕೂ ಹೆಚ್ಚು ಕರಡು ಮಸೂದೆಗಳು ಮೊದಲ ಸಭೆಯಲ್ಲೇ ಮಂಡಿಸಲ್ಪಟ್ಟವು ಆದ್ದರಿಂದ ಅವುಗಳಲ್ಲಿರುವ ವಿವರಗಳ ಬಗ್ಗೆ ಚರ್ಚೆ ಮಾಡುವುದು ತೀರ ಅವಸರದ ಕೆಲಸವಾಗಬಹುದು. ಆದಾಗ್ಯೂ ಕೆಲವು ಕಣ್ಣಿಗೆ ಕಾಣಿಸುವ ನಿರ್ದೇಶನಗಳು ಅದರಲ್ಲಿವೆ. ರಾಲೆಗಾಂವ್ ಸಿದ್ಧಿಯಲ್ಲಿ ಉಂಟಾಗಿರುವ ಸಾಮಾಜಿಕ ಪರಿಸರವೇ ಹೇಳುವಂತೆ ಸಾಮಾಜಿಕ ಸಮಸ್ಯೆಗಳಿಗೆ ಅಣ್ಣಾ ಹಜಾರೆಯವರ ಸರ್ವಾಧಿಕಾರಿ ಧೋರಣೆ ಮತ್ತು ಸರ್ಕಾರವು ಅನುಸರಿಸುತ್ತಿರುವ ಅಧಿಕಾರ ಕೇಂದ್ರೀಕರಣದ ತತ್ವಗಳು(ಉದಾಹರಣೆಗೆ ಪ್ರೌಢಶಿಕ್ಷಣ ಮತ್ತು ಸಂಶೋಧನೆಗಾಗಿ ರಾಷ್ಟ್ರೀಯ ಮಂಡಳಿ ಮಸೂದೆಯ ವಿಷಯದಲ್ಲಿ) ಆ ಕರಡುಗಳಲ್ಲಿ ಪ್ರತಿಧ್ವನಿಸುತ್ತಿರುವುದು ನಮಗೆ ಗೋಚರಿಸುತ್ತಿದೆ. ಎಲ್ಲಾ ಇತಿಮಿತಿಗಳ ನಡುವೆಯೂ ಎಲ್ಲಾ ಒತ್ತಡಗಳನ್ನೂ ಎದುರಿಸಿ ನಾಗರಿಕರ ಹಕ್ಕುಗಳನ್ನು ರಕ್ಷಿಸುತ್ತಿರುವ ಈಗಿನ ನ್ಯಾಯಾಂಗ ವ್ಯವಸ್ಥೆಯನ್ನು ಹಾಳುಗೆಡಹುವಂತಹ ಮತ್ತು ಸಾಮಾಜಿಕ ನಿರ್ವಾತದಲ್ಲಿ ಕಾರ್ಯನಿರ್ವಹಿಸುವ ಮಹಾ ನ್ಯಾಯಾಧಿಕಾರಿಯನ್ನಾಗಿ ಲೋಕಪಾಲರನ್ನು ಅವರು ಮುಂಗಾಣುತ್ತಿದ್ದಾರೆ. ಈಗಿರುವ ಸಂಸ್ಥೆಗಳು ಗಳಿಸಿರುವುದಕ್ಕಿಂತಲೂ ಉನ್ನತ ಮಟ್ಟದ ಪಾರದರ್ಶಕತೆ ಹಾಗೂ ಉತ್ತರದಾಯಿತ್ವದ ವ್ಯವಸ್ಥೆಯನ್ನು ತರುವ ಯಾವ ಕುರುಹೂ ಲೋಕಪಾಲ್ ಮಸೂದೆಯ ಕರಡಿನಲ್ಲಿ ಕಾಣುತ್ತಿಲ್ಲ.

ಈ ಮಸೂದೆಯ ಉದ್ದೇಶ ಭ್ರಷ್ಟಾಚಾರವನ್ನು ತಡೆಯುವುದಲ್ಲ ಬದಲಿಗೆ ಭ್ರಷ್ಟರನ್ನು ಶಿಕ್ಷಿಸುವುದಾಗಿದೆ. ಈ ದೃಷ್ಟಿಯಲ್ಲಿ ಈಗಿರುವ ಸರ್ಕಾರೀ ಸಂಸ್ಥೆಗಳಿಗಿಂತ ಗುಣಾತ್ಮಕವಾಗಿ ವಿಭಿನ್ನವಾದ ಧೋರಣೆ ಈ ಮಸೂದೆಯಲ್ಲಿ ಕಾಣುತ್ತಿಲ್ಲ. ಒಂದು ಪಾರದರ್ಶಕ ವ್ಯವಸ್ಥೆಯನ್ನು ಸ್ಥಾಪಿಸಿದಾಗ ಮಾತ್ರ ಭ್ರಷ್ಟಾಚಾರವನ್ನು ತಡೆಯಲು ಸಾಧ್ಯವಾಗಬಹುದು. ಸಾಮಾಜಿಕ ತನಿಖೆ ಅಂತಹ ಒಂದು ಪಾರದರ್ಶಕತೆಯನ್ನು ಅಗತ್ಯವಾಗಿ ತರಲಾರದು. ಪಾರದರ್ಶಕತೆಯನ್ನು ಖಾತ್ರಿಪಡಿಸಬೇಕೆಂದರೆ ನಿರ್ಣಯ ತೆಗೆದುಕೊಳ್ಳುವ ವಿಧಾನದಲ್ಲಿ ಮೂಲಭೂತ ಬದಲಾವಣೆ ತರಬೇಕಾಗುತ್ತದೆ. ಭ್ರಷ್ಟಾಚಾರಕ್ಕೆ ಕಾರಣವಾಗಿರುವ ಸ್ಥಿತಿಯನ್ನು ನಿವಾರಿಸಬೇಕು; ಅದಕ್ಕೆ ಈಗಿರುವ ಸರ್ಕಾರದ ಆಡಳಿತವನ್ನು ಸಂಪೂರ್ಣವಾಗಿ ಕಳಚಿ ಹಾಕಬೇಕಾಗುತ್ತದೆ.

ಈಗ ಭಾರತದಲ್ಲಿರುವ ಭ್ರಷ್ಟಾಚಾರದ ವ್ಯಾಪಕತೆ ಮತ್ತು ಪ್ರಭಾವವನ್ನು ಗಣನೆಗೆ ತೆಗೆದುಕೊಂಡರೆ, ಜನಲೋಕಪಾಲ್ ಸಂಸ್ಥೆಯ ಸ್ಥಾಪನೆ ನಿಜಕ್ಕೂ ಒಂದು ಸ್ವಾಗತಾರ್ಹ ಹೆಜ್ಜೆ. ಆದರೆ ಈಗ ಪ್ರಸ್ತಾಪ ಮಾಡುತ್ತಿರುವ ಲೋಕಪಾಲ್ ಅತಿಮಾನುಷ ರೂಪ ಹೊಂದಿದೆ. ಈಗಿರುವ ಎಲ್ಲಾ ಭ್ರಷ್ಟಾಚಾರ ವಿರೋಧಿ ಸಂಸ್ಥೆಗಳನ್ನು ಒಟ್ಟುಗೂಡಿಸಿ ಹೊರಹೊಮ್ಮುವ ಈ ಲೋಕಪಾಲ್ ಸ್ವತಂತ್ರ ತನಿಖೆ ಹಾಗೂ ಕ್ರಮ ಜರುಗಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ. ಯಾವುದೇ ಉತ್ತರದಾಯಿತ್ವ ಇಲ್ಲದ ಅಪಾರ ಅಧಿಕಾರವನ್ನು ಹೊಂದುವ ಸಂಸ್ಥೆ ಇದಾಗುತ್ತದೆ. ಆದಕಾರಣ, ಅದು ಪ್ರಜಾಪ್ರಭುತ್ವದ ಎಲ್ಲಾ ನಿಯಮಗಳನ್ನೂ ಮೀರುತ್ತದೆ. ಜನ ಲೋಕಪಾಲ್ ತನ್ನ 'ಜನ್' ಗುಣಕ್ಕೆ ತಕ್ಕ ಹಾಗೆ ಇರಬೇಕೆಂದಾದರೆ ಅದರ ಸರ್ವಾಧಿಕಾರಿ ಮತ್ತು ಕೇಂದ್ರೀಕೃತ ಸಂರಚನೆಯನ್ನು ಮೊದಲು ತೆಗೆದುಹಾಕಬೇಕು; ಅದನ್ನು ಜನಸಮುದಾಯದ ಸಬಲೀಕರಣದ ಸಾಧನವಾಗಿ ಪರಿವರ್ತಿಸಬೇಕು. ನಾಡಿನ ಸಾಕ್ಷಿಪ್ರಜ್ಞೆಯನ್ನು ನಿಜವಾಗಿಯೂ ಉದ್ದೀಪನಗೊಳಿಸಬೇಕೆಂದರೆ ದೇಶದ ಪ್ರತಿಯೊಂದು ಪಂಚಾಯತ್‌ಗೆ ಮಸೂದೆಯ ಕರಡನ್ನು ಚರ್ಚೆಗೆ ಕಳುಹಿಸುವ ಮೂಲಕ ಮಸೂದೆಯನ್ನು ರೂಪಿಸುವಾಗಲೇ ಅಂತಹ ಒಂದು ಪ್ರಯತ್ನಕ್ಕೆ ನಾಂದಿ ಹಾಡಬಹುದು.

ಕನ್ನಡಕ್ಕೆ : ತಡಗಳಲೆ ಸುರೇಂದ್ರ

ಬಿಬಿಎಂಪಿಯ ಕೊಲೆಪಾತಕ ದುರ್ಲಕ್ಷ್ಯ

ಪುಟ4 ರಿಂದ

ಇಲ್ಲವೋ ಹೇಳುವವರು ಯಾರು ? ಎತ್ತರದ ಗೋಡೆ ಬೀಳುವ ಅಪಾಯವಿರುವ ರಸ್ತೆಯಲ್ಲಿ ಪೊಲೀಸರು ಸಂಚಾರ [illegible] ನಿರ್ಬಂಧಿಸಲಿಲ್ಲ? ಗೋಡೆ ಬಿದ್ದ ಕೂಡಲೆ ಅವಶೇಷ ತೆಗೆದು ತುರ್ತು ಚಿಕಿತ್ಸೆ ಕೊಡಿಸಿದ್ದರೆ ಅವರು ಉಳಿಯುತ್ತಿದ್ದರೋ ಏನೋ ? ಬಲ್ಲವರು ಯಾರು?

ಚಂಡಮಾರುತವೋ ಮಹಾಮಳೆಯೋ ಜಡಿದರೇನು ಗತಿ

ಇದು ಒಬ್ಬ ವ್ಯಕ್ತಿಯ ಸಾವಿನ ಪ್ರಶ್ನೆ ಅಷ್ಟೆ ಅಲ್ಲ. ಬೆಂಗಳೂರು ಮಹಾ ನಗರಕ್ಕೆ ಮುಂದೆ ಒಂದು ಚಂಡ ಮಾರುತವೋ, ಮಹಾ ಮಳೆಯೋ ಬಂದು ಅಪ್ಪಳಿಸಿದರೆ ಅಂತಹ ಸನ್ನಿವೇಶವನ್ನು ಎದುರಿಸಲು ಬಿಬಿಎಂಪಿ ಹಾಗೂ ನಮ್ಮ ಆಡಳಿತ ಯಂತ್ರ ಆ ಸ್ಥಿತಿಯನ್ನು ಹೇಗೆ ಎದುರಿಸಬಹುದು ? ಎಂಬ ಗಂಭೀರ ಪ್ರಶ್ನೆ ಇಲ್ಲಿದೆ. ಇಲ್ಲಿ ಈ ನಿಟ್ಟಿನಲ್ಲಿ ಏನಾದರೂ ಕಿಂಚಿತ್ ಸಿದ್ಧತೆ ಮಾಡಿಕೊಳ್ಳಲಾಗಿದೆ ಅಂತ ನಿಮಗೆ ಅನ್ನಿಸುತ್ತಿದೆಯಾ ? ಬೆಂಗಳೂರು ಮಹಾನಗರದ ಹೃದಯ ಭಾಗದಲ್ಲಿ ಕಾರ್ಪೊರೇಷನ್ ಕಛೇರಿಯ ಕೂಗಳತೆಯ ದೂರದಲ್ಲಿ ಒಂದು ಸಣ್ಣ ಇಟ್ಟಿಗೆಯನ್ನು ಇಡದೇ ಭದ್ರವಾದ ಕಾಂಪೌಂಡ್ ಕಟ್ಟಿದ್ದೇವೆ ಅಂತ ಬರಿ ಕಾಗದದ ಲೆಕ್ಕ ತೋರಿಸಿ ಲಕ್ಷ, ಲಕ್ಷ ಬಿಲ್‌ಗಳನ್ನು ನಗದು ಮಾಡಿಕೊಳ್ಳುವಂತಹ ದಂಧೆಕೋರರು ಹಾಗೂ ಕೋಟಿ ಕೋಟಿ ಹಣವನ್ನು ಗೋರಿಕೊಳ್ಳುವವರ ಅಡ್ಡೆಯಂತಾಗಿರುವ ಬಿಬಿಎಂಪಿಗೆ ಹಾಗೂ ಅದರ ರಕ್ಷಣೆಗಾಗಿಯೇ ಇದೆಯೋ ಎಂಬಂತಿರುವ ನಮ್ಮ ಒಟ್ಟು ಆಡಳಿತ ವ್ಯವಸ್ಥೆಗೆ ಜನರ ಬದುಕು,ಪ್ರಾಣದ ಬಗೆಗೆ ಯಾವ ಕಾಳಜಿಯೂ ಇಲ್ಲ. ಎಂಥಾ ಅಮಾನವೀಯವಾದ ವ್ಯವಸ್ಥೆ !! ಅಬ್ಬಬ್ಬ !!!

ಬಡತನ

ಇನ್ನೊಂದು ಶತಮಾನ ಅಂತ್ಯಕ್ಕೆ ಪೂರಾ
ಬಡತನದ ಅಂತ್ಯವೂ ಆಗುವುದೋ ಘೋರ
ಬಡ ಜನರು ಕೂಳಿರದೆ ಹೋದಾಗ ಸತ್ತು
ಉಳಿಯುವುದು ಯಾರಯ್ಯ ಉಳ್ಳವರೆ ಒಟ್ಟು

– ವಿಡಂಬಾರಿ


ಸದ್ಯದಲ್ಲೇ ಪೆಟ್ರೋಲ್, ಡೀಸೆಲ್ ದರ ಏರಿಕೆಯ ಸೂಚನೆ

ಈ ಸೂಚನೆ ನೀಡಿದವರು ಈಗಷ್ಟೇ ಇಂಡಿಯನ್ ಆಯಿಲ್ ಕಾರ್ಪೋರೇಷನ್ [illegible] ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಆರ್.ಎಸ್. ಬುತೋಲ. ಅಂತರಾಷ್ಟ್ರೀಯ [illegible] ತೈಲದ ಬೆಲೆ ತೀವ್ರವಾಗಿ ಏರಿರುವುದರಿಂದ ಸರಕಾರ ಈ ಬಗ್ಗೆ ಶೀಘ್ರವೇ ಸರ್ಕಾರ [illegible] ಕೈಗೊಳ್ಳಲಿದೆ ಎಂದ ಅವರು ವಿಧಾನ ಸಭಾ ಚುನಾವಣೆಗಳು ಮುಗಿಯುವುದನ್ನೇ [illegible] 2 ಸರಕಾರ ಕಾಯುತ್ತಿದೆ ಎಂಬುದನ್ನು ನಿರಾಕರಿಸಿದ್ದಾರೆ. ಹೇಗೆ ತಾನೆ ಒಪ್ಪಲು ಸಾಧ್ಯ?


ಸಿಡಬ್ಲುಜಿ ಕಲ್ಮಾಡಿ ಬಂಧನ, 2ಜಿ ಕನ್ನಿಮೋಳಿಗೆ ಸಮನ್ಸ್
ಇದು ಯುಪಿಎ-2ರ ಮಾದರಿ ಆಳ್ವಿಕೆ, ಚಿದಂಬರಂಜೀ!


ಯುಪಿಎ-2 ಸರಕಾರದ ಗೃಹ ಮಂತ್ರಿಗಳು ಪಶ್ಚಿಮ ಬಂಗಾಳದಲ್ಲಿ ಅದು ಅತ್ಯಂತ ಕೆಟ್ಟ ಆಡಳಿತದ ರಾಜ್ಯ ಎಂದು ಚುನಾವಣಾ ಭಾಷಣ ಮಾಡುತ್ತಿರುವಾಗಲೇ ಅವರ ಗೋಸುಂಬೆತನ ಅವರ ಆಡಳಿತ ಕೇಂದ್ರದಲ್ಲೇ ಬಯಲಾಗುತ್ತಿತ್ತು; ಚಿದಂಬರಂರವರ ಪಕ್ಷದ ಹಿರಿಯ ಎಂ.ಪಿ. ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟ ಹಗರಣದ 'ರೂವಾರಿ'ಗಳಲ್ಲಿ ಒಬ್ಬರಾದ ಸುರೇಶ ಕಲ್ಮಾಡಿಯವರನ್ನು ಸಿಬಿಐ ಬಂಧಿಸಿ ತನ್ನ ಕಚೇರಿಯ ಏರ್- ಕಂಡೀಶನ್ಡ್ ಲಾಕಪ್ಪಿಗೆ ಒಯ್ಯುತ್ತಿತ್ತು, ಇನ್ನೊಂದೆಡೆ ಅವರ ತವರು ರಾಜ್ಯ ತಮಿಳುನಾಡಿನಲ್ಲಿ ಅವರ 'ನೆಚ್ಚಿನ' ಮಿತ್ರಪಕ್ಷದ ಮುಖ್ಯಸ್ಥರ ಮಗಳು, ಪ್ರಭಾವೀ ಯುವ ಎಂ.ಪಿ. ಯ ವಿರುದ್ಧ ಅದೇ ಸಿಬಿಐ ಅದೇ ಯುಪಿಎ-2 ಸರಕಾರದ 2ಜಿ ಮಹಾಹಗರಣದಲ್ಲಿ ಪಿತೂರಿ ಮತ್ತು ಲಂಚದ 'ಆಪಾದನಾ ಪಟ್ಟಿ'ಯನ್ನು ಸಲ್ಲಿಸಿ, ಅವರು ಮತ್ತು ಇನ್ನು ನಾಲ್ಕು ಮಂದಿ ಮೇ 6 ರಂದು ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ಜಾರಿ ಮಾಡಿದೆ. ಅದೇ ವೇಳೆಗೆ ಪಶ್ಚಿಮ ಬಂಗಾಳಕ್ಕೆ ಗ್ರಾಮೀಣ ಅಭಿವೃದ್ಧಿಗಾಗಿ ಇದೇ ಕೇಂದ್ರ ಸರಕಾರದ ಪಂಚಾಯತ್ ರಾಜ್ಯ ಪ್ರಶಸ್ತಿ ಪ್ರಕಟವಾಗಿದೆ ಎಂಬುದು ಯುಪಿಎ-2 ಗ್ರಹಮಂತ್ರಿಗಳ ಹೇಳಿಕೆಯ ಟೊಳ್ಳುತನಕ್ಕೆ ಕಿರೀಟ ಇಟ್ಟಿದೆ.






ಎಪ್ರಿಲ್ 25ರಂದು ಎರಡು ಬಾರಿ ತಪ್ಪಿಸಿಕೊಂಡ ಮೇಲೆ ಮತ್ತೆ ಸಿಬಿಐ ವಿಚಾರಣೆ ಎದುರಿಸಿದ ಸುರೇಶ ಕಲ್ಮಾಡಿಯವರನ್ನು ಕಾಮನ್‌ವೆಲ್ತ್ ಕ್ರೀಡಾಕೂಟದ ಹಗರಣದ ಒಂದು ಕೇಸಿನಲ್ಲಿ ಸರಕಾರೀ ಖಜಾನೆಗೆ 95 ಕೋಟಿ ರೂ.ಗಳ ನಷ್ಟ ಉಂಟು ಮಾಡಿದ ಆಪಾದನೆಯ ಮೇಲೆ ಬಂಧಿಸಿ 8 ದಿನಗಳ ಸಿಬಿಐ ಕಸ್ಟಡಿಗೆ ಒಳಪಡಿಸಲಾಗಿದೆ. ಲಂಡನಿನಲ್ಲಿ ಕ್ರೀಡಾಜ್ಯೋತಿಯ ಮೆರವಣಿಗೆಯ ಸಂದರ್ಭದಲ್ಲಿನ ಅಕ್ರಮಗಳು ಸದ್ಯಕ್ಕೆ ಈ ಬಂಧನಕ್ಕೆ ಕಾರಣ. ಸ್ವಿಝರ್ಲೆಂಡಿನ ಒಂದು ಕಂಪನಿ 'ಸ್ವಿಸ್ ಟೈಮಿಂಗ್'ಗೆ ಕ್ರೀಡಾ ಅಂಕಗಳನ್ನು ದಾಖಲಿಸುವ ಯಂತ್ರಗಳನ್ನು ಒದಗಿಸುವಲ್ಲಿ ಅಕ್ರಮ, ಪಿತೂರಿ ನಡೆದು ಸರಕಾರಕ್ಕೆ ನಷ್ಟವುಂಟು ಮಾಡಲಾಗಿದೆ ಎಂಬುದು ಸಿಬಿಐ ಆಪಾದನೆ. ಭಾರತ ದಂಡಸಂಹಿತೆ (ಐಪಿಸಿ)ಯ 120ಬಿ (ಪಿತೂರಿ) ಮತ್ತು 420(ವಂಚನೆ) ಹಾಗೂ ಭ್ರಷ್ಟಾಚಾರ ತಡೆ ಕಾನೂನಿನ ಅಂಶಗಳ ಅಡಿಯಲ್ಲಿ ಅವರನ್ನೀಗ ಬಂಧಿಸಲಾಗಿದೆ. ಈ ಸುದ್ದಿ ಬಂದ ಮೇಲೆ ಅವರನ್ನು ಕಾಂಗ್ರೆಸ್ ಪಕ್ಷದಿಂದ ಅಮಾನತು ಮಾಡಲಾಗಿದೆ ಎಂದು ತಿಳಿಸಲಾಗಿದೆ.






ಡಿಎಂಕೆ ಮುಖ್ಯಸ್ಥ ಮತ್ತು ತಮಿಳುನಾಡಿನ ಹಾಲೀ ಮುಖ್ಯಮಂತ್ರಿಗಳ ಪುತ್ರಿ ಕನ್ನಿಮೋಳಿಯ ಮೇಲೆ ಕೇಸು ಹಾಕಿರುವುದು ಕೂಡ ಅದೇ ಐಪಿಸಿ 120ಬಿ (ಪಿತೂರಿ) ಮತ್ತು ಭ್ರಷ್ಟಚಾರ ತಡೆ ಕಾನೂನಿನ ಸೆಕ್ಷನ್ 7ರ (ಸಾರ್ವಜನಿಕ ಸೇವೆಯಲ್ಲಿರುವವರು ಕಾನೂನು ಬಾಹಿರ ಪ್ರತಿಫಲ(ಅಂದರೆ ಲಂಚ) ಪಡೆದಿರುವುದು) ಅಡಿಯಲ್ಲಿ. ಆಕೆ ಒಂದು ಕ್ರಿಮಿನಲ್ ಪಿತೂರಿಯ ಹಿಂದಿನ 'ಸಕ್ರಿಯ ಮೆದುಳು' ಎಂದು ಸಿಬಿಐ ಹೇಳಿದೆ. ಈಗ ಜೈಲಿನಲ್ಲಿರುವ ಮಾಜಿ ದೂರಸಂಪರ್ಕ ಮಂತ್ರಿಗಳ ಮೂಲಕ 2ಜಿ ಕೊಡಿಸಲು ಸುಮಾರು 200 ಕೋಟಿ ರೂ. ಲಂಚವನ್ನು ಬಳಸು ಮಾರ್ಗದಲ್ಲಿ ತಾನು ಪಾಲುದಾರಳಾದ ಕಲೈನಾರ್ ಟಿವಿಗೆ ಪಡೆದಿರುವ ಕೇಸು ಇದು. ಈ ಲಂಚ ಸ್ವಾನ್ ಟೆಲಿಕಾಂ ಪ್ರಾಯೋಜಿತ ಡೈನಮಿಕ್ಸ್ ರಿಯಲ್ಟಿ ಕುಸೆಗಾಂ ಫ್ರುಟ್ಸ್ ಅಂಡ್ ವೆಜಿಟೇಬಲ್ಸ್ ಪ್ರೈ ಲಿ. ಮತ್ತು ಸಿನೆಯುಗ್ ಫಿಲ್ಮ್ಸ್ ಮೂಲಕ ಕಲೈನಾರ್ ಟಿವಿಗೆ ಬಂದಿದೆ ಎಂಬುದು ಈಗ ಸಿಬಿಐ ಆಪಾದನೆ. ನಿರಾ ರಾಡಿಯ ಟೇಪುಗಳಲ್ಲಿನ ಸಂಭಾಷಣೆಗಳ ಆಧಾರದಲ್ಲಿ ಈಕೆ ಎ.ರಾಜ ದೂರಸಂಪರ್ಕ ಮಂತ್ರಿಯಾಗುವಲ್ಲಿ ಡಿಎಂಕೆ ಪಕ್ಷದ ಮುಖ್ಯಕಚೇರಿಯ ಮೂಲಕ ಪ್ರಭಾವ ಬೀರಿದ್ದಾರೆ ಎಂದೂ ಸಿಬಿಐ ಹೇಳಿದೆ.

ರಕ್ತವಿದೆ ಬೀದಿಯ ಮೇಲೆ




ನಾನೇಕೆ ಮಾತಾಡುವುದಿಲ್ಲ
ಬಯಕೆಗಳ ಬಗ್ಗೆ
ಎಲೆಗಳ ಬಗ್ಗೆ
ನನ್ನ ನಾಡಿನ ಮಹಾ ಅಗ್ನಿಪರ್ವತಗಳ ಬಗ್ಗೆ
-ಎಂದು ನೀವು ಕೇಳುತ್ತೀರಿ;
ನೋಡಿ: ಬೀದಿಯ ಮೇಲೆ ರಕ್ತವಿದೆ!
ನೋಡಿ : ರಕ್ತವಿದೆ ಬೀದಿಯ ಮೇಲೆ!'

■ ಪ್ಲಾಬ್ಲೊ ನೆರೂದ



ವೇದರಾಜ ಎನ್.ಕೆ.



ಎಂಡೋಸಲ್ಫನ್ ಎಂಬ ವಿಷದ ನಿಷೇಧಕ್ಕೆ ಇಷ್ಟೇಕೆ ಹಿಂಜರಿಕೆ?

ಜನತೆಗೆ 'ಸಾಮೂಹಿಕ ವಿಷಪ್ರಾಶನ' ವಾಗುವುದನ್ನು ತಡೆಯುವುದಕ್ಕಿಂತ ಕೀಟನಾಶಕ ಕಾರ್ಪೊರೇಟ್‌ಗಳ ಹಿತಗಳೇ ಯುಪಿಎ ಸರಕಾರಕ್ಕೆ ಮುಖ್ಯವಾದಂತಿದೆ. ಎಂಡೋಸಲ್ಫನ್ ತೋಟದ ಬೆಳೆಗಳಲ್ಲಿ ಬಳಸುವ ಒಂದು ಕೀಟನಾಶಕ. ಇದು ಅತ್ಯಂತ ವಿಷಕಾರೀ ಕೀಟನಾಶಕಗಳಲ್ಲಿ ಒಂದು ಎಂದು ವಿಶ್ವಸಂಸ್ಥೆಯೇ ಪಟ್ಟಿ ಮಾಡಿದೆ. ಭಾರತದಲ್ಲಿ ಕೇರಳ, ಕರ್ನಾಟಕ, ಪಂಜಾಬ್, ಉತ್ತರ ಪ್ರದೇಶ, ಹರ್ಯಾಣ, ರಾಜಸ್ತಾನ ಮತ್ತು ಮಹಾರಾಷ್ಟ್ರದಲ್ಲಿ ಸಾವಿರಾರು ಮತ್ತು ಕೃಷಿಕೂಲಿಕಾರರು ಸಾಯುವಂತೆ, ತೀವ್ರ ಕಾಯಿಲೆಗಳಿಂದ ನರಳುವಂತೆ ಮಾಡಿರುವ ಈ ಕೀಟನಾಶಕವನ್ನು ನಿಷೇಧಿಸಬೇಕು ಎಂಬ ಬಲವಾದ ಬೇಡಿಕೆ ಇದ್ದರೂ ಕೇಂದ್ರ ಸರಕಾರ ಈ ವಿಷಯದಲ್ಲಿ ಕಾಲೆಳೆಯುತ್ತಿದೆ.

ಕೇರಳ ಸರಕಾರ ಇದನ್ನು ಈಗಾಗಲೇ ನಿಷೇಧಿಸಿದೆ. ಕೇಂದ್ರದ ಕಾಂಗ್ರೆಸ್ ಸರಕಾರವೂ 2001ರಲ್ಲಿ ಇದನ್ನು ನಿಷೇಧಿಸಬೇಕಾಗಿ ಬಂದಿತ್ತು. ಆದರೆ 2004ರಲ್ಲಿ ಯುಪಿಎ-1 ಸರಕಾರ ಈ ನಿಷೇಧವನ್ನು ಹಿಂತೆಗೆದುಕೊಂಡಿತು. ಅಂದಿನಿಂದ ನಿಷೇಧದ ಬೇಡಿಕೆಯನ್ನು ಕೇಂದ್ರ ಸರಕಾರ ರೈತರು, ಕೃಷಿಕೂಲಿಕಾರರು ಇದರಿಂದಾಗಿ ನರಳುತ್ತಿದ್ದರೂ ಗಮನಿಸದೆ, ಒಂದಿಲ್ಲೊಂದು ನೆವ ಕೊಟ್ಟು ಮುಂದೂಡುತ್ತಲೇ ಬಂದಿದೆ.

ಎಪ್ರಿಲ್ 25ರಂದು ಕೇರಳದ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ರಾಜ್ಯಾದ್ಯಂತ ಏಳು ಗಂಟೆಗಳ ಉಪವಾಸ ಸತ್ಯಾಗ್ರಹದ ಮೂಲಕ ಯುಪಿಎ-2 ಸರಕಾರದ ಈ ನಿಲುವಿಗೆ ಬಲವಾದ ಪ್ರತಿಭಟನೆ ವ್ಯಕ್ತಪಡಿಸಲಾಗಿದೆ. ನವದೆಹಲಿಯಲ್ಲಿ ಎಡಪಕ್ಷಗಳ ಸಂಸತ್ ಸದಸ್ಯರೂ ಮತಪ್ರದರ್ಶನ ನಡೆಸಿದ್ದಾರೆ. ಆದರೆ ಪ್ರಧಾನ ಮಂತ್ರಿಗಳು ಮತ್ತೆ ತನಿಖಾ ಆಯೋಗ ರಚಿಸುವ ಮಾತಷ್ಟೇ ಆಡಿದ್ದಾರೆ. ಬೇರೆ ರಾಜ್ಯಗಳ ಅಭಿಪ್ರಾಯಗಳನ್ನು ಕೇಳಬೇಕಂತೆ. ಅದಕ್ಕೆ ಇಷ್ಟೊಂದು ಸಮಯ ಬೇಕೇ ಎಂಬುದು ಸಹಜ ಪ್ರಶ್ನೆ.

ಜಿನೇವಾದಲ್ಲಿ ಕಳೆದ ವರ್ಷ ನಡೆದ ಅಂತರ್‍ರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಿದ್ದ 29 ದೇಶಗಳಲ್ಲಿ 26 ದೇಶಗಳು ಇದನ್ನು ನಿಷೇಧಿಸಬೇಕೆಂದು ಆಗ್ರಹಿಸಿದ್ದವು. ಭಾರತ ಇದನ್ನು ವಿರೋಧಿಸಿದ ದೇಶಗಳಲ್ಲಿ ಒಂದಾಗಿತ್ತು. ಇದು ಅಷ್ಟೊಂದು ಅಪಾಯಕಾರಿ ಅಲ್ಲ ಎಂಬುದು ಯುಪಿಎ-2 ಸರಕಾರದ ನಿಲುವಾಗಿತ್ತು. ಈಗ ಈ ಸಮಾವೇಶ ನೇಮಿಸಿದ್ದ ಪರಾಮರ್ಶೆ ಸಮಿತಿಯ ಸಭೆ ನಡೆಯುತ್ತಿದ್ದು ಇದರ ದುಷ್ಪರಿಣಾಮಗಳು ಇನ್ನೂ ಸಾಬೀತಾಗಿಲ್ಲ, ಆದ್ದರಿಂದ ನಿಷೇಧದ ಪ್ರಶ್ನೆಯನ್ನು 2013ರಲ್ಲಿ ಸ್ಟಾಕ್‌ಹೋಂ ನಲ್ಲಿ ನಡೆಯುವ ಸಮಾವೇಶಕ್ಕೆ ಮುಂದೂಡಬೇಕು ಎಂದು ಯುಪಿಎ-2 ಸರಕಾರ ಏಶ್ಯಾ-ಶಾಂತಸಾಗರ ದೇಶಗಳಿಗೆ ಕಳಿಸಿದ ಸುತ್ತೋಲೆಯ ಮೂಲಕ ಲಾಬ್ಬಿ ಮಾಡುತ್ತಿದ್ದ ಸುದ್ದಿ ವರದಿಯಾಗಿತ್ತು. ಆದರೆ ಎಪ್ರಿಲ್ 26ರಂದು ನಡೆದ ಸಭೆಯಲ್ಲಿ ಭಾರತ ಸರಕಾರದ ಪ್ರತಿನಿಧಿಗಳು ದುಷ್ಪರಿಣಾಮಗಳ ಸಾಬೀತಿನ ಬಗ್ಗೆ ಮಾತಾಡದೆ 'ಇದಕ್ಕೆ ಪರ್ಯಾಯಗಳಿಲ್ಲ' ಎಂಬ ಮಟ್ಟಕ್ಕೆ ತನ್ನ ಆಕ್ಷೇಪಗಳನ್ನು ಇಳಿಸಿರುವುದಾಗಿ ವರದಿಯಾಗಿದೆ. ಇದು ಎಪ್ರಿಲ್ 25ರ ಪ್ರತಿಭಟನೆಯ ಪರಿಣಾಮ ಎನ್ನಲಾಗಿದೆ.



ಕೇರಳ ಮುಖ್ಯಮಂತ್ರಿ ಸಹಿತ ಸಾಮೂಹಿಕ ಧರಣಿ

ಯುಪಿಎ-2 ಸರಕಾರ 'ಆಮ್ ಆದ್ಮಿ'ಯ ಮಂತ್ರ ಜಪಿಸುತ್ತಿದ್ದರೂ, ಒಂದು ಖಚಿತ ನಿರ್ಣಯ ಕೈಗೊಳ್ಳುವ ಪ್ರಶ್ನೆ ಬಂದಾಗ 'ಆಮ್ ಆದ್ಮಿ'ಯ ಹಿತಕ್ಕಿಂತ ಬೇರೆ ವಿಷಯಗಳೇ ಅದಕ್ಕೆ ಮುಖ್ಯವಾಗುತ್ತವೆ ಎಂದು ಮತ್ತೊಮ್ಮೆ ಸ್ಪಷ್ಟಗೊಂಡಿದೆ. ಕೀಟನಾಶಕ ಕಾರ್ಪೊರೇಟ್‌ಗಳ ಲಾಭಕ್ಕಾಗಿ ಭಾರತೀಯ ಜನತೆಗೆ ಸಾಮೂಹಿಕ ವಿಷವುಣ್ಣಿಸಲಾಗುತ್ತಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ ಖೇದ ವ್ಯಕ್ತಪಡಿಸಿವೆ. ಈ ಸಾಮೂಹಿಕ ವಿಷಪ್ರಾಶನವನ್ನು ನಿಲ್ಲಿಸಲು ಆರು ಅಂಶಗಳ ಬೇಡಿಕೆಯನ್ನು ಮುಂದಿಟ್ಟು ಹೋರಾಟವನ್ನು ಮುಂದುವರೆಸಲು ಈ ಸಂಘಟನೆಗಳು ಪಣ ತೊಟ್ಟಿವೆ.

ಅಮೆರಿಕನ್ ಕಂಪನಿ ಮಾನ್ಸಂಟೋ ಈ ಕೀಟನಾಶಕದ ಪ್ರಮುಖ ಉತ್ಪಾದಕನಾದರೂ ಅಮೆರಿಕಾ ಸರಕಾರವೂ ಇದನ್ನು ನಿಷೇಧಿಸಿದೆ ಎಂಬುದನ್ನು ಗಮನಿಸಿದರೆ, ಯುಪಿಎ-2 ಸರಕಾರದ ಕಾರ್ಪರೇಟ್-ಪ್ರಿಯತೆ ಎಷ್ಟು ಆಳವಾಗಿದೆ ಎಂಬುದು ಕಾಣಬರುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ



ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ


ಅಶೋಕರ ಸ್ವೀಡನ್ ಪ್ರವಾಸ ವೆಚ್ಚ ಎರಡು ಕಡೆ ವಸೂಲಿ ?!!

ಅರ್.ಅಶೋಕ್ ರಾಜ್ಯ ಬಿಜೆಪಿ ಸರ್ಕಾರದ ಸಚಿವರು. ಹೌದು ಅವರು ಈಗ ರಾಜ್ಯದ ಗೃಹ ಸಚಿವರು. ಹಿಂದೆ ಅವರು ಆಗಿದ್ದರು ಸಾರಿಗೆ ಸಚಿವರು. ಯಾಕೆ ಈ ಎಲ್ಲ ಪ್ರವರ ಅಂತೀರ. ಇಲ್ಲಿ ನೋಡಿ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ವೋಲ್ವೋ ಬಸ್‌ಗಳ ಖರೀದಿ ಸಂಬಂಧ ಅವರು 2009 ರ ಜೂನ್- ಜುಲೈ ತಿಂಗಳಲ್ಲಿ ಸ್ವೀಡನ್ ದೇಶಕ್ಕೆ ಪ್ರಯಾಣ ಬೆಳೆಸಿದರಂತೆ. ಬಸ್‌ಗಳ ಖರೀದಿಯೂ ಆಯಿತೆನ್ನಿ. ಸಚಿವರ ಪ್ರಯಾಣ ವೆಚ್ಚವನ್ನು ಪ್ರವಾಸ ಪ್ರಾಯೋಜಿಸಿದ ವೋಲ್ವೋ ಕಂಪನಿಯೇ ಭರಿಸಿದೆ ಅನ್ನುತ್ತದೆ ಕೆ.ಎಸ್.ಆರ್.ಟಿ.ಸಿ. ಕೊಡುವ ಅಧಿಕೃತ ಮಾಹಿತಿ.

ಈಗ ಇಲ್ಲಿ ಇನ್ನೊಂದು ಮಾಹಿತಿ ಇದೆ. ಇದರ ಬಗೆಗೆ ತೀರ್ಮಾನಕ್ಕೆ ಬರುವುದು ನಿಮಗೆ ಬಿಟ್ಟದ್ದು. ಸ್ವೀಡನ್ ಪ್ರವಾಸ ವೆಚ್ಚವಾಗಿ ಸಚಿವ ಆರ್. ಅಶೋಕ್ ರವರು ಕೆ.ಎಸ್.ಆರ್.ಟಿ.ಸಿ. ಯಿಂದ 3,01287.00 ರೂಪಾಯಿ ಪಡೆದುಕೊಂಡಿದ್ದಾರಂತೆ. ಇದು ಮಾಹಿತಿ ಹಕ್ಕು ಕಾಯ್ದೆಯಡಿ ಕಾರ್ಮಿಕ ಮುಖಂಡರಾದ ಎಚ್. ವಿ. ಅನಂತ್ ಸುಬ್ಬರಾವ್ ಅವರು ಬಿ.ಎಂ.ಟಿ.ಸಿ. ಯಿಂದ ಪಡೆದುಕೊಂಡಿರುವ ಮಾಹಿತಿ. 'ದಿ ಹಿಂದೂ' ಪತ್ರಿಕೆ ಈ ಬಗೆಗೆ ಪ್ರಶ್ನೆ ಎತ್ತಿದೆ.

ಇದಕ್ಕೆ ಅಶೋಕ್ ಏನಾದರೂ ಉತ್ತರ ಕೊಡುವರೋ ಇಲ್ಲ ಬಿಜೆಪಿ ಸರ್ಕಾರದಲ್ಲಿ ನಾವುಗಳು ಸಾವಿರ ಸಾವಿರ ಕೋಟಿ ರೂಪಾಯಿಗಳ ಅಕ್ರಮಗಳ ಆಪಾದನೆ ಬಂದರೂ ಕ್ಯಾರೆ ಅಂದಿಲ್ಲ, ಇನ್ನು ಇದ್ಯಾವ ಮಹಾ ಲೆಕ್ಕ ಅಂತ ಉತ್ತರಿಸಲು ನಿರಾಕರಿಸುತ್ತಾರೋ? ಈ ಮಧ್ಯೆ ವೋಲ್ವೋ ಕಂಪನಿ ತಾನು ಪ್ರವಾಸ ವೆಚ್ಚ



ಭರಿಸಿಲ್ಲ ಅಂದಿದೆ. ಹಾಗಿದ್ದರೆ ಇಲ್ಲಿ ಯಾವ ಮಾಹಿತಿ ಸರಿ ? ಇದಕ್ಕೆ ಉತ್ತರ ಹೇಳುವವರು ಯಾರು ?

* * *

ಕೊಪ್ಪಳದಲ್ಲಿ ಉದ್ಯೋಗಖಾತ್ರಿಯ 'ಭಯಾನಕ' ಜಾರಿ

ನಿಮ್ಮೂರಲ್ಲಿ ಒಂದು ತಿಂಗಳಿಗೆ ಎಷ್ಟು ದಿನ ? ಗೊತ್ತೆ ? ಅದು ಕೊಪ್ಪಳ ಜಿಲ್ಲೆಯಲ್ಲಿ ಕನಿಷ್ಠ ನೂರು ದಿನ...

ಕರ್ನಾಟಕ ರಾಜ್ಯದ ಧಾರವಾಡ ಜಿಲ್ಲೆಗೆ ಉದ್ಯೋಗ ಖಾತ್ರಿ ಯೋಜನೆಯ ಜಾರಿಗಾಗಿ ರಾಷ್ಟ್ರೀಯ ಪ್ರಶಸ್ತಿ ಬಂದಿದೆಯಂತೆ. ಹಾಗಂತ ಬಿಜೆಪಿ ಸರ್ಕಾರವು ಲಕ್ಷಾಂತರ ರೂಪಾಯಿಗಳ ಜಾಹಿರಾತು ನೀಡಿ ಪ್ರಚಾರ ಮಾಡಿಕೊಳ್ಳುತ್ತಿದೆ. ಇರಲಿ ಧಾರವಾಡ ಜಿಲ್ಲೆಯಲ್ಲಿ ಏನಾಗಿದೆ ಆಮೇಲೆ ನೋಡೋಣ. ಈಗ ನೆರೆಯ ಕೊಪ್ಪಳ ಜಿಲ್ಲೆಯ ವಿಷಯಕ್ಕೆ ಬರೋಣ. 2010-11ರ ಸಾಲಿನಲ್ಲಿ ಈ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸು. 250 ಕೋಟಿ ರೂಪಾಯಿಗಳ ಕೆಲಸ ನಡೆದಿದೆಯಂತೆ. ಸ್ವಲ್ಪ ಸಂತೋಷ ಪಡಬಹುದಾದ ವಿಷಯವೇ ಅನಿಸುತ್ತಾ ? ಸಂತೋಷ ಪಡುವ ಮೊದಲು ಈ ವಿವರಗಳನ್ನು ನೋಡೋಣ.

ಜಿಲ್ಲೆಯಲ್ಲಿ ಖರ್ಚಾದ ಈ ಒಟ್ಟು ಹಣದ ಶೇ. 90 ರಷ್ಟು ಖರ್ಚಾಗಿರುವುದು 2011 ರ ಮಾರ್ಚ್ ತಿಂಗಳಲ್ಲಿ. ಅಂದರೆ ಇಲ್ಲಿ ಏನು ನಡೆದಿದೆ ಅಂತ ನೀವು ಧಾರಾಳವಾಗಿ ಊಹಿಸಬಹುದು. ಇಲ್ಲಿ ಇನ್ನೂ ಸ್ವಾರಸ್ಯಕರವಾದ ಸಂಗತಿಗಳಿವೆ. ಒಂದು ತಿಂಗಳಲ್ಲಿ ಎಷ್ಟು ದಿನಗಳಿವೆ ? ಗರಿಷ್ಟ 31 ಅಲ್ಲವೇ ? ಇಲ್ಲ, ಕೊಪ್ಪಳ ಜಿಲ್ಲೆಯಲ್ಲಿ ಅದು ಕನಿಷ್ಟ 100 ದಿನ ಇದೆ. ಅದು ಇನ್ನೂ ಹೆಚ್ಚು ಇರಬಹುದೇನೋ ಸರಿಯಾಗಿ ಪರಿಶೀಲಿಸಬೇಕು.



ನೀವೇ ನೋಡಿ. ಈ ಯೋಜನೆಯಲ್ಲಿ ಅರ್ಜಿ ಹಾಕಿದವರಿಗೆ ವರ್ಷಕ್ಕೆ ಒಂದು ನೂರು ದಿನಗಳ ಉದ್ಯೋಗ ಕೊಡಬೇಕಲ್ಲವೇ ? ಕೊಟ್ಟಿದ್ದಾರೆ. ಅರ್ಜಿ ಹಾಕಿದವರಿಗೆ ಮಾರ್ಚ್ ತಿಂಗಳೊಂದರಲ್ಲೇ ಒಂದು ನೂರು ದಿನಗಳ ಕೆಲಸ ಕೊಟ್ಟಿದ್ದಾರೆ !! ಆಹಾ ಪವಾಡವೇ ?

ಈ ಬಗೆಗೆ ಪತ್ರಿಕಾ ವರದಿಗಾರರು ಪ್ರಶ್ನಿಸಿದರೆ ಅಧಿಕಾರಿಗಳು ಕೊಟ್ಟ ಉತ್ತರವೂ ನಮ್ಮನ್ನು ಮೂಕ ವಿಸ್ಮಿತರನ್ನಾಗಿಸುತ್ತದೆ. 'ಯೋಜನೆಗೆ ಮಂಜೂರಾಗಿರುವ ದುಡ್ಡು ಮತ್ತೆ ಸರ್ಕಾರಕ್ಕೆ ವಾಪಾಸಾಗಬಾರದು ಅಂತ ಅಡ್ವಾನ್ಸ್ ಆಗಿ ಕೂಲಿ ಹಣ ಕೊಟ್ಟಿದ್ದೀವಿ. ಮುಂದೆ ಅವರು ಕೆಲಸ ಮಾಡ್ತಾರೆ ಬಿಡ್ರಿ...'.

ನಿಜವಾಗಲೂ ಕೂಲಿಕಾರರು ಮೈಮುರಿದು ಮಾಡಿದ ಕೆಲಸಗಳಿಗೇ ಹಣ ಕೊಡದ ಆಡಳಿತ, ಕೂಲಿ ಕೇಳಿದರೆ ರೈತರ ಮೇಲೆ ಅಮಾನುಷ ಲಾಠಿ ಪ್ರಹಾರಕ್ಕೆ ಕಾರಣವಾದ ಆಡಳಿತ ಇಲ್ಲಿ ಕೆಲಸ ಮಾಡದೇ ಕೂಲಿಕಾರರಿಗೆ ಅಡ್ವಾನ್ಸ್ ಆಗಿ ಕೂಲಿ ಹಣ ಕೊಟ್ಟಿದೆಯಂತೆ !!

ಕೂಲಿ ಹಣ ಜಿಲ್ಲೆಯ ಯಾವ ಯಾವ ಕಾಂಟ್ರಾಕ್ಟ್‌ದಾರರ ಜೇಬಿಗೆ ಬಿದ್ದಿದೆ. ಯಾವ ಯಾವ ಮಧ್ಯವರ್ತಿಗಳ ಬಾಯಿಗೆ ಬಿದ್ದಿದೆ ಅಂತ ಈಗ ತುರ್ತಾಗಿ ತನಿಖೆ ಆಗಬೇಕಾಗಿದೆ.

ಹೌದು, ಈ ಕೊಪ್ಪಳ ಜಿಲ್ಲೆಗೂ ಒಂದು ರಾಷ್ಟ್ರೀಯ ಪ್ರಶಸ್ತಿ ಯಾಕೆ ಸಿಕ್ಕಿಲ್ಲ ಅಂತ ಆಶ್ಚರ್ಯವಾಗುತ್ತಿದೆಯೇ ? ನಮ್ಮ ಘನ ಕಾಂಗ್ರೆಸ್ ನೇತೃತ್ವದ ಯುಪಿಎ- 2 ದರ್ಬಾರ್‌ನಲ್ಲಿ ಕೊಪ್ಪಳ ಜಿಲ್ಲೆಗೊಂದು ಪ್ರಶಸ್ತಿ ಸಿಕ್ಕರೂ ಸಿಗಬಹುದು. ನೋಡ್ತಾ ಇರಿ. ●

...ನಿಲ್ಲದ ಧಾಳಿಗಳು

ಪುಟ 6 ರಿಂದ

ತಡೆದು ವಿದ್ಯಾರ್ಥಿಗಳನ್ನು ರಿವ್ಯಾಂಡ್ ರೂಮಿಗೂ, ಆಶ್ರಮದ ನಿರ್ವಾಹಕರುಗಳನ್ನು ಪೊಲೀಸ್ ಠಾಣೆಗೋ ಕಳುಹಿಸಲಾಗುತ್ತದೆ. ಸ್ಟೆಲ್ಲಾ ಮೆರೀಸ್‌ನವರು ಮಾತ್ರ ಎಲ್ಲವನ್ನು ಪಾರದರ್ಶಕವಾಗಿ ಕಾನೂನುಬದ್ಧವಾಗಿ ದಾಖಲು ಮಾಡಿಕೊಂಡಿದ್ದುದರಿಂದ ಪರಿವಾರದವರ ಬೇಳೆ ಬೇಯದೆ ಬೀದಿ ವಿಚಾರಣೆಯ ನಂತರ ವಿದ್ಯಾರ್ಥಿಗಳನ್ನು ಬಿಡುಗಡೆಗೊಳಿಸಲಾಗುತ್ತದೆ. ಆದರೂ ಕುಂಟುನೆಪ ಹುಡುಕುವ ಪರಿವಾರ ಮಕ್ಕಳನ್ನು ಆಶ್ರಮದಲ್ಲಿ ಮತಾಂತರಗೊಳಿಸಲಾಗುತ್ತದೆ ಎಂದು ತೀವ್ರ ರೀತಿಯ ಪ್ರಚಾರವನ್ನು ಹರಿಯಬಿಟ್ಟಿದೆ. ಈ ಘಟನೆಗಳ ವಿರುದ್ಧ ದೊಡ್ಡ ರೀತಿಯ ಪ್ರತಿಭಟನೆಯ ಧ್ವನಿಗಳು ಜಿಲ್ಲೆಯಲ್ಲಿ ಮೊಳಗತೊಡಗಿವೆ. ಬಿಜೆಪಿಗರ ರಾಮರಾಜ್ಯದ ಸುಖದಲ್ಲಿ ನರಳುತ್ತಿರುವ, ವಿಜಯನಗರ ಸಾಮ್ರಾಜ್ಯದ ವೈಭವದಲ್ಲಿ ಬಸವಳಿದಿರುವ ಜನತೆ ಮಾತ್ರ ಪರಿವಾರದ ಮತಾಂತರದ ಹುಯಿಲಿಗೆ ಯಾವುದೇ ಪ್ರತಿಕ್ರಿಯೆ ತೋರ್ಪಡಿಸದೆ ನಿರ್ಲಿಪ್ತರಾಗಿದ್ದಾರೆ. ಮತ್ತೆ ಕೋಮುಹಿಂಸೆಯ, ದ್ವೇಷದ ಬಲೆಗೆ ಬೀಳದಿರುವುದರಲ್ಲೇ ತಮ್ಮ ಸಂಕಷ್ಟಗಳ ಬಿಡುಗಡೆಯ ದಾರಿಯಿದೆ ಎಂಬುದನ್ನು ಇಲ್ಲಿನ ಜನ ಅರ್ಥೈಸಿಕೊಳ್ಳಬೇಕಿದೆ.

ಕಾಂಗ್ರೆಸ್‌ನ ಹೇಡಿತನ

ತಮ್ಮ ಪಕ್ಷದ ಪ್ರಮುಖ, ಪಾಲಿಕೆಯಲ್ಲಿ ಪಕ್ಷದ ಗುಂಪಿನ ನಾಯಕ ಮಂಗಳೂರು ನಗರದಲ್ಲಿ ಅಸೆಂಬ್ಲಿ ಅಭ್ಯರ್ಥಿಯಾಗಿದ್ದ ಲಾನ್ಸ್‌ಲೆಟ್ ಪಿಂಟೋರವರನ್ನೇ ಕ್ರಿಮಿನಲ್ ರೀತಿ ಚಿತ್ರಿಸಿ ಪೊಲೀಸ್ ಠಾಣೆಗೆ ಎಳೆದೊಯ್ದಾಗ ಜಿಲ್ಲಾ ಕಾಂಗ್ರೆಸ್ ಮುಖಂಡರು ತೋರಿದ ಪ್ರತಿರೋಧ ಮಾತ್ರ ಪಕ್ಷದ ಕಚೇರಿಯಲ್ಲಿ ನಡೆಸಿದ ಪತ್ರಿಕಾಗೋಷ್ಠಿಗೆ ಸೀಮಿತವಾಗಿತ್ತು. 125 ವರ್ಷ ಇತಿಹಾಸ ದಾಟಿರುವ ಕಾಂಗ್ರೆಸ್ ತಲುಪಿರುವ ದುಸ್ಥಿತಿ ನೋಡಿ.

ಕರಾವಳಿ ಜಿಲ್ಲೆಗಳ ಅಲ್ಪಸಂಖ್ಯಾತರಿಗೆ ದಾರಿ ಯಾವುದು? ●

ಕಾರ್ಮಿಕ ವರ್ಗದ ಪರ್ಯಾಯ...

ಪುಟ 8 ರಿಂದ

ಅದರ ಸಾಮರಿಕ ಪಾಲುದಾರನಾಗಿದೆ. ಸ್ವತಃ ರತನ್ ಟಾಟಾರವರೇ ಭಾರತವನ್ನು 'ಬಾಳೆಹಣ್ಣು ಗಣತಂತ್ರ' ಎಂದು ವರ್ಣಿಸಿರುವುದು, ಅದನ್ನು ಅಮೆರಿಕಾ ಏನುಬೇಕಾದರೂ ಮಾರಬಹುದಾದ ಒಂದು ಮಾರುಕಟ್ಟೆಯಾಗಿ ಅದರ ಚಮಚಾಗಿರಿಯ ಸ್ಥಾನದಲ್ಲಿ ನಿಲ್ಲಿಸುತ್ತದೆ.

ಭ್ರಷ್ಟಾಚಾರದ ನಿಜಮೂಲ

2ಜಿ ಹಗರಣ, ರಾಡಿಯ ಟೇಪುಗಳು, ವಿಕಿಲೀಕ್ಸ್ ಇವೆಲ್ಲ ಒಂದರ ಮೇಲೊಂದರಂತೆ ಎಷ್ಟು ಬೇಗನೇ ಪ್ರಕಟವಾದುವೆಂದರೆ, ಸ್ವತಃ 'ಚಮಚಾ'ಗಳೆಂದು ರಾಡಿಯ ಟೇಪುಗಳಲ್ಲಿ ಬಯಲಾದ ಮಾಧ್ಯಮಗಳು ಕೂಡ ಅವಾಕ್ಕಾದವು. ಥಟ್ಟನೇ ಏನೋ ಒಂದು ಪ್ರತಿಕ್ರಿಯೆ ನೀಡಿದವು. ಅವರಲ್ಲಿ ಕೆಲವರು ಮೌನವಾದರು, ಇನ್ನು ಕೆಲವರು ತಮಗೆ ಸೂಕ್ತವೆನಿಸಿದ್ದನ್ನು ಆರಿಸಿಕೊಂಡರು. ಆದರೆ ಎಲ್ಲರೂ ಅರಾಜಕೀಯ ಪರ್ಯಾಯಗಳನ್ನು ಹುಡುಕುತ್ತಿರುವಂತೆ ಕಾಣುತ್ತದೆ. ಅವರ ಮಟ್ಟಿಗೆ ರಾಜಕೀಯದ ಸಮಸ್ತರೂ ಭ್ರಷ್ಟರೇ ವಿನಹ, ನಿಜವಾಗಿ ಭ್ರಷ್ಟಗೊಳಿಸುವ ಬಂಡವಾಳಶಾಹಿಗಳಲ್ಲ; ಈ ಬಂಡವಾಳಶಾಹಿಗಳು ರಾಜಕೀಯದ ಆಚೆಗಿರುವವರು, ಭ್ರಷ್ಟತೆ ಅವರನ್ನು ಸೋಂಕದು ಎಂದು ಚಿತ್ರಿಸಲಾಗುತ್ತದೆ.

ಆದರೆ ಭ್ರಷ್ಟಾಚಾರದ ನಿಜವಾದ ಮೂಲ ಬಂಡವಾಳಶಾಹಿಯೇ; 'ಲೈಸೆನ್ಸ್'ಗಳಿಂದ ಪ್ರಯೋಜನ ಪಡೆದ ಕೈಗಾರಿಕೋದ್ಯಮಿಗಳು, ರಾಜಕೀಯದ ಮಂದಿಯೊಂದಿಗೆ ತಮ್ಮ ಪರವಾಗಿ ವಶೀಲಿಬಾಜಿ ನಡೆಸಲು 'ಕಾರ್ಪೊರೇಟ್ ಲಾಬ್ಬಿಯಿಸ್ಟ್'ಗಳನ್ನು ನೇಮಿಸುವವರು ರಾಜಕಾರಣಿಗಳನ್ನು ದೂರಿಕೊಂಡಿರಲು ಸಾಧ್ಯವಿಲ್ಲ. ಅವರಿಗೆ ಮೊದಲು ತುತ್ತು ಉಣ್ಣಿಸಿದವರು, ಕೊಬ್ಬಿಸಿದವರು, ಅಂತಿಮವಾಗಿ ಇಂತಹ ದೈತ್ಯರನ್ನಾಗಿ ಮಾಡಿದವರು ಇವರೇ. ಅಧಿಕಾರದಲ್ಲಿರುವ ಹಲವಾರು ರಾಜಕಾರಣಿಗಳೇ ಸ್ವತಃ ಚಮಚಾಗಳಾಗಿ ಬಿಡುತ್ತಾರೆ, ಅವರ ಸಹಾಯದಿಂದ 'ಚಮಚಾ ಬಂಡವಾಳಶಾಹಿ' ಬೆಳೆಯುತ್ತಿದೆ. 'ಸಿವಿಲ್ ಸೊಸೈಟಿ' ಅಥವ 'ನಾಗರಿಕ ಸಮಾಜ' ಎಂಬ ಹೆಸರಿನಲ್ಲಿ ರಾಜಕೀಯವಲ್ಲದ ಪರ್ಯಾಯ ಎಂಬುದು ಪ್ರತಿಪಕ್ಷಗಳ ಸ್ಥಾನ ಪಡೆಯಬಹುದಷ್ಟೇ, ಈಗ



ಕಾಣುತ್ತಿರುವ ಆಳುವ ಮಂದಿಯನ್ನು ಬದಲಿಸಲಾರದು. ಮೂಲಕಾರಣವಾದ ಬಂಡವಾಳಶಾಹಿಯನ್ನು, ಭ್ರಷ್ಟತೆಯನ್ನು ಬೆಳೆಸುತ್ತಿರುವವರು ಎಂದು ಚಿತ್ರಿಸದೆ ಭ್ರಷ್ಟಾಚಾರದ ರೋಗವನ್ನು ಗುಣಪಡಿಸಲು ಸಾಧ್ಯವಿಲ್ಲ.

ಸಮಾಜವಾದದ ಪರ್ಯಾಯ

ಇಲ್ಲಿಯೇ ಬರುವುದು ಕಾರ್ಮಿಕ ವರ್ಗದ ಪರ್ಯಾಯದ ಪ್ರಶ್ನೆ. ಅದು ಬಂಡವಾಳಶಾಹಿಗೇ ಪರ್ಯಾಯ, ಯಾವುದೋ ಒಬ್ಬ ರಾಜಕಾರಣಿಗೆ ಅಥವ ಒಂದು ರಾಜಕೀಯ ಪಕ್ಷಕ್ಕೆ ಪರ್ಯಾಯವಲ್ಲ. ಬಂಡವಾಳಶಾಹಿ ವ್ಯವಸ್ಥೆಯೊಳಗೆ ಕಾರ್ಯ ನಿರ್ವಹಿಸುವ ಹೆಚ್ಚಿನ ಪಕ್ಷಗಳು ಬಂಡವಾಳಶಾಹಿಯನ್ನು ಪೋಷಿಸಲು, ಬೆಳೆಸಲು ಪ್ರಯತ್ನಿಸುತ್ತವೆ, ಕೆಲವು ಆ ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತವೆ. ನಿಜ, ಕಾರ್ಮಿಕ ವರ್ಗದ ಪಕ್ಷಗಳು ಭಿನ್ನವಾಗಿರಬೇಕು. ಆದರೆ ಅವು ಯುರೋಪಿನಲ್ಲಿ ಸೋಶಿಯಲ್ ಡೆಮಾಕ್ರೆಟ್ ಎಂದೆನಿಸಿಕೊಳ್ಳುವವರಂತೆ ಹೊಂದಾಣಿಕೆ ಮಾಡಿಕೊಂಡರೆ ಭಿನ್ನವಾಗಿ ಉಳಿಯುವುದಿಲ್ಲ. ಬಂಡವಾಳಶಾಹಿಗೆ ಕಾರ್ಮಿಕ ವರ್ಗದ ಪರ್ಯಾಯವೆಂದರೆ ಸಮಾಜವಾದ. ಪ್ರತಿಯೊಬ್ಬರಿಂದಲೂ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ, ಪ್ರತಿಯೊಬ್ಬರಿಗೂ ಅವರ ಕೆಲಸಕ್ಕೆ ಅನುಗುಣವಾಗಿ ಎಂಬುದು ಇದರ ಮೂಲ ನೀತಿ. ಅಂತಹ ವ್ಯವಸ್ಥೆಯಲ್ಲಿ ಎಲ್ಲರೂ ದುಡಿಯಬೇಕು, ಸಂಪತ್ತು ಸೃಷ್ಟಿಸಬೇಕು ಮತ್ತು ತಾನು ಸೃಷ್ಟಿಸಿದ ಸಂಪತ್ತಿಗೆ ಸಮನಾದಷ್ಟೇ ಪಡೆಯಬೇಕು, ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ.

ಒಬ್ಬ ವ್ಯಕ್ತಿ ಸರಕುಗಳ ಅಥವ ಸೇವೆಗಳ ಉತ್ಪಾದನೆಯಲ್ಲಿ ಎಷ್ಟರ ಮಟ್ಟಿಗೆ ಸಂಪತ್ತು ಸೃಷ್ಟಿಸಿದ್ದಾನೆ ಅಥವ ಸೃಷ್ಟಿಸಿದ್ದಾಳೆ ಎಂಬುದನ್ನು ಅರ್ಥಶಾಸ್ತ್ರ, ಹಣಕಾಸು ಮತ್ತು ವ್ಯವಸ್ಥಿತ ವಿಶ್ಲೇಷಣೆ ಅಳೆಯಬಲ್ಲದು. ಸಂಪತ್ತನ್ನು ಸೃಷ್ಟಿಸಿದಾತ ಅದನ್ನು ಅನುಭವಿಸುವಂತಾಗುತ್ತದೆ ಎಂಬ ಭರವಸೆಯನ್ನು ಸಮಾಜವಾದ ಕೊಡುತ್ತದೆ. ಇದರ ಅರ್ಥ ಸಾಮಾಜಿಕ ಮುರಿಕೆಗಳು ಇರುವುದಿಲ್ಲ ಎಂದೇನಲ್ಲ. ಏಕೆಂದರೆ ಈ ಸಾಮಾಜಿಕ ಮುರಿಕೆಗಳು ಸಮಾಜದ ಅಭಿವೃದ್ಧಿಯನ್ನು ಉಳಿಸಿ-ಬೆಳೆಸಲು, ಎಳೆಯರ, ವಯಸ್ಸಾದವರ, ವಿಕಲತೆಯಿರುವವರ ಅಗತ್ಯಗಳನ್ನು ನಿಭಾಯಿಸಲು ಮತ್ತು ಬೆಂಬಲದ ಅಗತ್ಯವಿರುವವರಿಗೆ ನೆರವಾಗಲು ಸಹಾಯಕವಾಗುತ್ತವೆ. ಜನತಾ ಪ್ರಜಾಪ್ರಭುತ್ವಗಳಲ್ಲಿ ಮಿಲಿಟರಿ ಸಿಬ್ಬಂದಿ ಕೂಡ ಮೂಲರಚನೆಯೂ ಸೇರಿದಂತೆ ಯಾವುದೇ ಉತ್ಪಾದನೆಯಲ್ಲಾಗಲೀ, ಆರೋಗ್ಯ, ಶಿಕ್ಷಣ ಮುಂತಾದ ಸೇವೆಗಳಲ್ಲಾಗಲೀ ತಮ್ಮ ಕರ್ತವ್ಯ ನೇರವೇರಿಸುತ್ತಾರೆ. ಹೀಗೆ ಸಮಾಜದೊಂದಿಗೆ ಹಂಚಿಕೊಂಡ ಯಾವುದೇ ನಿಧಿಯನ್ನು ಅದರ ಬಳಕೆಗೇ ವಿನಿಯೋಗಿಸಲಾಗುತ್ತದೆ. ಆಮೂಲಕ ಸಮಾಜವಾದ ರಾಜಕೀಯ ವ್ಯವಸ್ಥೆ ಭ್ರಷ್ಟವಾಗದಂತೆ ನೋಡಿಕೊಳ್ಳುತ್ತದೆ.

ಕಾರ್ಮಿಕ ವರ್ಗದ ಕರ್ತವ್ಯ

ಇಂತಹ ಒಂದು ಕಣ್ಣೋಟವನ್ನು, ಈಗ ವಿಫಲಗೊಳ್ಳುತ್ತಿರುವ ಬಂಡವಾಳಶಾಹಿ ವ್ಯವಸ್ಥೆಗೆ ಎದುರಾಗಿ ಮುಂದಿಟ್ಟು ಜನಸಮೂಹಗಳನ್ನು ಗೆದ್ದುಕೊಳ್ಳುವ ಕರ್ತವ್ಯವನ್ನು ಕಾರ್ಮಿಕ ವರ್ಗ ನೆರವೇರಿಸಬೇಕು ಎಂದು ಬೇರೆ ಹೇಳಬೇಕಾಗಿಲ್ಲ. ಜನಸಮೂಹಗಳ ಕಲ್ಯಾಣದ ಭರವಸೆಯನ್ನು ಬಂಡವಾಳಶಾಹಿ ನೀಡಲಾರದು. ಏಕೆಂದರೆ ಅದು ಇರುವುದು ಲಾಭ ರಾಶಿ ಹಾಕಲಿಕ್ಕಾಗಿಯಷ್ಟೇ.

ಭಾರತದಲ್ಲಿ ಇಂದಿನ ಪರಿಸ್ಥಿತಿಗಳಲ್ಲಿ, ಹೆಚ್ಚೆಚ್ಚು ಬಯಲಾಗುತ್ತಿರುವುದು ಈ ಚಮಚಾ ಬಂಡವಾಳಶಾಹಿಯೇ. ಹೊಸ ಪೆನ್ಶನ್ ಯೋಜನೆಯ ವ್ಯವಸ್ಥೆ ಇಂತಹ ಚಮಚಾ ಸ್ವರೂಪದ ಸಾರವನ್ನು ಪ್ರದರ್ಶಿಸುತ್ತಿದೆ-ಅದನ್ನು ತಂದಿರುವುದು ದೊಡ್ಡ ಕಾರ್ಪೊರೇಟುಗಳ ಪ್ರಯೋಜನಕ್ಕಾಗಿಯೇ ಹೊರತು ಪೆನ್ಶನ್‌ನ ಆಸರೆ ಬೇಕಾಗಿರುವ ನಿವೃತ್ತ ವ್ಯಕ್ತಿಗಳ ಪ್ರಯೋಜನಕ್ಕಾಗಿ ಅಲ್ಲ. ನೀರಿನ ಪೂರೈಕೆಯಾಗಲೀ, ನೈರ್ಮಲ್ಯ, ಆರೋಗ್ಯ ಅಥವ ಶಿಕ್ಷಣವಾಗಲೀ, ನೈಸರ್ಗಿಕ ಸಂಪನ್ಮೂಲಗಳು, ಮಾನವ ಸಂಪನ್ಮೂಲಗಳು ಮತ್ತು ಹಣಕಾಸು ಸಂಪನ್ಮೂಲಗಳ ನಿರ್ವಹಣೆಯಲ್ಲಾಗಲೀ, ಜನಗಳು ತಮ್ಮನ್ನು ಮುಕ್ತರಾಗಿ ತಮ್ಮ ಸಮಾಜವನ್ನು ತಾವೇ ನಿಭಾಯಿಸುವಲ್ಲಿ ಅಡ್ಡಿಯಾಗುತ್ತಿರುವುದು ಈ ಬಂಡವಾಳಶಾಹಿಯೇ. ಕಾರ್ಮಿಕ ವರ್ಗದ ಕಣ್ಣೋಟ, ಸಮಾಜವಾದದ ಕಣ್ಣೋಟ ಮಾತ್ರವೇ ಭ್ರಷ್ಟಾಚಾರದಿಂದ ಮುಕ್ತವಾದ ಒಂದು ಸಮಾಜವನ್ನು ರೂಪಿಸಬಲ್ಲದು. ಪ್ರತಿಯೊಂದು ಮಾನವ ಜೀವಿ ತನ್ನ ಸಾಮರ್ಥ್ಯವನ್ನು ಗರಿಷ್ಟ ಪ್ರಮಾಣದಲ್ಲಿ ಬೆಳೆಸಿಕೊಳ್ಳಲು ಅವಕಾಶ ಕೊಡಬಲ್ಲದು.

ಈ ಮೇದಿನದಂದು ನಮ್ಮನ್ನು ಇಂತಹ ಒಂದು ಧ್ಯೇಯಸಾಧನೆಗಾಗಿ ಸಮರ್ಪಿಸಿಕೊಳ್ಳೋಣ. ●

ಇದ್ದದ್ದು ಇಂದ್ದಾಂಗ


ಅಮ್ಮಮ್ಮ! ಮಾಲಿಕರ ಲಾಭ ಎಷ್ಟು ನೆಗೆತ ! ಅಬ್ಬಬ್ಬ ಕಾರ್ಮಿಕ ವೇತನ ಎಷ್ಟು ಕುಸಿತ !!

ಇಲ್ಲೊಂದು ಮಹತ್ವದ ಅಂಕಿ ಸಂಖ್ಯೆ ಮಾಹಿತಿ ಇದೆ. ಗಮನಿಸಿ. ಉತ್ಪನ್ನಗಳ ಒಟ್ಟು ಮೌಲ್ಯದಲ್ಲಿ ಅದನ್ನು ಉತ್ಪಾದಿಸುವ ಕಾರ್ಮಿಕರಿಗೆ ನೀಡಲಾಗುವ ವೇತನದ ಪಾಲು ಯಾವ ಯಾವ ಕಾಲಘಟ್ಟದಲ್ಲಿ ಎಷ್ಟೆಷ್ಟು ಇತ್ತು. ಅದೇ ರೀತಿ ಮಾಲೀಕ ವರ್ಗದ ಲಾಭದ ಪಾಲು ಯಾವ ಯಾವ ಕಾಲಘಟ್ಟದಲ್ಲಿ ಎಷ್ಟೆಷ್ಟು ಇತ್ತು ನೋಡಿ.

ಕಳೆದ 20 ವರ್ಷಗಳಲ್ಲಿ ದೇಶದಲ್ಲಿ ಜಾರಿಯಾದ ಜಾಗತೀಕರಣದ ಪರಿಣಾಮ, ಪ್ರಭಾವಗಳೇನು ಎಂಬುದಕ್ಕೂ ಇದು ಸಾಕ್ಷಿ.

ಉತ್ಪನ್ನಗಳ ಒಟ್ಟು ಮೌಲ್ಯದಲ್ಲಿ

ವರ್ಷ	ಕಾರ್ಮಿಕರ ವೇತನದ ಪಾಲು	ಮಾಲೀಕರ ಲಾಭದ ಪಾಲು
1991–92	20.5	14.5
2001–02	15.0	
2007–08	9.2	53.8



ಸಂಪಾದಕೀಯ

ಪುಟ 3 ರಿಂದ

ಉಡಾಫೆತನವಾಗಿದೆ. ಇಂದು ಕರ್ನಾಟಕ ಸರ್ಕಾರಿ ಸ್ವಾಮ್ಯದ ಬೀಜ ನಿಗಮವನ್ನು ಹಂತಹಂತವಾಗಿ ದುರ್ಬಲಗೊಳಿಸಲಾಗುತ್ತಿದೆ, ಬೀಜ ಪೂರೈಕೆಯನ್ನು ಬಹುಭಾಗ ಖಾಸಗಿ ಕಾರ್ಪೊರೇಟ್ ಕಂಪನಿಗಳ ಏಕಸ್ವಾಮ್ಯಕ್ಕೆ ವಹಿಸಲಾಗುತ್ತಿದೆ ಮತ್ತು, ಗುಣಮಟ್ಟ ಕಾಯುವುದು, ದರ ನಿಗದಿಯಲ್ಲಿಯೂ ಅದಕ್ಕೆ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಇನ್ನೊಂದೆಡೆ ಸರ್ಕಾರದ ಬೀಜ ನಿಗಮಗಳನ್ನು ಹಂತಹಂತವಾಗಿ ಕೊಲ್ಲುವುದು. ವಿಶ್ವವಿದ್ಯಾಲಯಗಳ ಸಂಶೋಧನೆಗಳಿಗೆ ಹಣವಿಲ್ಲದೆ ಸೊರಗಿಸುವುದು ನಡೆದಿದೆ. ಇಂದಿನ ಅವಾಂತರಗಳಿಗೆ ಕೇಂದ್ರ, ರಾಜ್ಯಸರ್ಕಾರಗಳ ಉದಾರೀಕರಣದ ನೀತಿಗಳ ಅನುಷ್ಟಾನವೇ ಕಾರಣ. ಇದು ತಡೆಯಬೇಕು.

ಮುಂಗಾರುಮಳೆಯ ಆಗಮನದ ಹಿನ್ನೆಲೆಯಲ್ಲಿ ಈಗಿನ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸದಂತೆ ತತ್‌ಕ್ಷಣದಲ್ಲಿ ಸರ್ಕಾರ ಅಗತ್ಯವಿರುವ ಬೀಜ ಪೂರೈಕೆಗೆ ದೃಢ ಕ್ರಮ ವಹಿಸಲೇಬೇಕು. ಹೀಗೆ ಮಾಡದ ಸರ್ಕಾರ ಅಪರಾಧಿ ಸ್ಥಾನದಲ್ಲಿ ನಿಂತಿದೆ ಎಂಬುದನ್ನು ತಿಳಿಯಬೇಕು. ●

ಜನಶಕ್ತಿ
ಕನ್ನಡ ವಾರಪತ್ರಿಕೆ

2011 ಮೇ ದಿನ ಪ್ರಣಾಳಿಕೆಯ ಕರೆ

ಪುಟ 7 ರಿಂದ

ಮತ್ತು ಪ್ರತಿಭಟನಾ ಪ್ರದರ್ಶನಗಳ ರಂಗವಾಗಿ ಬಿಟ್ಟಿವೆ; ಬೆಲೆಯೇರಿಕೆ, ನಿರುದ್ಯೋಗ, ಸಂಬಳ ಮತ್ತು ಸಾಮಾಜಿಕ ಭದ್ರತೆಗಳಲ್ಲಿ ಕಡಿತ ಮತ್ತು ತಮ್ಮ ಜೀವನೋಪಾಯದ ಮೇಲೆ ಇತರ ರೀತಿಗಳ ದಾಳಿಗಳಿಂದಾಗಿ ಸಿಟ್ಟಿನಿಂದ ಕುದಿಯುತ್ತಿರುವ ಎಲ್ಲಾ ಕ್ಷೇತ್ರಗಳ ಶ್ರಮಜೀವಿಗಳ ಈ ಕಾರ್ಯಾಚರಣೆಗಳು ನವ-ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆ ಮಾನವಕುಲದ ಮೂಲ ಸಮಸ್ಯೆಗಳನ್ನು ಎದುರಿಸುವಲ್ಲಿ ಸಂಪೂರ್ಣ ಅಸಮರ್ಥವಾಗಿದೆ ಎಂಬುದನ್ನು ಬಯಲು ಮಾಡಿವೆ. ಕಾರ್ಮಿಕ ವರ್ಗದ ಇಂತಹ ವಿಶ್ವವ್ಯಾಪಿ ಹೋರಾಟಗಳ ಏರು ಅಲೆಗಳಿಂದ ಶಕ್ತಿ ಮತ್ತು ಸ್ಫೂರ್ತಿಯನ್ನು ಪಡೆದುಕೊಂಡು, ಆ ಹೋರಾಟಗಳಿಗೆ ತನ್ನ ಸೌಹಾರ್ದದ ದನಿಗೂಡಿಸುವುದಾಗಿ ಹಾಗೂ ನವ-ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯನ್ನೇ ಹಿಮ್ಮೆಟ್ಟುವಂತೆ ಮಾಡುವ ಆ ಹೋರಾಟಗಳನ್ನು ತೀಕ್ಷ್ಣಗೊಳಿಸಬೇಕಾದ ತುರ್ತಿನ ಬಗ್ಗೆ ಒತ್ತು ನೀಡುವುದಾಗಿ ಪ್ರಣಾಳಿಕೆ ಹೇಳಿದೆ.

ಭಾರತದಲ್ಲಿ ಕಾರ್ಮಿಕ ವರ್ಗದ ನಿರಂತರ ವಿರೋಧ ಮತ್ತು ಐಕ್ಯ ಹೋರಾಟದಿಂದಾಗಿ ಮತ್ತು ಸಂಸತ್ತಿನಲ್ಲಿ ಎಡಪಕ್ಷಗಳ ಬಲವಾದ ಪ್ರತಿರೋಧದಿದಂದಾಗಿ, ಜಾಗತಿಕ ಆರ್ಥಿಕ ಕುಸಿತದ ನಡುವೆ ಅನುಭವಿಸಬೇಕಾಗಿದ್ದ ಅನಿವಾರ್ಯ ಕುಸಿತದಿಂದ ದೇಶದ ಆರ್ಥಿಕವನ್ನು ಭಾಗಶಃವಾದರೂ ಉಳಿಸಲು ಸಾಧ್ಯವಾಗಿದೆ. ಆದರೆ ಆಳುವ ರಾಜಕೀಯ ವ್ಯವಸ್ಥೆ ಈ ಜಾಗತಿಕ ಬಿಕ್ಕಟ್ಟಿನಿಂದ ಪಾಠ ಕಲಿಯುವ ಬದಲು, ಆರ್ಥಿಕ ವಲಯವನ್ನು ನಿಯಂತ್ರಣಹೀನಗೊಳಿಸುವ, ಖಾಸಗೀಕರಿಸುವ ಅದೇ ವಿಫಲ ದಾರಿಯನ್ನು ಮುಂದೊತ್ತುತ್ತಿದೆ, ಆಮೂಲಕ ಜನಸಮೂಹಗಳ ಮೇಲೆ ಒಂದು ವ್ಯಾಪಕ ಭ್ರಷ್ಟಾಚಾರ, ಲೂಟಿ ಮತ್ತು ವಂಚನೆಯ ಆಳ್ವಿಕೆಗೆ ಚಾಲನೆ ನೀಡಿದೆ ಎಂದು ಸಿಐಟಿಯು ಖೇದ ವ್ಯಕ್ತ ಪಡಿಸಿದೆ.

ಈ ಮಧ್ಯಂತರದಲ್ಲಿ ಅತ್ಯಂತ ಹೊಲಸು ಭ್ರಷ್ಟಾಚಾರದ ಅಸಂಖ್ಯ ಹಗರಣಗಳು ಬಯಲಿಗೆ ಬಂದಿದನ್ನು ಕಂಡಿದ್ದೇವೆ. ಇವು ಸಾರ್ವಜನಿಕ ಖಜಾನೆಗೆ ಅಪಾರ ನಷ್ಟಗಳನ್ನು ಉಂಟುಮಾಡಿ ದೊಡ್ಡ ದೇಶೀ-ವಿದೇಶಿ ಕಾರ್ಪೊರೇಟ್ ಗುಂಪುಗಳಿಗೆ ಪ್ರಯೋಜನಗಳನ್ನು ಒದಗಿಸಿವೆ, ವಿದೇಶಿ ಬ್ಯಾಂಕುಗಳಿಗೆ ಅಪಾರ ಕಪ್ಪು ಹಣ ಹರಿದು ಹೋಗಿ ಶೇಖರಗೊಳ್ಳುತ್ತಿದೆ. ಆಡಳಿತದಲ್ಲಿರುವವರು ಇಂತಹ ಭ್ರಷ್ಟ ವ್ಯವಹಾರಗಳಿಗೆ ಪ್ರೋತ್ಸಾಹ ನೀಡುತ್ತಿರುವ ರೀತಿ ನವ-ಉದಾರವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಎಷ್ಟರ ಮಟ್ಟಿಗೆ ಸಮಸ್ತ ಆಡಳಿತ ಅಪರಾಧೀಕರಣ ಗೊಂಡಿದೆ ಮತ್ತು ಅದೇ ವೇಳೆಗೆ ಕಾರ್ಪೊರೇಟ್‌ಗಳ ಸೆರೆಯಾಳಾಗಿದೆ ಎಂಬುದನ್ನು ತೋರಿಸಿದೆ ಎಂದಿರುವ ಮೇದಿನದ ಪ್ರಣಾಳಿಕೆ ಆಡಳಿತದಲ್ಲಿನ ಅದೇ ಭ್ರಷ್ಟಾಚಾರ ನವ-ಉದಾರವಾದಿ ಚೌಕಟ್ಟಿನಲ್ಲಿ ಆರ್ಥಿಕ ನಿರ್ವಹಣೆಯಲ್ಲಿಯೂ ಬಿಂಬಿತವಾಗಿದೆ. ಸತತವಾಗಿ ಏರುತ್ತಿರುವ ಬೆಲೆಗಳ, ವಿಶೇಷವಾಗಿ ಆಹಾರ ಬೆಲೆಯುಬ್ಬರದ ನಿರ್ವಹಣೆಯಲ್ಲಿ ಅದೇ ಭ್ರಷ್ಟ ನಿಲುವು ಕಾಣಿಸಿದೆ. ಅದು ಸರಕು ಮಾರುಕಟ್ಟೆಯಲ್ಲಿ ಸರಕಾರ ಮತ್ತು ಕಾರ್ಪೊರೇಟ್ ಸಟ್ಟಾಕೋರರ ಒಂದು ಜಂಟಿ ಉದ್ಯಮವಾಗಿ ಬಿಟ್ಟಿದೆ ಎಂದು ಟೀಕಿಸಿದೆ.

ಐಕ್ಯ ಹೋರಾಟ ಸಮರಧೀರ ಎತ್ತರಕ್ಕೆ

ಅದೇ ವೇಳೆಗೆ ಜನಸಮೂಹಗಳನ್ನು ಹೆಚ್ಚಿನ ತೆರಿಗೆ ಮತ್ತು ಸುಂಕಗಳ ಹೊರೆಗಳು ಹಾಗೂ ಆಹಾರ, ರಸಗೊಬ್ಬರ ಮತ್ತು ಇಂಧನಗಳ ಮೇಲೆ ಮೂಲ ಸಬ್ಸಿಡಿಗಳ ಕಡಿತದ ಮೂಲಕ ಸುಲಿಯಲಾಗುತ್ತಿದೆ. ಅದಕ್ಕೆ ಒಂದು ಪೂರಕ ಕ್ರಮವಾಗಿ, ಎಲ್ಲ ಮೂಲ ಕಾರ್ಮಿಕ ಕಾನೂನುಗಳನ್ನು ಮಾಲಕರು ಕಾನೂನು-ವ್ಯವಸ್ಥೆಯ ಪಾಲಕರೊಂದಿಗೆ ಶಾಮೀಲಾಗಿ ಉಲ್ಲಂಘಿಸಲು ಅವಕಾಶ ಕೊಡಲಾಗುತ್ತಿದೆ. ಬಹಳಷ್ಟು ಕಡೆಗಳಲ್ಲಿ ಕಾರ್ಮಿಕ ಸಂಘಗಳನ್ನು ರಚಿಸಲು ಬಿಡುತ್ತಿಲ್ಲ ಮತ್ತು ಕಾರ್ಮಿಕ ಸಂಘಗಳನ್ನು ರಚಿಸಿದ್ದಕ್ಕಾಗಿ ಕಾರ್ಮಿಕರ ಮೇಲೆ ಮನಬಂದಂತೆ ಕ್ರಮಗಳನ್ನು ಕೈಗೊಳ್ಳುವುದು ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ. ಇದರ ಉದ್ದೇಶ ಜನ-ವಿರೋಧಿ, ದೇಶ-ವಿರೋಧಿ ಕುತಂತ್ರಗಳಿಗೆ ಜನಗಳ ವಿರೋಧವನ್ನು ದುರ್ಬಲಗೊಳಿಸುವುದು. ಇತಿಹಾಸ ತೋರಿಸುವಂತೆ, ಕಾರ್ಮಿಕರ ಹಕ್ಕುಗಳ ಮೇಲೆ ದಾಳಿ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಸಂಸ್ಥೆಗಳ ಮೇಲೆರಗಲಿರುವ ದಾಳಿಗಳ ಮುನ್ಸೂಚನೆ ಎಂದು ಮೇ ದಿನದ ಪ್ರಣಾಳಿಕೆ ಎಚ್ಚರಿಸಿದೆ.

ಸಂಸತ್ತಿನ ಒಳಗೆ ರಾಜಕೀಯ ರಂಗದಲ್ಲಿ ರಾಜಕೀಯ ಶಕ್ತಿಗಳ ಬಲಾಬಲ ಸ್ವಲ್ಪ ಮಟ್ಟಿಗೆ ಬಲಪಂಥೀಯ ಶಕ್ತಿಗಳ ಕಡೆಗೆ ವಾಲಿದ್ದರೂ, ಹೊರಗಿನ ಬೆಳವಣಿಗೆಗಳು ಭಿನ್ನ ಸಂಕೇತ ನೀಡುತ್ತಿವೆ ಎಂದು ವಿಶ್ವಾಸದಿಂದ ಗಮನಿಸಿರುವ ಪ್ರಣಾಳಿಕೆ ಎಲ್ಲ ಕಾರ್ಮಿಕ ಸಂಘಗಳು, ಅವು ಯಾರಿಗೆ ಸಂಯೋಜಿತವಾಗಿವೆ ಎಂಬ ಭೇದ-ಭಾವವಿಲ್ಲದೆ, ಬೆಲೆಯೇರಿಕೆ, ಕಾರ್ಮಿಕ ಕಾನೂನುಗಳ ಪ್ರಭುತ್ವ-ಪ್ರಾಯೋಜಿತ ಉಲ್ಲಂಘನೆ, ಶ್ರಮಿಕಬಲದ ಎಗ್ಗಿಲ್ಲದ ಕಾಂಟ್ರಾಕ್ಟೀಕರಣ ಮತ್ತು ಕ್ಯಾಶುವಲೀಕರಣದ ವಿರುದ್ಧ, ಶೇರುವಿಕ್ರಯ ಮತ್ತು ಖಾಸಗೀಕರಣದ ವಿರುದ್ಧ ಹಾಗೂ ಅಸಂಘಟಿತ ವಲಯದ ಕಾರ್ಮಿಕರಿಗೆ ಸಾರ್ವತ್ರಿಕ ಸಾಮಾಜಿಕ ಸುರಕ್ಷಿತತೆಯನ್ನು ಒದಗಿಸಬೇಕು ಎಂದು ದನಿಯೆತ್ತಲು ಒಂದೇ ವೇದಿಕೆಯ ಮೇಲೆ ಒಟ್ಟಾಗಿದ್ದಾರೆ. ಉದ್ದಿಮೆವಾರು ಹೋರಾಟಗಳಲ್ಲದೆ, ಸೆಪ್ಟೆಂಬರ್ 7, 2010ರಂದು ಸುಮಾರು 10 ಕೋಟಿ ಕಾರ್ಮಿಕರ ಎಲ್ಲರೂ ಸೇರಿಕೊಂಡ ದೇಶವ್ಯಾಪಿ ಐಕ್ಯ ಸಾರ್ವತ್ರಿಕ ಮುಷ್ಕರದ ಕಾರ್ಯಾಚರಣೆ ದೇಶದ ಕಾರ್ಮಿಕ ಆಂದೋಲನದ ಪುಟಗಳಲ್ಲಿ ಇತಿಹಾಸ ನಿರ್ಮಿಸಿದೆ. ಆ ಐತಿಹಾಸಿಕ ಕಾರ್ಯಾಚರಣೆಯನ್ನನುಸರಿಸಿ ಸುಮಾರು ಐದು ಲಕ್ಷ ಕಾರ್ಮಿಕರು 23 ಫೆಬ್ರುವರಿ 2011ರಂದು ದೇಶದ ರಾಜಧಾನಿಯಲ್ಲಿ ಸಂಸತ್ತಿನ ಎದುರು ಸಮರಧೀರ ಮತಪ್ರದರ್ಶನ ನಡೆಸಿದರು. ಕಾರ್ಮಿಕ ಸಂಘಗಳ ಈ ಸರ್ವವ್ಯಾಪಿ ಐಕ್ಯತೆಯನ್ನು ಬುಡಮಟ್ಟದಲ್ಲಿ ಇನ್ನಷ್ಟು ವಿಸ್ತರಿಸಬೇಕು ಮತ್ತು ಜನ-ವಿರೋಧಿ, ಸಾಮ್ರಾಜ್ಯಶಾಹಿಪರ ಧೋರಣೆಗಳ ವ್ಯವಸ್ಥೆಯನ್ನು ಹಿಮ್ಮೆಟ್ಟಿಸಲು ದುಡಿಯುವ ಜನಗಳ ಐಕ್ಯ ಹೋರಾಟವನ್ನು ಒಂದು ಸಮರಧೀರ ಎತ್ತರಕ್ಕೆ ಒಯ್ಯಬೇಕು ಎಂದು ಸಿಐಟಿಯು ಮೇ ದಿನದ ಪ್ರಣಾಳಿಕೆ ಕರೆ ನೀಡಿದೆ.

ಪಶ್ಚಿಮ ಬಂಗಾಲ, ಕೇರಳದಲ್ಲಿ ಈಗ ನಡೆಯುತ್ತಿರುವ ವಿಧಾನಸಭೆಯ ಚುನಾವಣೆಗಳು ನವ-ಉದಾರವಾದ ಮತ್ತು ಅದನ್ನು ವಿರೋಧಿಸುವ ಹಾಗೂ ಜನಪರ ಪರ್ಯಾಯಕ್ಕಾಗಿ ಹೋರಾಡುತ್ತಿರುವ ಪ್ರಗತಿಪರ ಶಕ್ತಿಗಳ ಧೋರಣೆಗಳ ನಡುವಿನ ಹೋರಾಟದ ಸಂಕೇತ. ಇದು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಮತ್ತು ಅತ್ಯಂತ ಬಲ ಪ್ರತಿಗಾಮಿ ಶಕ್ತಿಗಳ ನಡುವಿನ, ಜನಪರ ಕಲ್ಯಾಣಶೀಲ ಆಡಳಿತ ಧೋರಣೆ ಮತ್ತು ಜನಸಮೂಹಗಳ ಲೂಟಿ, ಸುಲಿಗೆ, ವಂಚನೆಯ ಕಾರ್ಪೊರೇಟ್ ಕೈಸೆರೆಯಾಗಿರುವ ಧೋರಣೆಗಳ ನಡುವಿನ ಹೋರಾಟವಾಗಲಿದೆ. ಇದು ದುಡಿಯುವ ಜನಗಳನ್ನು ಸಬಲೀಕರಿಸುವ ಧೋರಣೆ ಮತ್ತು ಅವರನ್ನು ದೇಶಿ-ವಿದೇಶಿ ಕಾರ್ಪೊರೇಟ್ ವಲಯಕ್ಕೆ ಆಕಸ್ಮಿಕ ಧನಲಾಭ ಒದಗಿಸಲಿಕ್ಕಾಗಿ ಗುಲಾಮಿಕೆಗೆ ಹಾಗೂ ಅತ್ಯಂತ ಹೀನ ಶೋಷಣೆಗೆ ಒಳಪಡಿಸುವ ಧೋರಣೆಗಳ ನಡುವಿನ ಸಮರ ಕೂಡ. ದೇಶದ ಕಾರ್ಮಿಕ ಆಂದೋಲನ ಎದ್ದು ನಿಂತು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಗೆಲುವಿಗಾಗಿ ಸಮರ ನಡೆಸಬೇಕು. ಏಕೆಂದರೆ ಉತ್ತಮ ಜೀವನ ಮತ್ತು ಹಕ್ಕುಗಳು ವಿಸ್ತಾರಗೊಳ್ಳಬೇಕು ಎಂಬ ಕಾರ್ಮಿಕ ವರ್ಗದ ಆಕಾಂಕ್ಷೆಗಳು ಎಡ ಶಕ್ತಿಗಳ ಕಣ್ಣೋಟದೊಂದಿಗೆ ಹೊಂದಿಕೊಳ್ಳುತ್ತವೆ. ಆದ್ದರಿಂದ ಈ ಮೇ ದಿನದಂದು, ಸಿಐಟಿಯು, ಕಾರ್ಮಿಕ ವರ್ಗ, ತನ್ನ ಎಲ್ಲ ಹೋರಾಟಗಳಲ್ಲಿ ಬೆಂಬಲಕ್ಕೆ ನಿಲ್ಲುವ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ನಡೆಸಿರುವ ದಾಳಿಗಳ ವಿರುದ್ಧ ಹೋರಾಡಬೇಕು, ಅವನ್ನು ಎದುರಿಸಿ ನಿಲ್ಲಬೇಕು ಹಾಗೂ ಅವರ ಪರವಾದ ಕಾಳಜಿಗಳಿಗೆ ದನಿ ನೀಡಬೇಕು, ರಾಜ್ಯ ವಿಧಾನಸಭೆಗಳಿಗೆ ಚುನಾವಣೆಗಳು ನಡೆಯುತ್ತಿರುವ ಎಲ್ಲ ರಾಜ್ಯಗಳಲ್ಲಿ ಅವರ ಗೆಲುವಿಗಾಗಿ ಕೆಲಸ ಮಾಡಬೇಕು ಎಂದು ಮೇ ದಿನದ ಪ್ರಣಾಳಿಕೆ ಕರೆ ನೀಡಿದೆ.

ಕೊಡದೆ ಬಿಡೆವು ನಿವೇಶನ



ನಿವೇಶನ ನೀಡದಿದ್ದರೆ ಸರ್ಕಾರಿ ಭೂಮಿ ಅತಿಕ್ರಮಣ ದಕ್ಷಿಣ ಕನ್ನಡ ಜಿಲ್ಲಾ ಭೂಮಿ ಹೋರಾಟದ ಘೋಷಣೆ

.....ವರದಿ ನಿರೀಕ್ಷಿಸಿ ಮುಂದಿನ ವಾರ

ಕಾವ್ಯ




ಬಾವುಟ ಕೆಂಪಾಗುತ್ತಿದೆ

ನಮ್ಮ ದೇಶದ ಬಾವುಟ ನಿರ್ಮಾಣವಾದದ್ದು ಹೀಗೆ :
ತಮ್ಮ ದು:ಖದ ಚಿಂದಿಗಳಿಂದ ಜನ ಅದನ್ನು
ಹೊಲಿದರು;
ಪ್ರೇಮದ ಹೊಳಪು ದಾರದಿಂದ ಕಸೂತಿ ಹಾಕಿದರು;
ದೇಶದ ನಕ್ಷತ್ರ ಹಿಡಿಯಲು
ತಮ್ಮ ಶರಟುಗಳಿಂದಲೋ
ಮುಗಿಲಿನ ಮಡಿಕೆಯೊಂದರಿಂದಲೋ
ಆ ನೀಲಿ ಚೂರನ್ನು ಕತ್ತರಿಸಿ
ಉತ್ಸಾಹಿ ಕೈಗಳಿಂದ ಅದನ್ನು ಮಣಿಯಂತೆ
ಅಲ್ಲಿ ಸಿಕ್ಕಿಸಿದರು.
ಹನಿ ಹನಿಯಾಗಿ ಬಾವುಟ ಕೆಂಪಾಗುತ್ತಿದೆ.....

■ ಪಾಬ್ಲೊ ನೆರೂದ

JANASHAKTHI KANNADA VARA PATRIKE MAY 08, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2010-12
Posted at MBC Bangalore GPO



ENRON: The Smartest Guys in the Room

ಎನ್ರಾನ್

ಒಂದು ತಲೆಪಾತಕರ ತಂಡ

ಬೆಥನಿ ಮಾಕ್ಲೀನ್ ಮತ್ತು ಪೀಟರ್ ಎಲ್ಕಿಂಡ್ ರ ENRON: The Smartest Guys in the Room ಕೃತಿ ಆಧರಿಸಿ ಆಲೆಕ್ಸ್ ಗಿಬ್ಸನ್ ಎಂಬವವರು ನಿರ್ಮಿಸಿ, ನಿರ್ದೇಶಿಸಿರುವ ಈ ಚಿತ್ರ ಲಾಭವನ್ನಷ್ಟೇ ಉಸಿರಾಡುವ ಮತ್ತು ಲಾಭಕ್ಕಾಗಿ ಏನನ್ನಾದರೂ ಮಾಡಬಲ್ಲ ಬಹುರ್ರಾಷ್ಟ್ರೀಯ ಕಂಪನಿಗಳ ಅಮಾನವೀಯ ಮುಖವನ್ನು ಬಯಲುಮಾಡುವ ಒಂದು ಪ್ರಯತ್ನ. ಚಿತ್ರ ಕಥೆ ಎನ್ರಾನ್ ಕಂಪನಿಯೊಂದರ ಸುತ್ತಲೇ ಇದ್ದರೂ. ಅಮೇರಿಕ ಕೇಂದ್ರಿತ ಇಂದಿನ ವಿಶ್ವ ಆರ್ಥಿಕ ವ್ಯವಸ್ಥೆಯಲ್ಲಿ ಹೆಚ್ಚಿನ ಬಹುರಾಷ್ಟ್ರೀಯ ಕಂಪನಿಗಳದ್ದು ಇದೇ ಮಾದರಿಯ ಚಟುವಟಿಕೆ ಯಾಗಿರುವುದರಿಂದ ಚಿತ್ರದ ವ್ಯಾಪ್ತಿ 'ಎನ್ರಾನ್'ಗಷ್ಟೇ ಸೀಮಿತವಾಗಿಲ್ಲ.



ಬಾಯಲ್ಲಷ್ಟೇ 'ನೈತಿಕತೆ' ಮಾತನಾಡುವ ಈ ಬಹುರಾಷ್ಟ್ರೀಯ ಕಂಪನಿಗಳ ಉನ್ನತ ಅಧಿಕಾರಿಗಳು ಮತ್ತು ಮಾಲೀಕರು ಅಂತರಾಳದಲ್ಲಿ ಲಾಭವನ್ನಷ್ಟೆ ಪರಿಗಣಿಸುವುದು. ಲಾಭದೆಡೆಗಿನ ಓಟದಲ್ಲಿ ಯಾರ ಸಮಾಧಿಯ ಮೇಲಾದರು. ಹೆಜ್ಜೆಯೂರಬಲ್ಲವು ಮತ್ತು ಲಾಭಕ್ಕಾಗಿ ಯಾರನ್ನಾದರೂ ಏನನ್ನಾದರೂ ಲಂಚಕೋರತನಕ್ಕೆ ಇಳಿಸಿ ತಮ್ಮ ಗುರಿ ಸಾಧಿಸಿಕೊಳ್ಳುತ್ತವೆ ಎಂಬುದನ್ನು ಸಾದ್ಯಂತ ವಿವರಿಸಲಾಗಿದೆ. ಈ ಲಾಭಕೋರ ತಲೆಪಾತಕರ ತಂಡ ವಿವಿಧ ವಂಚಕ ಯೋಜನೆಗಳನ್ನು ರೂ ಿಸಿ ಭ್ರಷ್ಠ ಸರ್ಕಾರಗಳ ಮೂಲಕ ಜನರನ್ನು ವಂಚಿಸಿ ಕೋಟ್ಯಾಂತರ ಹಣ ಮತ್ತು ಸಂಪತ್ತನ್ನು ಲೂಟಿ ಮಾಡುತ್ತವೆ. ಇದಲ್ಲದೆ ತಮ್ಮ ಬಾಲಬಡುಕ ಮಾಧ್ಯಮಗಳ ಮೂಲಕ ತಾವೇ ಶ್ರೇಷ್ಠರು, ತಮ್ಮ ಆಲೋಚನೆಗಳಷ್ಟೇ ಸರ್ವ ಶ್ರೇಷ್ಠ ತಾವು ಮಾಡುತ್ತಿರುವುದೇ ಸರಿಯೆಂಬಂತೆ ಹೇಗೆ ಜನರನ್ನು ನಂಬಿಸಲಾಗುತ್ತದೆ ಮತ್ತು ತಮ್ಮನ್ನು ವಿರೋಧಿಸುವವರನ್ನು ಅಭಿವೃದ್ಧಿಯ ವಿರೋಧಿಗಳು ಎಂಬಂತೆ ಚಿತ್ರಿಸಲಾಗುತ್ತದೆ ಎಂಬುದನ್ನು ನೋಡಬಹುದು.

ಕೆನ್‌ಲೇ ಎಂಬ ಅಮೇರಿಕದ ಅಧ್ಯಕ್ಷ ಬುಷ್ ಕುಟುಂಬದ ನಿಕಟವರ್ತಿ 1985ರಲ್ಲಿ ಅಲ್ಪ ಬಂಡವಾಳದಲ್ಲಿ ಹುಟ್ಟುಹಾಕಿದ 'ಎನ್ರಾನ್' 2000ದ ಹೊತ್ತಿಗೆ ವಿಶ್ವದ 7ನೇ ಅತಿದೊಡ್ಡ ಕಂಪನಿಯಾಗಿ ಹೊರಹೊಮ್ಮಿತ್ತು. 'ಎನ್ರಾನ್'ನ ಕಾರ್ಯ ವಿಧಾನವೇ ಅನುಮಾನಾಸ್ಪದವಾಗಿತ್ತು ಯಾವುದೆ ಉತ್ಪಾದನೆಯಲ್ಲಿ ತೊಡಗದ 'ಎನ್ರಾನ್' ವಿದ್ಯುತ್ ಉತ್ಪಾದಕ ಕಂಪನಿಗಳೊಂದಿಗೆ ಒಪ್ಪಂದಮಾಡಿಕೊಂಡು ಕಡಿಮೆ ಬೆಲೆಯಲ್ಲಿ ವಿದ್ಯುತ್ ಖರೀದಿಸಿ ಸರ್ಕಾರಗಳಲ್ಲಿನ ಅಧಿಕಾರಸ್ಥರಿಗೆ ಹಣ ನೀಡಿ ಹೆಚ್ಚಿನ ಬೆಲೆಗೆ ಕೊಳ್ಳುವಂತೆ ಮಾಡಲಾಗುತ್ತಿತ್ತು. ಇದಕ್ಕಾಗಿ ಕಾನೂನುಗಳನ್ನೇ ತಿರುಚಲಾಗುತ್ತಿತ್ತು. ಈ ವ್ಯವಹಾರದಲ್ಲಿ ಕೇವಲ ದಲ್ಲಾಳಿಯಾದ 'ಎನ್ರಾನ್' ಕೋಟ್ಯಾಂತರ ತೆರಿಗೆದಾರರ ಹಣವನ್ನು ಲೂಟಿ ಮಾಡುತ್ತಿತ್ತು. ಹಿಂದೆ ಭಾರತದಲ್ಲೂ 'ಎನ್ರಾನ್' ಇದೇ ಮಾದರಿಯ ವ್ಯವಹಾರಕ್ಕಿಳಿದು ವಿವಾದ ಹುಟ್ಟುಹಾಕಿದ್ದನ್ನು ಇಲ್ಲಿ ಸ್ಮರಿಸಬಹುದು. ಇದರ ಹಿಂದೆಯೇ 2001ರಲ್ಲಿ 'ಎನ್ರಾನ್' ಎಂಬ ಗಾಳಿಗೋಪುರ ಕುಸಿದುಬಿದ್ದು ದೀವಾಳಿಯಾಗಿ ತನ್ನ 20000 ನೌಕರನ್ನು ಬೀದಿಪಾಲು ಮಾಡಿತ್ತು. ಇದೆಲ್ಲದರ ನಡುವೆಯೂ ಕೋಟ್ಯಾಂತರ ಹಣ 'ಎನ್ರಾನ್' ಮಾಲೀಕರ ಪಾಲಾಗಿತ್ತು. ಈ ಭಾರೀ ವಂಚನೆಗೆ 'ಎನ್ರಾನ್'ನ ಕೆಲವು ಅಧಿಕಾರಿಗಳನ್ನಷ್ಟೇ ದೂಸಲಾಯ್ತು. ಆದರೆ ಭ್ರಷ್ಠ ಸರ್ಕಾರಗಳು, ಭ್ರಷ್ಠ ನ್ಯಾಯಾಲಯಗಳು, ಲೆಕ್ಕಿಗರು ಮತ್ತು ಬ್ಯಾಂಕುಗಳ ಬೆಂಬಲವಿಲ್ಲದೇ ಇದೆಲ್ಲ ಹೇಗೆ ಸಾಧ್ಯವಾಯ್ತು ಎಂಬುದು ಸೋಜಿಗ. ಒಟ್ಟಿನಲ್ಲಿ ತಲೆಪಾತಕರ ಸಂಭ್ರಮದಲ್ಲಿ ಮೂರ್ಖರಾದದ್ದು ಜನ ಸಾಮಾನ್ಯರು ಮಾತ್ರ.



ಲೆನಿನ್

ಎಚ್ಚರ! ಆತ ನಿರ್ವಿಕಾರ
ಎಂಜಿನಿಯರೆಂದು ಉರಿಬೆಂಕಿ
ಯೋಗಿಯೆಂದು
ತಪ್ಪು ತಿಳಿಯಬೇಡಿ, ಎಚ್ಚರ!

ಅವನ ಮನಸ್ಸು ಉರಿದದ್ದು ನಿಜ.
ಆದರೆ ಅದೆಂದೂ ಬೂದಿಯಾಗಲಿಲ್ಲ!

ಅವನ ಜ್ವಲಿಸುವ ಹೃದಯವನ್ನು
ತಣಿಸುವುದಾಗಲಿಲ್ಲ ಸಾವಿನಿಂದ.

ಲೆನಿನ್, ನಿನ್ನ ಕೈಗಳು ಕೆಲಸ
ಮಾಡುತ್ತಲೇ ಇದ್ದವು.

ಕ್ರಾಂತಿ

ಕೊನೆಗೆ
ದಿಗಂತದ ಅಗಲದಲ್ಲಿ
ಹೊಳೆಯುವ ಪ್ರತಿಮೆಯೊಂದೆದ್ದಿತು
ಮೂರ್ತಿಯ ಹಾಗೆ,
ರಕ್ತಮಯವಾಗಿತ್ತು ಅದು:

ಚಿಂದಿ ಬಟ್ಟೆ ಹೊದ್ದ ವಿಜಯ,
ಸೂರ್ಯ ಪ್ರಭೆಗಿಂತ ಸುಂದರ ಹೆಂಗಸು,
ಮೈಯೆಲ್ಲ ಗಾಯದ ಕಲೆ, ಹೊಗೆ
ಮುಸುಕಿದವಳು.
ಬಲು ದೂರ ದೇಶಗಳ ಜನ ತಲೆ ಎತ್ತಿ
ನೋಡಿಹರು:

ಹೌದು. ಆಕೆಯೇ, ನಿಸ್ಸಂದೇಹವಾಗಿ
ಅದು ಕ್ರಾಂತಿ.
ವಿಶ್ವದ ಹಳೆ ಹೃದಯ ಹೊಸ ತಾಳ
ಹಾಕಿತು.

ಪ್ಲಾಬ್ಲೊ ನೆರೂದ
ನೊಬೆಲ್ ಪ್ರಶಸ್ತಿ ಪುರಸ್ಕೃತ ಚಿಲಿ ಕವಿ
'ಮರಳಿ ಬರುವೆ' ಕವನ ಸಂಕಲನದಲ್ಲಿ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH